ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 4 ಭಾನುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 49 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾದ ಕೆ.ಹರೀಶ್‌ಗೌಡರನ್ನು ಮೈಸೂರು ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಬ್ರಿಗೇಡ್ ಅಧ್ಯಕ್ಷರಾದಂತಹ ಬಿ.ಸಂದೀಪ್, ಎಂ.ಬಿ.ರಾಮರಾಜ್, ಹೇಮಣ್ಣ ಅಭಿ ಹಾಗೂ ಸ್ನೇಹಿತರು ಉಪಸ್ಥಿತರಿದ್ದರು.

Promotional feature

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಕಾಡುಪ್ರಾಣಿಗಳ ಹಾವಳಿ ತಡೆಗೆ ಅಗತ್ಯ ಕ್ರಮಕ್ಕೆ ಆಗ್ರಹ

ಬೆಂಗಳೂರು, ಜೂ.3(ಕೆಎಂಶಿ)– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಸೇರಿದಂತೆ ರಾಮನಗರ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರಕಾರವನ್ನು ಒತ್ತಾಯ ಮಾಡಿದ್ದಾರೆ.

ಚನ್ನಪಟ್ಟಣ ಕ್ಷೇತ್ರದ ವಿರೂಪಸಂದ್ರ ಗ್ರಾಮದಲ್ಲಿ ಮಾವಿನ ತೋಟ ಕಾಯುತ್ತಿದ್ದ ವೀರಭದ್ರಯ್ಯ ಅವರು ಕಾಡಾನೆ ದಾಳಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆಯ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ಅವರು, ಕಾಡಂಚಿನಲ್ಲಿ ರೈತರು ಆತಂಕ, ಭಯದಿಂದ ಬದುಕುವಂತಾಗಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು. ವೈಜ್ಞಾನಿಕವಾಗಿ ಬೇಲಿ ನಿರ್ಮಾಣ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ.

ಅನೆ ದಾಳಿಯಿಂದ ರೈತ ವೀರಭದ್ರಯ್ಯ ಅವರು ಅಸುನೀಗಿದ ವಾರ್ತೆ ಕೇಳಿ ಬಹಳ ದುಃಖವಾಯಿತು. ಮೃತ ರೈತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಆ ಭಗವಂತ ಆ ಕುಟುಂಬಕ್ಕೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಅವರು ನೊಂದ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.



ಅರಣ್ಯ ಸಂರಕ್ಷಣೆ ಜತೆಗೆ ಕಾಡಿನ ಅಕ್ಕಪಕ್ಕ ಬೇಸಾಯ ಮಾಡುವ ರೈತರ ಹಿತವೂ ಮುಖ್ಯ. ರೈತಾಪಿ ಜನರ ಜೀವ ಅಮೂಲ್ಯ. ಈ ಕಾರಣಕ್ಕಾಗಿ ಅರಣ್ಯ ವಲಯದಲ್ಲಿ ವೈಜ್ಞಾನಿಕ ಬೇಲಿ ನಿರ್ಮಾಣ ಮಾಡಬೇಕು ಎಂದು ನಾನು ಅನೇಕ ಸಲ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದೇನೆ. ಈ ಬಗ್ಗೆ ಇನ್ನಷ್ಟು ವಿಳಂಬ ಮಾಡಬಾರದು ಎಂದು ಒತ್ತಾಯ ಮಾಡಿದ್ದಾರೆ.

ಚನ್ನಪಟ್ಟಣ ಮಾತ್ರವಲ್ಲದೆ, ರಾಮನಗರ ಜಿಲ್ಲೆಯ ನಾನಾ ಭಾಗಗಳಲ್ಲಿ ಜನರ ಮೇಲೆ ಕಾಡುಪ್ರಾಣಿಗಳು ದಾಳಿ ನಡೆಸುವ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಕೂಡಲೇ ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎನ್ನುವುದು ನನ್ನ ಆಗ್ರಹ ಎಂದು ತಿಳಿಸಿದ್ದಾರೆ.

ಸಚಿವರು ಈಗಾಗಲೇ ತಿಳಿಸಿರುವಂತೆ, ಕೂಡಲೇ ನೊಂದ ಕುಟುಂಬಕ್ಕೆ ಪರಿಹಾರ ಮೊತ್ತವನ್ನು ಹಸ್ತಾಂತರ ಮಾಡಬೇಕು ಹಾಗೂ ಕಾಡಂಚಿನಲ್ಲಿ ಎಲ್ಲಾ ಸುರಕ್ಷಿತ ಕ್ರಮಗಳನ್ನು ವಹಿಸಿ ಜನರ ಮೇಲೆ ಕಾಡುಪ್ರಾಣಿಗಳ ದಾಳಿ ಆಗದಂತೆ ಶಾಶ್ವತವಾಗಿ ತಡೆಯುವ ಎಲ್ಲಾ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಒತ್ತಾಯ ಮಾಡಿದ್ದಾರೆ.

ಕಾಂಗ್ರೆಸ್ ನೀಡಿದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸುವ ಅಭಿಯಾನ ನಡೆಸಿ

ಮೈಸೂರು,ಜೂ.3(ಎಂಟಿವೈ)–ದೇಶ ಹಾಗೂ ರಾಜ್ಯಕ್ಕೆ ಕಾಂಗ್ರೆಸ್ ನೀಡಿದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸುವ ಅಭಿಯಾನಕ್ಕೆ ಮುಂದಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಸಲಹೆ ನೀಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸಚಿವ ಕೆ.ವೆಂಕಟೇಶ್ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶ ಹಾಗೂ ರಾಜ್ಯಕ್ಕೆ ಕಾಂಗ್ರೆಸ್ ನೀಡಿರುವ ಕೊಡುಗೆ ಅಪಾರ. ಕಾಂಗ್ರೆಸ್ ಕಾರ್ಯಕರ್ತರು ಅಭಿಯಾನದ ಮಾದರಿಯಲ್ಲಿ ಜನರಿಗೆ ಗ್ಯಾರಂಟಿ ಯೋಜನೆಗಳ ಬಗ್ಗೆ ತಿಳಿಸುವ ಕೆಲಸ ಮಾಡಬೇಕು. ಅದಕ್ಕೆ ಮೈಸೂರಿಂದಲೇ ಚಾಲನೆ ಸಿಗಬೇಕು ಎಂದರು.

ಮಾಜಿ ಪ್ರಧಾನಿಗಳಾದ ಇಂದಿರಾಗಾಂಧಿ, ರಾಜೀವ್ ಗಾಂಧಿ ದೇಶಕ್ಕೆ ನೀಡಿರುವ ಕೊಡುಗೆ ಅಪಾರ. ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ, ದೇವರಾಜ ಅರಸ್, ಮಾಜಿ ಸಂಸದ ತುಳಸಿದಾಸಪ್ಪ, ಮೈಸೂರು ಭಾಗದ ನಾಯಕರಾದ ಬಿ.ರಾಜಪ್ಪ, ಎನ್.ರಾಚಯ್ಯ ಸೇರಿದಂತೆ ಇನ್ನು ಅನೇಕರು ಸ್ಮರಣೀಯ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ತಿ.ನರಸೀಪುರದ ಎನ್.ರಾಚಯ್ಯ ಅವರು ಅಂಗನವಾಡಿ ಸಂಸ್ಥಾಪಕರಾಗಿದ್ದಾರೆ. 1970ರಲ್ಲಿ ಇಂದಿರಾ ಗಾಂಧಿ ಪ್ರಧಾನಿ, ರಾಜ್ಯದಲ್ಲಿ ಡಿ.ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಎನ್.ರಾಚಯ್ಯ ಅವರು ಅಂಗನವಾಡಿ ಕೇಂದ್ರ ಸ್ಥಾಪಿಸಿದರು. ಅದನ್ನು ಇಂದಿರಾ ಗಾಂಧಿ ಅವರು ದೇಶದಾದ್ಯಂತ ವಿಸ್ತರಿಸಿದರು ಎಂದರು.

ರಾಹುಲ್ ಗಾಂಧಿ ಒಮ್ಮೆ ಬಿಳಿಗಿರಿರಂಗನಬೆಟ್ಟಕ್ಕೆ ಬಂದು ಡಾ.ಸುದರ್ಶನ್ ಆಸ್ಪತ್ರೆಗೆ ಭೇಟಿ ನೀಡಿದ್ದರು. ಅಲ್ಲಿ ಓರ್ವ ರೋಗಿ ಮಲಗಿದ್ದರು. ಅವರ ಬಳಿ ಹೋದಾಗ ರಾಹುಲ್ ಗಾಂಧಿ ಬಂದಿದ್ದಾರೆ ಎಂದಾಗಲು ಆ ರೋಗಿ ಸ್ಪಂದಿಸಲಿಲ್ಲ. ರಾಜೀವ್ ಗಾಂಧಿ ಅವರ ಮಗ ಬಂದಿದ್ದಾರೆ ಎಂದರೂ ಪ್ರತಿಕ್ರಿಯಿಸಲಿಲ್ಲ. ಕೊನೆಯದಾಗಿ ಇಂದಿರಾ ಗಾಂಧಿ ಮೊಮ್ಮಗ ಬಂದಿದ್ದಾರೆ ಎಂದ ಕೂಡಲೇ ಎದ್ದು ಕುಳಿತರು. ಹೀಗೆ ಸಾಕಷ್ಟು ಜನರ ಮನದಲ್ಲಿ ಇಂದಿರಾ ಗಾಂಧಿ ಜೀವಂತವಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಗ್ಯಾರಂಟಿ ಯೋಜನೆಯನ್ನು ರಾಜ್ಯವೇ ಸ್ವಾಗತಿಸಿದೆ: ಜನರಿಗೆ ನೀಡಿದ್ದ ಭರವಸೆಯಂತೆ ಕಾಂಗ್ರೆಸ್ 5 ಗ್ಯಾರಂಟಿ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಆ.15ರಲ್ಲಿ ಪರಿಪೂರ್ಣವಾಗಿಸಲು ಮುಂದಾಗಿದ್ದಾರೆ. ಈ ಕಾರ್ಯಕ್ರಮವನ್ನು ಇಡೀ ರಾಜ್ಯವೇ ಸ್ವಾಗತಿಸಿದೆ ಎಂದು ವಿಶ್ವನಾಥ್ ಹೇಳಿದರು.


ಕಾಂಗ್ರೆಸ್ ಕಚೇರಿಗೆ ಬಂತು 'ಹಳ್ಳಿಹಕ್ಕಿ'

ಕಾಂಗ್ರೆಸ್ ಪಕ್ಷದಿಂದ ಜೆಡಿಎಸ್ ಪಕ್ಷಕ್ಕೆ ಹೋಗಿ ಪ್ರಸ್ತುತ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಶನಿವಾರ ಮರಳಿ ಕಾಂಗ್ರೆಸ್ ಕಚೇರಿಗೆ ಬಂದು ಅಚ್ಚರಿ ಮೂಡಿಸಿದರು.

ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರಿಗೆ ಸಾಂಪ್ರದಾಯಿಕ ಸನ್ಮಾನ ಮಾಡಲು ಕಾಂಗ್ರೆಸ್ ಕಚೇರಿಯಲ್ಲಿ ಕಾಯುತ್ತಿದ್ದ ಕಾರ್ಯಕರ್ತರಿಗೆ ಎ.ಹೆಚ್.ವಿಶ್ವನಾಥ್ ಆಗಮನ ಆಶ್ಚರ್ಯವನ್ನುಂಟು ಮಾಡಿತು. ಸುದೀರ್ಘ ಅವಧಿ ಕಾಂಗ್ರೆಸ್‌ನಲ್ಲಿದ್ದ ವಿಶ್ವನಾಥ್ ಪಕ್ಷದ ಕಚೇರಿಗೆ ಆಗಮಿಸುತ್ತಿದ್ದಂತೆಯೇ ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಸ್ವಾಗತ ಕೋರಿದರು. ನಂತರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿಶ್ವನಾಥ್ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಕುಶಲೋಪರಿ ನಡೆಸಿದರು.

ರಾಜೀನಾಮೆ ಪ್ರಹಸನ ಬಿಚ್ಚಿಟ್ಟರು...

4 ದಶಕಗಳ ಒಡನಾಟ ಹೊಂದಿದ್ದ ಕಾಂಗ್ರೆಸ್‌ಗೆ ರಾಜೀನಾಮೆ ನೀಡಬೇಕಾದ ಪ್ರಸಂಗ ಒದಗಿ ಬಂತು. ನಮಗೆ ಏನೇ ಅಧಿಕಾರ ಇದ್ದರೂ ನಮ್ಮನ್ನು ನಿಯಂತ್ರಿಸುವುದು ಮನಸ್ಸು. ಆ ಮನಸ್ಸಿಗೆ ಘಾಸಿಯಾದಾಗ ನಿಯಂತ್ರಣ ಅಸಾಧ್ಯ. ಹೀಗಾಗಿ ಅಂದು ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ಅವರಿಗೆ ಕರೆ ಮಾಡಿ, ಮೆರವಣಿಗೆ ಮೂಲಕ ಕಾಂಗ್ರೆಸ್ ಕಚೇರಿಗೆ ಹೋಗಿ ರಾಜೀನಾಮೆ ನೀಡಿದೆ. ನನ್ನ ರಾಜೀನಾಮೆಯನ್ನು ಪರಮೇಶ್ವರ್ ಅವರು ಸ್ವೀಕರಿಸದೆ, ಪಕ್ಷದಲ್ಲೇ ಮುಂದುವರೆಯುವಂತೆ ಸಲಹೆ ನೀಡುತ್ತಾರೆ ಎಂದು ಭಾವಿಸಿದ್ದೆ. ಆದರೆ, ಪರಮೇಶ್ವರ್ ಯಾವುದೇ ಮಾತನಾಡದೇ ರಾಜೀನಾಮೆ ಪಡೆದರು. ಆದ ಕಾರಣ ಬೇರೆ ಪಕ್ಷ ಸೇರಬೇಕಾಯಿತು. ಕಳೆದ 6 ವರ್ಷಗಳಲ್ಲಿ ಬಹಳಷ್ಟು ತಿರುವುಗಳನ್ನು ನಾನು ಕಂಡಿದ್ದೇನೆ. ಕಾಂಗ್ರೆಸ್ ಬಿಟ್ಟು ಜೆಡಿಎಸ್, ಬಿಜೆಪಿಗೆ ಹೋಗಿ ಬಹಳಷ್ಟು ರಾಜಕೀಯ ಬೆಳವಣಿಗೆಗಳಿಗೆ ನಾನು ಕಾರಣನಾಗಿ ಹೋದೆ. 6 ವರ್ಷಗಳ ನಂತರ ಕಾಂಗ್ರೆಸ್ ಕಚೇರಿಗೆ ಬಂದಿದ್ದೇನೆ. ರಾಜಕಾರಣ ನಿಂತ ನೀರಲ್ಲ ಎಂದರು.



ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಉಚಿತ ತರಬೇತಿ

ಮೈಸೂರು, ಜೂ. 3–ನವೋದಯ ಫೌಂಡೇಷನ್ ವತಿಯಿಂದ ಇದೇ 6ರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಸ್.ಎಸ್.ಸಿ, ರೈಲ್ವೆ, ಎಂಬಿಎ, ಎಂಸಿಎ, ಪಿಜಿ ಸಿಇಟಿ ಪರೀಕ್ಷೆಗಳಿಗೆ ಉಚಿತ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ನವೋದಯ ಫೌಂಡೇಷನ್‌ನಲ್ಲಿ ಶಿಬಿರ ನಡೆಯಲಿದೆ. ಆಸಕ್ತರು ಮೊ.ಸಂ. 6364381776, 8105049244 ಸಂಪರ್ಕಿಸಬಹುದಾಗಿದೆ.



ಚಾಮರಾಜ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾದ ಹರೀಶ್‌ಗೌಡರನ್ನು ಅವರ ಪತ್ನಿ ಗೌರಿ ಸಹಿತ ಅಭಿನಂದಿಸಲಾಯಿತು. ಈ ವೇಳೆ ಜ್ಞಾನಪ್ರಕಾಶ್ ಸ್ವಾಮೀಜಿ, ಶ್ರೀನಿವಾಸ್, ಪುಷ್ಪಲತಾ ಚಿಕ್ಕಣ್ಣ, ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಷ್ಣಮೂರ್ತಿ, ಕೃಪಾ, ಕೃಷ್ಣ ಶ್ರೀಪಾಲ್, ಸುರೇಶ್, ಶಿವು ಮಾದೇಶ, ಶಿವು ಹಾಜರಿದ್ದರು.

ಮೈಸೂರಲ್ಲಿ ವಿಶ್ವ ಕ್ಲಬ್ ಫುಟ್ ದಿನ ಆಚರಣೆ

ಮೈಸೂರು,ಜೂ.3– ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್, ರೋಟರಿ ಮೈಸೂರು, ಕ್ಲಬ್ ಫುಟ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ) ಮತ್ತು ಜೆಎಸ್‌ಎಸ್ ವೈದ್ಯಕೀಯ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಶನಿವಾರ ಬೆಳಗ್ಗೆ ಇಲ್ಲಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿಶ್ವ ಕ್ಲಬ್ ಫುಟ್ ದಿನ (ವಕ್ರ ಪಾದ) ಆಚರಿಸಲಾಯಿತು.

ತಾಲಿಪ್ಸ್ ಈಕ್ವಿನೋವರಸ್ (CTEV) ಕುರಿತು ಸಾರ್ವಜನಿಕ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ, ಇದನ್ನು ಸಾಮಾನ್ಯವಾಗಿ 'ಕ್ಲಬ್ ಫುಟ್' ಎಂದು ಕರೆಯಲಾಗುತ್ತದೆ, ಇದು ಸಾಮಾನ್ಯ ಆದರೆ ಕಡಿಮೆ ಅಧ್ಯಯನ ಮಾಡಲಾದ ಪಾದದ ಬೆಳವಣಿಗೆಯ ಅಸ್ವಸ್ಥತೆಯಾಗಿದೆ.

ಡಾ.ಇಗ್ನಾಸಿಯೊ ಪೊನ್ಸೆಟಿ (3 ಜೂನ್ 1914–18 ಅಕ್ಟೋಬರ್ 2009) ಅವರ ಜನ್ಮದಿನದ ಸ್ಮರಣಾರ್ಥ ಆಯೋಜಿಸಲಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂಎಂಸಿ ಮತ್ತು ಡೀನ್, ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಣಿ ಅವರು ವಹಿಸಿ ಹಲವಾರು ಮಾಹಿತಿ ಹಂಚಿಕೊಂಡರು.



ವಕ್ರ ಪಾದ ಅಥವಾ ಕ್ಲಬ್ ಫುಟ್‌ನಿಂದ ಜನಿಸಿಕ ಮಕ್ಕಳಿಗೆ ನೀಡುವ ಚಿಕಿತ್ಸಾ ವಿಧಾನ ಪೊನ್ಸೆಟಿ ವಿಧಾನ ಎಂದು ಜನಿತವಾಗಿದೆ. ಈ ರೀತಿ ಜನಿಸಿದ ಮಕ್ಕಳಿಗೆ ಮೂಳೆಚಿಕಿತ್ಸೆಯ ಅಗತ್ಯವಿದೆ. ಇದಕ್ಕೆ ಪೊನ್ಸೆಟಿ ಅವರು ವಿಶೇಷ ಚಿಕಿತ್ಸಾ ಮಾದರಿ ಅನುಸರಿಸಿದ್ದಾರೆ. ಅದೀಗ ಜನಪ್ರಿಯವಾಗಿದೆ. ಕ್ಲಬ್ ಫುಟ್ ಚಿಕಿತ್ಸೆಯಲ್ಲಿ ಪೊನ್ಸೆಟಿ ಅವರ ಕಾರ್ಯ ವೈದ್ಯರಿಗೆ ಮಾರ್ಗದರ್ಶಿಯಾಗಿದೆ. ವಿಶ್ವಾದ್ಯಂತ ಲಕ್ಷಾಂತರ ಮಕ್ಕಳ ಜೀವನಕ್ಕೆ ದಾರಿದೀಪವಾಗಿದೆ. ಮೈಸೂರು ಆರ್ಥೋಪೆಡಿಕ್ ಅಸೋಸಿಯೇಶನ್‌ನ ಪದಾಧಿಕಾರಿಗಳು, ಎಂಎಂಸಿ ಮತ್ತು ಆರ್‌ಐ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಡಾ.ಆನಂದ್ ಸೇರಿದಂತೆ ಮೂಳೆ ವೈದ್ಯರು, ರೋಟರಿಯನ್ನರು ಮತ್ತು ನೂರಾರು ವಿದ್ಯಾರ್ಥಿಗಳು ಯಶಸ್ವಿಯಾಗಿ ಚಿಕಿತ್ಸೆ ಪಡೆದ ಮಕ್ಕಳು, ಪೋಷಕರು ಈ ಸಂದರ್ಭದಲ್ಲಿದ್ದರು.

ಮೊದಲ ದಿನ ಕೆಪಿಎಸ್‌ಸಿ ಪರೀಕ್ಷೆಗೆ 311 ಮಂದಿ ಗೈರು

ಮೈಸೂರು. ಜೂ.3(ಸಿಎನ್)–ಮುಖ್ಯ ವಿದ್ಯುತ್ ಪರಿವೀಕ್ಷಕರ ಹುದ್ದೆಗಳ ಭರ್ತಿಗಾಗಿ ನಡೆದ ಸಹಾಯಕ ವಿದ್ಯುತ್ ಪರಿವೀಕ್ಷಕರ ಕಡ್ಡಾಯ ಕನ್ನಡ ಪರೀಕ್ಷೆಯನ್ನು, ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನಡೆಸಲಾಯಿತು.

ಶನಿವಾರ (ಜೂನ್ 3)ದಂದು ನಡೆದ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪರೀಕ್ಷೆಗೆ, 367 ಮಂದಿ ನೋಂದಾಯಿತ ಪರೀಕ್ಷಾರ್ಥಿಗಳ ಪೈಕಿ ಕೇವಲ 54 ಮಂದಿ ಪರೀಕ್ಷೆ ಬರೆದಿದ್ದು, ಬರೋಬ್ಬರಿ 311 ಮಂದಿ ಪರೀಕ್ಷೆಯಿಂದ ದೂರ ಉಳಿದಿದ್ದಾರೆ. ಭಾನುವಾರ (ಜೂನ್ 4) ಮುಖ್ಯ ಹಾಗೂ ಸಹಾಯಕ ವಿದ್ಯುತ್ ಪರಿವೀಕ್ಷಕರ ಎರಡು ವಿಭಾಗದ ಸಾಮಾನ್ಯ ಜ್ಞಾನ ವಿಷಯದ ಪರೀಕ್ಷೆ ನಡೆಯಲಿದ್ದು, 811 ಪರೀಕ್ಷಾರ್ಥಿಗಳು ನೋಂದಾಯಿತರಾಗಿದ್ದಾರೆ.

ಪೊಲೀಸ್ ಬಂದೋಬಸ್ತ್: ಪರೀಕ್ಷಾ ಕೇಂದ್ರ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ 144 ಸೆಕ್ಷನ್ ನಿಷೇಧಾಜ್ಞೆ ಜಾರಿಯಲ್ಲಿದ್ದು, ಸೂಕ್ತ ಪೊಲೀಸ್ ಬಂದೋಬಸ್ತ್ ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರಕ್ಕೆ ಪರೀಕ್ಷಾರ್ಥಿಗಳು ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಾಮಿಕ ವ್ಯಕ್ತಿಗಳು ಸುಳಿಯದಂತೆ ಕಟ್ಟುನಿಟ್ಟಿನ ಆದೇಶ ಪಾಲಿಸಲಾಗುತ್ತಿದೆ. ಪರೀಕ್ಷಾ ಕೇಂದ್ರದ ಆಸುಪಾಸಿನಲ್ಲಿ ಜೆರಾಕ್ಸ್ ಅಂಗಡಿಗಳನ್ನು ತೆರೆಯದ ರೀತಿ ಖಾಕಿ ಕಣ್ಗಾವಲಿರಿಸಿದೆ.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿಯನ್ನು ಗೋಕುಲಂನ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಚರಿಸಲಾಯಿತು. ಈ ವೇಳೆ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಬಿ.ಶಿವು, ನಿರ್ದೇಶಕ ವಿ.ಮಧು, ವೆಂಕಟಾಚಲ, ಫಾಲ್ಕನ್ ಪ್ರಸನ್ನ, ಮೂಗೂರು ಆನಂದ್, ರಮೇಶ್, ಲೋಕನಾಯಕನಗರದ ಶ್ರೀನಿವಾಸಗೌಡ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಎಸ್.ಕೃಷ್ಣಕುಮಾರ, ಪ್ರಕಾಶ್, ಮಹೇಶ್ ಹಾಜರಿದ್ದರು.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿಯನ್ನು ಕರ್ನಾಟಕ ಸೇನಾಪಡೆ ವತಿಯಿಂದ ಆಚರಿಸಲಾಯಿತು. ಬಳಿಕ ಪ್ರವಾಸಿಗರಿಗೆ ಸಿಹಿ ಹಂಚಲಾಯಿತು. ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಸಿ.ಎಚ್.ಕೃಷ್ಣಯ್ಯ, ಶಾಂತರಾಜೇಅರಸು, ಎಂ.ಹೆಚ್.ಹನುಮಂತಯ್ಯ ಇನ್ನಿತರರು ಭಾಗವಹಿಸಿದ್ದರು.

ಸುಭಿಕ್ಷಾ ಕರ್ನಾಟಕ ಭಿಕ್ಷಾ ರಾಜ್ಯವಾಗಲಿದೆ

ಸಂಸದ ಪ್ರತಾಪ್ ಸಿಂಹ ಭವಿಷ್ಯ

ಮೈಸೂರು, ಜೂ.3(ಪಿಎಂ)– ಕಾಂಗ್ರೆಸ್ ಗ್ಯಾರಂಟಿಗಳ ಮೂಲಕ ಸುಭಿಕ್ಷಾ ರಾಜ್ಯವಾಗಿರುವ ಕರ್ನಾಟಕವನ್ನು ಭಿಕ್ಷಾ ರಾಜ್ಯವಾಗಿ ಮಾಡುವ ಎಲ್ಲಾ ಉದ್ದೇಶವನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನವರು ಹೊಂದಿದ್ದಾರೆ. ಇದು ಅವರ ವರ್ತನೆಯಿಂದ ಸ್ಪಷ್ಟವಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದರು.



ಮೈಸೂರು ಜಿಪಂ ಆವರಣದಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಗ್ಯಾರಂಟಿಗಳಿಗೆ ಕಾಲಮಿತಿ ಹಾಕಿಕೊಂಡು ತಳ್ಳುತ್ತಿದ್ದಾರೆ. ಕಾಂಗ್ರೆಸ್‌ನ ಈ ನೀತಿಗಳು ರಾಜ್ಯವನ್ನು ದಿವಾಳಿಗೆ ತಳ್ಳಿ ರಾಜ್ಯ ಜನತೆಯ ಭವಿಷ್ಯಕ್ಕೆ ಕಗ್ಗತ್ತಲು ಕವಿಯಲಿದೆ. ಸದ್ಯದಲ್ಲೇ ಎಲ್ಲಾ ಬೆಲೆಗಳು ಏರಿಕೆಯಾಗಲಿವೆ. ಈಗ ಬಸ್‌ನಲ್ಲಿ ಮಹಿಳೆಯರಿಗೆ ಪ್ರಯಾಣ ಉಚಿತವಾದರೆ ಪುರುಷರಿಗೆ ದುಬಾರಿಯಾಗಲಿದೆ. ಮದ್ಯದ ಬೆಲೆ ಹೆಚ್ಚಳ ಮಾಡುತ್ತಾರೆ. ಆಸ್ತಿ ನೋಂದಣಿ ಮೌಲ್ಯ ಶುಲ್ಕವೂ ಹೆಚ್ಚಳವಾಗಲಿದೆ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯನವರು ತಮ್ಮ ಮನೆಯಿಂದ ತಂದು ಜನರ ಮನೆ ಉದ್ಧಾರ ಮಾಡಲ್ಲ. ಒಂದಷ್ಟು ಜನರಿಂದ ಕಿತ್ತುಕೊಂಡು ಮತ್ತೊಂದಷ್ಟು ಜನಕ್ಕೆ ಕೊಡುತ್ತಾರೆ. ಇದರಿಂದ ರಾಜ್ಯ ಅವನತಿಯತ್ತ ಸಾಗುವ ಮೂಲಕ ಶ್ರೀಲಂಕಾ, ಬಾಂಗ್ಲಾ ದೇಶದ ರೀತಿಯಲ್ಲಿ ಆಗಿ ಜನ ಬೀದಿಗೆ ಬರುವ ಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣವಾಗಲಿದೆ ಎಂದು ತಿಳಿಸಿದರು.

ಮೋದಿಯವರಿಂದ ಜನತೆಗೆ ತಲಾ 15 ಲಕ್ಷ ಕೊಡಿಸಲಿ ಎಂದು ಕಾಂಗ್ರೆಸಿಗರು ಹೇಳುತ್ತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಕಪ್ಪು ಹಣದ ಪ್ರಮಾಣವು ಪ್ರತಿಯೊಬ್ಬರಿಗೆ ಸಂಬಂಧಿಸಿದಂತೆ 15ರಿಂದ 20 ಲಕ್ಷವರೆಗೆ ದೇಶದಿಂದ ಲೂಟಿ ಹಾಕಿದೆ ಎಂದು ಮೋದಿಯವರು ಹೇಳಿರುವುದಾಗಿದೆ. ಅವರು ಖಾತೆಗೆ ತಂದು ಹಾಕುತ್ತೇವೆ ಎಂದು ಹೇಳಿರಲಿಲ್ಲ. ಸಿದ್ದರಾಮಯ್ಯ ಅವರ ಆರೋಪವನ್ನು ತೆಗೆದುಕೊಂಡರೂ 2014ರಲ್ಲಿ ಲೋಕಸಭೆಯಲ್ಲಿ 282 ಸ್ಥಾನ ಗೆದ್ದೆವು. 2019ರಲ್ಲಿ 303 ಗೆದ್ದೆವು. ಮೋದಿ ಅವರು ಏನು ಹೇಳಿದ್ದಾರೆ ಎಂದು ಜನರಿಗೆ ಗೊತ್ತು. ಅಂತೆಯೇ 2024ರಲ್ಲಿಯೂ ತೀರ್ಪು ಕೊಡುತ್ತಾರೆ. ಈಗ ನಿಮ್ಮ ಮುಖ ನೋಡಿ ಜನ ಓಟು ಕೊಟ್ಟಿಲ್ಲ. ನಿಮ್ಮ ಗ್ಯಾರಂಟಿ ನೋಡಿ ಓಟು ಕೊಟ್ಟಿದ್ದಾರೆ ಎಂದು ಕಿಡಿಕಾರಿದರು. ಕರ್ನಾಟಕ ಮಾಡೆಲ್ ಎಂದು ಕಾಂಗ್ರೆಸ್‌ನಿಂದ ಜಾಹೀರಾತಿ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, ಬೇರೆ ಬೇರೆ ರಾಜ್ಯದಲ್ಲಿ ಮಾಡಿ ಜನರಿಂದ ಓಟು ತೆಗೆದುಕೊಂಡು ಬಳಿಕ ಈಡೇರಿಸಲಾಗದೇ ಒದ್ದಾಡುತ್ತಿರುವ ಮಾಡೆಲ್ ರಾಜ್ಯಕ್ಕೆ ಪರಿಚಯಿಸಿದ್ದಾರೆ. 13 ಬಜೆಟ್ ಮಂಡಿಸಿರುವ ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞರಾದ ಸಿದ್ದರಾಮಯ್ಯ ಅಮು ಈ ಗ್ಯಾರಂಟಿಗಳಿಗೆ ಯಾವ್ಯಾವ ಮೂಲದಿಂದ ಹಣ ತರುತ್ತಾರೆ ಎಂದು ಹೇಳಿಲಿ ಎಂದು ಸವಾಲು ಹಾಕಿದರು.

ಸಿದ್ದರಾಮಯ್ಯರೊಂದಿಗೆ ರಾಜ್ಯ ವಕೀಲರ ಮಂಡಳಿ ಮಾತುಕತೆ

ಬೆಂಗಳೂರು,ಜೂ.3(ಕೆಎಂಶಿ)–ಕರ್ನಾಟಕ ವಕೀಲರ ಮಂಡಳಿ ಅಧ್ಯಕ್ಷ ಎಚ್.ಎಲ್. ವಿಶಾಲ ರಘು ಹಾಗೂ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಸೌಹಾರ್ದಯುತ ಮಾತುಕತೆ ನಡೆಸಿದರು.



ರಾಜಸ್ಥಾನದಲ್ಲಿ ವಕೀಲರ ರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದಿದ್ದು, ರಾಜ್ಯದಲ್ಲೂ ಈ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಕಾಯ್ದೆಯ ಪ್ರತಿಯನ್ನು ತರಿಸಿಕೊಂಡು ಅಧ್ಯಯನ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ವಕೀಲರ ಸಂಘಕ್ಕೆ ಶಾಶ್ವತವಾದ ಸ್ಥಳವಿಲ್ಲವಾಗಿದ್ದು, ಪ್ರಸ್ತುತ ಪ್ರೆಸ್ ಕ್ಲಬ್ ಬಳಿ ಇರುವ ಸ್ಥಳದಲ್ಲಿಯೇ ಶಾಶ್ವತವಾಗಿ ಸ್ಥಳಾವಕಾಶ ಮಾಡಿಕೊಡುವಂತೆ ಸಿಎಂಗೆ ಮನವಿ ಮಾಡಿದರು.




ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಉಪಾಧ್ಯಕ್ಷರಾಗಿ ಟಿ.ಗೋವಿಂದೇಗೌಡ ಅವಿರೋಧವಾಗಿ ಆಯ್ಕೆಯಾದರು.

ಪರಿಶಿಷ್ಟ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ


ಮೈಸೂರು, ಜೂ.3– ಪರಿಶಿಷ್ಟ ಜಾತಿ/ವರ್ಗ ಹಿಂದುಳಿದ ಅಲ್ಪಸಂಖ್ಯಾತ ಕಾರ್ಮಿಕ ಸಂಘಗಳ ಒಕ್ಕೂಟದ ವತಿಯಿಂದ ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. 2022–23ನೇ ಸಾಲಿನಲ್ಲಿ ಶೇ.90ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ಅಂಕಪಟ್ಟಿ ನಕಲು, ಪೂರ್ಣವಿಳಾಸ, ದೂರವಾಣಿ ವಿವರ ಸಹಿತ ಅರ್ಜಿಯನ್ನು ಸಲ್ಲಿಸಬೇಕಾಗಿದೆ. ಅರ್ಜಿ ಸಲ್ಲಿಸುವ ವಿಳಾಸ: ನಂ.392, ಭೈರವೇಶ್ವರ ರಸ್ತೆ, ನಾಯಕರ ಬೀದಿ, ಹಿನಕಲ್ (ಮಾರಿಗುಡಿ ಹತ್ತಿರ) ಮೈಸೂರು ಇಲ್ಲಿಗೆ ಜೂನ್ 15ರೊಳಗೆ ತಲುಪಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಿಮಾ ಜುವೆಲ್ಸ್ ವತಿಯಿಂದ ಉಚಿತ ಸಸಿ ವಿತರಣೆ

ಮೈಸೂರು, ಜೂ.3–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಇದೇ ಸೋಮವಾರಂದು ಭಿಮಾ ಜುವೆಲ್ಸ್ ವತಿಯಿಂದ ಉಚಿತ ಸಸಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಗರದ ಬಸ್ ನಿಲ್ದಾಣದ ಎದುರಿನ ಇ.ಎನ್.ರಸ್ತೆಯಲ್ಲಿರುವ ಭಿಮಾ ಜುವೆಲ್ಸ್‌ನಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಗುತ್ತಿದೆ. ಸಾರ್ವಜನಿಕರು, ಗ್ರಾಹಕರಿಗೆ ಉಚಿತ ಸಸಿ ವಿತರಿಸಲಾಗುವುದು. ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಿಸಲು ಹಾಗೂ ಹಸಿರು ವಲಯ ಹೆಚ್ಚಿಸಲು ಸಂಸ್ಥೆ ವತಿಯಿಂದ ಅಳಿಲು ಸೇವೆ. ಇದಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಸಂಸ್ಥೆ ಪ್ರಕಟಣೆ ತಿಳಿಸಿದೆ. ಸಸಿ ಪಡೆಯಲು ಇಚ್ಚಿಸುವವರು 9448738811, 9916129651 ಸಂಖ್ಯೆಗೆ ಕರೆ ಮಾಡಿ, ನೋಂದಾಯಿಸಿಕೊಳ್ಳಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆ.



ಮೈಸಿರಿ–2023 ಕಾಲೇಜು ವಾರ್ಷಿಕೋತ್ಸವ



ಮೈಸೂರು, ಜೂ.3– ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ (ಮೈಸೆಮ್) ಕಾಲೇಜಿನ ವಾರ್ಷಿಕೋತ್ಸವ ಮೈಸಿರಿ–2023 ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿಟಿಯು ರೀಜನಲ್ ಆಫೀಸರ್ ಡಾ.ಟಿ.ಪಿ.ರೇಣುಕಾ ಮೂರ್ತಿ ಉಪಸ್ಥಿತರಿದ್ದರು. ಜ್ಞಾನವಾಹಿನಿ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಶಿವಪ್ಪ, ಪೂರ್ಣಿಮಾ ಕಿರಣ್, ಪ್ರೊ.ಮಂಜುನಾಥ್, ಡಾ.ಎಂ.ಎಸ್.ಪ್ರಭುಸ್ವಾಮಿ, ಪ್ರಾಂಶುಪಾಲರು, ಬೋಧಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಾರ್ಷಿಕೋತ್ಸವ ಅಂಗವಾಗಿ ಕ್ರಿಕೆಟ್, ಥ್ರೋಬಾಲ್, ಹಾಡುಗಾರಿಕೆ, ನೃತ್ಯ ನಾಟಕ ಆಯೋಜಿಸಲಾಗಿತ್ತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.6.2023 ಭಾನುವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅರಸು ಮಂಡಳಿ ಸಂಘ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ವರ್ಧಂತ್ಯೋತ್ಸವ, ಉದ್ಘಾಟನೆ: ಪ್ರಮೋದಾದೇವಿ ಒಡೆಯರ್, ಅಧ್ಯಕ್ಷತೆ: ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಶಾಸಕ ಶ್ರೀವತ್ಸ, ಕಾರ್ಪೊರೇಟರ್ ಬಿ.ವಿ. ಮಂಜುನಾಥ್, ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎನ್. ನಿರಂಜನರಾಜೇ ಅರಸ್, ಸ್ಥಳ: ಅರಸು ಮಂಡಳಿ ಸಂಘ, ಸಮಯ: ಬೆಳಗ್ಗೆ 8.30.

■ **ಜಿಲ್ಲಾ ಕಸಾಪ, ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್, ಹಿಮಾಲಯ ಪ್ರತಿಷ್ಠಾನ, ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ :** ರಾಜ್ಯ ಮಟ್ಟದ ಮಟ್ಟದ ಮುಕ್ತಕ ಕವಿಗೋಷ್ಠಿ, ಅಧ್ಯಕ್ಷತೆ: ಮೈಸೂರು ಡಯಟ್ ಹಿರಿಯ ಉಪನ್ಯಾಸಕ ಎನ್. ಸ್ವಾಮಿ, ಬೆಳಗ್ಗೆ 11.30ಕ್ಕೆ ಕೃತಿ ಬಿಡುಗಡೆ, ಉದ್ಘಾಟನೆ: ಶಾಸಕ ಶ್ರೀವತ್ಸ, ಮಧ್ಯಾಹ್ನ 2.30ಕ್ಕೆ ವಿಚಾರಗೋಷ್ಠಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಡಾ. ಸಿಪಿಕೆ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ ಮೊದಲ ಹಂತ.

■ **ಭಾರತೀಯ ವಿದ್ಯಾರ್ಥಿ ಸಂಘ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆ, ಉದ್ಘಾಟನೆ: ಪ್ರೊ. ಎನ್.ಎಂ. ತಳವಾರ್, ಅಧ್ಯಕ್ಷತೆ: ಸಾಹಿತಿ ಸೋಸಲೆ ಗಂಗಾಧರ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸ ಗಂಗೋತ್ರಿ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಸವಿತಾ ರವಿಶಂಕರ್, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 ಬದುಕು ಮಣ್ಣಿನೊಂದಿಗೆ 'ಬಾನುಲಿ ಸರಣಿ' ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ 'ಕನ್ನಡ ಪದಗಳ ಬಳಕೆ' ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, ಪ್ರಸ್ತುತಿ– ಡಾ. ಶ್ರೀಧರ್ ಹೆಗಡೆ ಭದ್ರನ್, 9.45 ನಮ್ಮ ಆರೋಗ್ಯ: ಮಕ್ಕಳಲ್ಲಿ ಕಂಡು ಬರುವ ಸಂಧಿವಾತ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಾಬಲೇಶ್ವರ ಮಮದಾಪುರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ– ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ– ನಾನು ಮತ್ತು ಪರಿಸರ ಕುರಿತು ಮಕ್ಕಳ ಪ್ರಶ್ನೆಗೆ ಉತ್ತರಿಸಿದ್ದಾರೆ, ಪರಿಸರ ಪ್ರೇಮಿ 'ಮನು' ಭಾಗವಹಿಸಿದ್ದಾರೆ– ಮಕ್ಕಳು: ಲಾಸ್ಯ ಮತ್ತು ಆಕಾಂಕ್ಷಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ: ಕೆಂಪಮ್ಮ ಮತ್ತು ತಂಡ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆಗಳು: ಎಂ.ಎಸ್. ಶೀಲಾ, 3.45 ಯಕ್ಷಗಾನ: ತಾಳಮದ್ದಲೆ ಪ್ರಸಂಗ– ಮಹಿರಾವಣ ಕಾಳಗ, ಪ್ರಸ್ತುತಿ– ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು.

ಸಂಜೆ: 4.45 ಚಟ್ ಪಟ್ ಚುರುಮುರಿ: ಪ್ರಸ್ತುತಿ:–ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ.ಮೀನಾ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಪ್ರಾಯೋಜಕರು ಪಶುಪಾಲನೆ ಹಾಗೂ ಪಶು ವೈದ್ಯಕೀಯ ಸೇವೆಗಳ ಇಲಾಖೆ, ಮೈಸೂರು ಜಿಲ್ಲೆ, ಮೃಗಾಲಯ ವನ್ಯಜೀವಿಗಳ ಪರಿಪಾಲನೆ ಈ ಬಗ್ಗೆ ಮೈಸೂರು ಜಿಲ್ಲೆ, ಕೆ.ಆರ್. ನಗರದ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಜಿ.ಶಾಂತ ಕುಮಾರ್. **ರಾತ್ರಿ:** 8.00 ವಿಶಿಷ್ಟ ವ್ಯಕ್ತಿ: ವಿಶೇಷ ಯತ್ನ ಬಾನುಲಿ ಸರಣಿ: ರಾಜಮಾತೆ ಮೈಸೂರಿನ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರೊಂದಿಗೆ ಸಂವಾದ ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.15 ರಂಗಗೀತೆಗಳು: ಗುಲೇಬಕಾವಲಿ ನಾಟಕದ ಹಾಡುಗಳು, 9.30 ಚಿತ್ರಗೀತೆಗಳು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಶೋಭಿತ್ ಕುಮಾರ್ ನಹರ– ಸೀತಾರ್.

■ **ತನುಮನ ಸಂಸ್ಥೆ:** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಡಾ.ಕೃಷ್ಣಮೂರ್ತಿ ಚಮರಂ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಸಂಜೆ 6ಕ್ಕೆ.

■ **ರಂಗಾಯಣ :** ಚಂದ್ರಗಿರಿ ತೀರದಲ್ಲಿ ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6.30ಕ್ಕೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

G20 ONE EARTH • ONE FAMILY • ONE FUTURE

5 ನುಡಿದಂತೆ ನಡೆದಿದ್ದೇವೆ

ಈಡೇರಿದ ಐದು ಭರವಸೆ



ಉಚಿತ ಈಗ 'ಖಚಿತ'

ಐದು ಗ್ಯಾರಂಟಿ ಯೋಜನೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿ **ಶ್ರೀ ಸಿದ್ದರಾಮಯ್ಯ** ಅವರ ನೇತೃತ್ವದ ಸರ್ಕಾರ ಜಾರಿಗೆ ತಂದು ನುಡಿದಂತೆ ನಡೆದಿದೆ. ಸರ್ವಜನಾಂಗದ ಕಲ್ಯಾಣಕ್ಕಾಗಿ ಜಾರಿಗೊಳ್ಳಲಿರುವ ಈ ಯೋಜನೆಗಳು ನಾಡಿನ ಪ್ರತಿಯೊಂದು ಕುಟುಂಬದ ಸಂಕಷ್ಟಗಳ ಹೊರೆಯನ್ನು ತುಸು ಹಗುರಗೊಳಿಸಬಹುದೆಂಬ ನಿರೀಕ್ಷೆ ರಾಜ್ಯ ಸರ್ಕಾರದ್ದು. ಲಿಂಗ, ಜಾತಿ-ಧರ್ಮ, ಮತ ಬೇಧವಿಲ್ಲದೆ ರಾಜ್ಯದ ಎಲ್ಲಾ ಜನರಿಗೂ ಈ ಯೋಜನೆಗಳು ಅನ್ವಯ. ಅಧಿಕಾರಕ್ಕೆ ಬಂದ ತಿಂಗಳ ಒಳಗೆ ಇಷ್ಟೊಂದು ಯೋಜನೆಗಳನ್ನು ಜಾರಿಗೊಳಿಸಿ ಕರ್ನಾಟಕ ಸರ್ಕಾರ ಇತಿಹಾಸ ನಿರ್ಮಿಸಿದೆ. "ನುಡಿದಂತೆ ನಡೆದಿದ್ದೇವು, ನುಡಿದಂತೆ ನಡೆಯುವೆವು" ಇದು **ಕರ್ನಾಟಕ ಮಾದರಿ** ಆಡಳಿತ. ಈಗ ಇಡೀ ದೇಶ ಕರ್ನಾಟಕದ ಕಡೆ ಹೆಮ್ಮೆಯಿಂದ ನೋಡುತ್ತಿದೆ.



ಗ್ಯಾರಂಟಿ ಯೋಜನೆಗಳ ಜಾರಿ ಬಗ್ಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಅವರೊಂದಿಗೆ ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಮತ್ತು ಮಾನ್ಯ ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್ ಮತ್ತು ಸಚಿವ ಸಂಪುಟದ ಸದಸ್ಯರು ಭಾಗವಹಿಸಿರುವುದು.



ಉಚಿತ ಪ್ರಯಾಣ ನಮ್ಮ ಪ್ರಮಾಣ

ಮಹಿಳೆಯರಿಗೆ ಬಸ್ ಸಂಚಾರ ಉಚಿತ

ವಿದ್ಯಾರ್ಥಿನಿಯರು ಮತ್ತು ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ರಾಜ್ಯದೊಳಗೆ 'ಶಕ್ತಿ' ಯೋಜನೆಯಡಿ ಉಚಿತ ಪ್ರಯಾಣಕ್ಕೆ ಜೂನ್ 11 ರಿಂದಲೇ ಅವಕಾಶ.



ಅನ್ನಭಾಗ್ಯ

10kg ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಪ್ರತಿ ಕುಟುಂಬದ ಪ್ರತಿ ವ್ಯಕ್ತಿಗೆ, ಪ್ರತಿ ತಿಂಗಳು 10 ಕೆಜಿ ಅಕ್ಕಿ ಉಚಿತ ನೀಡುವ 'ಅನ್ನ ಭಾಗ್ಯ' ಯೋಜನೆ ಜುಲೈ 1 ರಿಂದ ಜಾರಿ.



ಗೃಹಜ್ಯೋತಿ

ನಿಮ್ಮ ಮನೆಗೆ 200 ಯೂನಿಟ್ ವಿದ್ಯುತ್ ಉಚಿತ

ವಾರ್ಷಿಕ ಸರಾಸರಿ ಆಧಾರದ ಮೇಲೆ ಗರಿಷ್ಠ 200 ಯೂನಿಟ್ ವರೆಗೆ ಪ್ರತಿ ಮನೆಗೆ ವಿದ್ಯುತ್ ಉಚಿತ ನೀಡುವ 'ಗೃಹಜ್ಯೋತಿ' ಯೋಜನೆ ಜುಲೈ 1 ರಿಂದ ಜಾರಿ.



ಗೃಹಲಕ್ಷ್ಮಿ

ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಬಿಪಿಎಲ್ ಮತ್ತು ಎಪಿಎಲ್ ಕುಟುಂಬದ ಮನೆಯೊಡತಿಗೆ ಪ್ರತಿ ತಿಂಗಳು 2000 ರೂ. ನೀಡುವ 'ಗೃಹಲಕ್ಷ್ಮಿ' ಯೋಜನೆ ಆಗಸ್ಟ್ 15 ರಿಂದ ಜಾರಿ.



ಯುವನಿಧಿ

ಪ್ರತಿ ತಿಂಗಳು ನಿರುದ್ಯೋಗ ಭತ್ಯೆ

₹3000 ಪದವೀಧರರಿಗೆ

₹1500 ಡಿಪ್ಲೋಮಾ ಪದವೀಧರರಿಗೆ

2022-23 ರಲ್ಲಿ ಉತ್ತೀರ್ಣರಾದ ಪದವೀಧರ ನಿರುದ್ಯೋಗಿಗಳಿಗೆ 'ಯುವ ನಿಧಿ' ಯೋಜನೆಯಡಿ ಪ್ರತಿ ಮಾಹೆ 3000 ರೂ. ಮತ್ತು ಡಿಪ್ಲೋಮಾದಾರರಿಗೆ 1500 ರೂ. ನಂತೆ 24 ತಿಂಗಳು ನಿರುದ್ಯೋಗ ಭತ್ಯೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ನಕ್ಕರೆ ಅದೇ ಸ್ವರ್ಗ

ರಮಾ : ನನ್ನತ್ತೆ ಬಹಳ ಕೆಟ್ಟವಳು ಕಣೇ, ಸ್ವಲ್ಪ ಉಪ್ಪು ಜಾಸ್ತಿ ಹಾಕಿದ್ದಕ್ಕೆ ಸಿಕ್ಕಾಪಟ್ಟೆ ಬಂಯ್ದುಬಿಟ್ರು!

ಉಮಾ : ನೀನು ಯಾವ ಅಡುಗೆಗೆ ಉಪ್ಪು ಜಾಸ್ತಿ ಹಾಕಿದ್ದು, ಪಲ್ಯಕ್ಕೋ..., ಸಾಂಬಾರಿಗೋ...?

ರಮಾ : ಎರಡಕ್ಕೂ ಅಲ್ಲ. ಪಾಯಸಕ್ಕೆ ಸ್ವಲ್ಪ ಉಪ್ಪು ಜಾಸ್ತಿ ಹಾಕಿಬಿಟ್ಟೆ, ಅಷ್ಟಕ್ಕೇ ಹಿಗ್ಗಾ-ಮುಗ್ಗಾ ಬಯ್ದು ಬಿಡೋದಾ...!

ಮೈಸೂರು ಮಿತ್ರ

ಭಾನುವಾರ, 4 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಹಿಂಸೆ ಎಂದಿಗೂ ನಮ್ಮ ಗುರಿಯನ್ನು ಸಾಧಿಸಲಾರದು. – ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ

ನಿಮ್ಮ ಪತ್ರಗಳು

ನಾನಾ ಬಿಲ್, ವಸ್ತುಗಳ ಬೆಲೆಗಳ ಕಡಿಮೆ ಮಾಡಿದ್ದರೆ ಗಂಡಸರಿಗೂ ನ್ಯಾಯ ದೊರಕುತ್ತಿತ್ತು

ಮಾನ್ಯರೆ,

ಮತ ಬೇಟೆಗಾಗಿ ಚುನಾವಣೆ ಸಮಯದಲ್ಲಿ ಐದು ಗ್ಯಾರಂಟಿಗಳನ್ನು ನೀಡಿತ್ತು. ಈಗ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಮೇಲೆ ಗ್ಯಾರಂಟಿಗಳನ್ನು ಜಾರಿಗೊಳಿಸುತ್ತಿದೆ. ಧನ್ಯವಾದಗಳು, ಆದರೆ ಇದು ದುರುಪಯೋಗ ಹಾಗೂ ದುಂದುವೆಚ್ಚಕ್ಕೆ ಕಾರಣವಾಗುತ್ತಿದೆ. ಶಕ್ತಿ ಯೋಜನೆ ಎಂದು ಮಹಿಳೆಯರಿಗೆ ಉಚಿತ ಪ್ರಯಾಣ, ಬಸ್ಸಿನಲ್ಲಿ ಪ್ರಯಾಣ ಮಾಡುವ ಮಹಿಳೆಯರಿಗೆ ಮಾತ್ರ ಉಪಯೋಗವಾಗುತ್ತದೆ. ಮತ್ತು ಉಚಿತ ಎಂದು ಮಹಿಳೆಯರು ಓಡಾಡುವುದು ಜಾಸ್ತಿ ಆಗಬಹುದು. ಇದರಿಂದ ಖರ್ಚು ಜಾಸ್ತಿಯಾಗುತ್ತದೆ ವಿನಹ ಕಡಿಮೆ ಆಗುವುದಿಲ್ಲ. ಐದು ಗ್ಯಾರಂಟಿಗಳನ್ನು ನೀಡುವ ಬದಲು ಎಲ್ಲಾ ವರ್ಗಕ್ಕೂ ಅನುಕೂಲವಾಗುವಂತೆ ಸಿಲಿಂಡರ್ ಬೆಲೆ, ಬಸ್ ಚಾರ್ಜ್, ಕರೆಂಟ್ ಬಿಲ್, ದಿನಸಿ ಪದಾರ್ಥಗಳ ಮತ್ತು ಔಷಧಿಗಳ ಬೆಲೆ ಕಡಿಮೆ ಮಾಡಿದ್ದರೆ ಒಳ್ಳೆಯದಾಗಿತ್ತು. ಆಗ ಗಂಡಸರಿಗೂ ನ್ಯಾಯ ದೊರಕುತ್ತಿತ್ತು. ಗ್ಯಾರಂಟಿಗಳನ್ನು ಈಡೇರಿಸುವ ಭರದಲ್ಲಿ ರಾಜ್ಯದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಈ ಭರವಸೆಗಳು ಎಂದಿಗೂ ಶಾಶ್ವತವಲ್ಲ. ಮೂಲಭೂತ ಸೌಲಭ್ಯಗಳನ್ನೇ ಪಡೆಯದೆ ಇಂದಿಗೂ ಗ್ರಾಮೀಣ ಪ್ರದೇಶದ ಜನತೆ ಹೋರಾಟದ ಜೀವನ ನಡೆಸುತ್ತಿದ್ದು, ಇಂತಹ ಗ್ಯಾರಂಟಿಗಳು ಅನಾವಶ್ಯಕ.

– ರೂಪ .ಎಂ, ಸೋಮನಾಥನಗರ, ದಟ್ಟಗಳ್ಳಿ ಮೈಸೂರು

ಟ್ರಿನ್ ಟ್ರಿನ್ ಟ್ರಿನ್

ಮಾನ್ಯರೆ,

ಪ್ರತಿ ವರ್ಷದ ಜೂನ್ 3 ರಂದು "ವಿಶ್ವ ಬೈಸಿಕಲ್ ದಿನಾಚರಣೆ"ಯನ್ನು ಆಚರಿಸಲಾಗುತ್ತದೆ.

ಅಂದ ಹಾಗೆ ಬಡವರ ಆಧಾರಿ ಅಥವಾ ಸವಾರಿಯಾಗಿರುವ ಬೈಸಿಕಲ್ಲುಗಳಿಗೆ ನೂರಾರು ವರ್ಷಗಳ ಸುದೀರ್ಘ ಇತಿಹಾಸವೇ ಇದೆ. ಅಷ್ಟೇ ಏಕೆ ಕೇವಲ 50 ವರ್ಷಗಳ ಹಿಂದೆ ಪ್ರತಿಯೊಬ್ಬರ ಮನೆಗಳಲ್ಲೂ ಬೈಸಿಕಲ್ಲುಗಳು ಇರುತ್ತಿದ್ದವು. ಶಾಲೆಗಳಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಹಾಗೂ ಜನ ಸಾಮಾನ್ಯರಿಗೆ ಬೈಸಿಕಲ್ ಅನಿವಾರ್ಯವಾಗಿತ್ತು. ಹಿಂದೆಲ್ಲಾ ಪೋಸ್ಟ್‌ಮನ್‌ಗಳು ಬೈಸಿಕಲ್ಲುಗಳಲ್ಲೇ ಊರೆಲ್ಲಾ ಸುತ್ತಿ ಕಾಗದ ಪತ್ರಗಳನ್ನು ಅಥವಾ ಇನ್ನಿತರ ಅಂಚೆ ವಸ್ತುಗಳನ್ನು ಸಂಬಂಧಪಟ್ಟವರಿಗೆ ನೀಡುತ್ತಿದ್ದರು.

ಈಗಲೂ ಸಹ ಅನೇಕ ಪೋಸ್ಟ್‌ಮನ್‌ಗಳು ಬೈಸಿಕಲ್ಲುಗಳನ್ನು ಬಳಸುವುದುಂಟು. ಬೈಸಿಕಲ್ಲುಗಳ ಸವಾರಿಯ ಹಿಂದೆ ರೋಚಕ ಕಥೆಗಳಿವೆ. ಪ್ರೇಯಸಿಯನ್ನು ಬೈಸಿಕಲ್ ಹಿಂದೆ ಕೂರಿಸಿಕೊಂಡು, ಊರೆಲ್ಲಾ ಸುತ್ತಾಡಿದ "ಪ್ರೇಮ ಕಹಾನಿ" ಅನೇಕರಲ್ಲಿ ಈಗಲೂ ಪುಳಕ ಹುಟ್ಟಿಸಬಹುದು.

ಅದೇ ರೀತಿ ಬೈಸಿಕಲ್‌ನಿಂದ ಬಿದ್ದು ಮಾಡಿಕೊಂಡ ಗಾಯದ ಕುರುಹು ಈಗಲೂ ಇರಬಹುದು. ಇನ್ನು ಅಂಚೆಯಣ್ಣ ಮನೆಯ ಮುಂದೆ ಬಂದು ಟ್ರಿನ್ ಟ್ರಿನ್ ಎಂದು ಬಾರಿಸುವ ಗಂಟೆಯ ನಾದಕ್ಕೆ ಯುವತಿಯರು ಹುಲ್ಲೆ ಮರಿಯಂತೆ ನುಗ್ಗಿ ತಮಗೆ ಬಂದ ಪ್ರೇಮ ಪತ್ರಗಳನ್ನು ಅಂಚೆ ಪೇದೆಯಿಂದ ಪಡೆಯುವ ಗತ ವೈಭವಕ್ಕೆ ಎಣೆಯುಂಟೆ ತಂತ್ರಜ್ಞಾನ ಹೆಚ್ಚಿದಂತೆಲ್ಲಾ ಹೊಸ ಹೊಸ ನಮೂನೆಯ ದ್ವಿಚಕ್ರ ವಾಹನಗಳು ಮಾರುಕಟ್ಟೆಗೆ ಲಗ್ಗೆ ಹಾಕಿ ಬೈಸಿಕಲ್ಲುಗಳ ಬಳಕೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಆದರೂ, ಪರಿಸರಸ್ನೇಹಿ ಬೈಸಿಕಲ್ಲುಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಬೈಸಿಕಲ್ಲುಗಳ ಸವಾರಿಯನ್ನು ಉತ್ತೇಜಿಸುವ ಕೆಲಸ ನಡೆದಿದೆ. ಮೈಸೂರಿನಲ್ಲಿ ಸಹ. ಕೆಲವು ವರ್ಷಗಳ ಹಿಂದೆ ಸ್ವತಃ ಜಿಲ್ಲಾಧಿಕಾರಿಗಳೇ ಆಸಕ್ತಿ ವಹಿಸಿ ಬೈಸಿಕಲ್ಲುಗಳನ್ನು ಜಿಲ್ಲಾಡಳಿತದ ವತಿಯಿಂದ ಖರೀದಿಸಿ "ಟ್ರಿನ್ ಟ್ರಿನ್" ಎಂಬ ಹೆಸರಿನಲ್ಲಿ ಸಾರ್ವಜನಿಕರಿಗೆ ಬಾಡಿಗೆಯ ಆಧಾರದ ಮೇಲೆ ನೀಡುವ ವ್ಯವಸ್ಥೆ ಮಾಡಿದ್ದರು. ಈಗಲೂ ಈ ವ್ಯವಸ್ಥೆ ಜಾರಿಯಲ್ಲಿದೆ. ಒಂದು ಕಾಲದಲ್ಲಿ "ರ್‍ಯಾಲಿ", "ಹರ್ಕ್ಯುಲಸ್", "ಅಟ್ಲಾಸ್", "ಹೀರೋ" ಮುಂತಾದ ಕಂಪನಿಗಳ ಬೈಸಿಕಲ್ಲುಗಳು ಅತ್ಯಂತ ಜನಪ್ರಿಯವಾಗಿದ್ದವು. ಈ ಪೈಕಿ ಕೆಲವು ಕಂಪನಿಗಳು ಈಗ ಮುಚ್ಚಲ್ಪಟ್ಟಿವೆ. ಅನೇಕ ರಾಜ್ಯಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಯರಿಗೆ ರಾಜ್ಯ ಸರ್ಕಾರಗಳೇ ಉಚಿತ ಬೈಸಿಕಲ್ ನೀಡುವ ವ್ಯವಸ್ಥೆ ಇದೆ. ನಮ್ಮ ರಾಜ್ಯದಲ್ಲಿ ಸಹ ಈ ವ್ಯವಸ್ಥೆ ಜಾರಿಯಲ್ಲಿದೆ.

ಬೈಸಿಕಲ್ಲುಗಳ ಸವಾರಿ ನಮ್ಮ ದೈಹಿಕ ಆರೋಗ್ಯದ ಮೇಲೂ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಬೈಸಿಕಲ್ಲುಗಳ ಸವಾರಿ ಒಂದು ಉತ್ತಮ ರೀತಿಯ ವ್ಯಾಯಾಮ ಎಂದು ವೈದ್ಯರು ಕೂಡ ಹೇಳುವುದುಂಟು.

ಬೈಸಿಕಲ್ಲುಗಳು ಸರಳತೆಯ ಪ್ರತೀಕವಾಗಿದೆ. ಇವುಗಳಿಗೆ ಯಾವುದೇ ರೀತಿಯ ಪೆಟ್ರೋಲ್ ಅಥವಾ ಇಂಧನದ

ಅವಶ್ಯಕತೆ ಇರುವುದಿಲ್ಲ. ಬೈಸಿಕಲ್ಲುಗಳ ಬೆಲೆ ಸಹ ದುಬಾರಿಯಲ್ಲ. ಹೀಗಾಗಿ ಬೈಸಿಕಲ್ಲುಗಳ ಸವಾರಿ ಒಂದು ಉತ್ತಮ ರೀತಿಯ ಸಂಚಾರ ಸಾಧನವಾಗಿದೆ. ಬೈಸಿಕಲ್ಲುಗಳ ಗತ ವೈಭವದ ಪುನಸ್ಥಾಪನೆಗೆ ನಾವೆಲ್ಲರೂ ಕೈಜೋಡಿಸಬೇಕಾಗಿದೆ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

ಭವಿಷ್ಯದಲ್ಲಿ ಬರಬಹುದಾದ ಫ್ರೀಗಳು

ಮಾನ್ಯರೆ,

ಮತಬಾಂಧವರೇ, ನನ್ನ ಫ್ರೀ ಪಕ್ಷವನ್ನು ಅಧಿಕಾರಕ್ಕೆ ತಂದಲ್ಲಿ ನಿಮ್ಮೆಲ್ಲರಿಗೂ ಫ್ರೀಗಳ ಸುರಿಮಳೆಗರೆಯುತ್ತೇನೆ!

ಮಟನ್ ತಿನ್ನುವವರಿಗೆ ಮಟನ್ ಫ್ರೀ, ಚಿಕನ್ ತಿನ್ನುವವರಿಗೆ ಚಿಕನ್ ಫ್ರೀ, ಬಸ್ಸಿನಲ್ಲಿ ಪ್ರಯಾಣ ಮಾಡುವ ಗಂಡ–ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಅಜ್ಜಿ, ತಾತಾ ಎಲ್ಲರಿಗೂ ಫ್ರೀ, ಕ್ವಾರ್ಟರ್ ಎಣ್ಣೆ ಹಾಕುವವರಿಗೂ ಫ್ರೀ, ಫುಲ್ ಬಾಟಲ್ ಎಣ್ಣೆ ಹಾಕುವವರಿಗೂ ಫ್ರೀ, ಕರೆಂಟ್‌ಗೆ ಯಾವುದೇ ಮಿತಿಯಲ್ಲ, ಉರಿಯುತ್ತಿರುವ ಕಂಬಗಳೇ ಫ್ರೀ, ಗೋಬಿ ಮಂಚೂರಿ, ಪಾನೀಪೂರಿ, ಸಮೋಸ ತಿನ್ನುವವರೆಲ್ಲರಿಗೂ ಫ್ರೀ, ಚಡ್ಡಿ, ಕಾಚಾ, ಬನಿಯನ್, ಪ್ಯಾಂಟ್–ಶರ್ಟ್, ಪಂಚೆ, ಟವೆಲ್ ಫ್ರೀ, ಶೇವಿಂಗ್ ಫ್ರೀ, ಕಟ್ಟಿಂಗ್ ಫ್ರೀ, ಹೆಣ್ಣು ಮಕ್ಕಳಿಗೆ ಬ್ಯೂಟಿ ಪಾರ್ಲರ್ ಫ್ರೀ, ಕುಡಿದು ಜಾಸ್ತಿ ಆಗಿ ಮಲಗುವವರಿಗೆ ಚಾಪೆ–ದಿಂಬು ಫ್ರೀ, ರೈತರಿಗೆ ಪ್ರತಿ ವರ್ಷಕ್ಕೆ ಆಗುವಷ್ಟು ಕುಟುಂಬಕ್ಕೆ ಅಕ್ಕಿ, ರಾಗಿ, ಎಣ್ಣೆ, ಸಾಸಿವೆ, ಮೆಣಸಿನಕಾಯಿ ಎಲ್ಲಾ ಪದಾರ್ಥಗಳು ಫ್ರೀ, ಭಿಕ್ಷುಕರಿಗೆ ಭಿಕ್ಷೆ ಬೇಡಲು ಸ್ವೈಪಿಂಗ್ ಮೆಷಿನ್ ಫ್ರೀ, ಮಕ್ಕಳಿಗೆ ಮಿಠಾಯಿ ಫ್ರೀ, ಹಲ್ಲಿಲ್ಲದವರಿಗೆ ಬಜ್ಜಿ, ಬೋಂಡಾ ಫ್ರೀ... ಫ್ರೀ... ಫ್ರೀ...

ಮಾನ್ಯ ಮತದಾರರೇ ಫ್ರೀ ಪಕ್ಷಕ್ಕೆ ಮತ ನೀಡಿ, ಕಷ್ಟ ಪಡದೇ ಸುಖವಾಗಿರಿ. ಸ್ಥಳಾಭಾವದ ಪ್ರಯುಕ್ತ ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ಫ್ರೀಯನ್ನು ಪ್ರಕಟಿಸುತ್ತೇನೆ.

– ಎನ್.ಆರ್. ವಿಜಯಕುಮಾರ್, ಮಾನಸಿನಗರ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಪ್ರಜಾಪ್ರಭುತ್ವದ ದೊರೆ ನಮ್ಮ ನಾಲ್ವಡಿ

ಇಂದು (ಭಾನುವಾರ) ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ. ತನ್ನಿಮಿತ್ತ ಈ ಲೇಖನ

ಮಹಾರಾಜರೆಂದರೆ ಇವರಂತಿರಬೇಕು. ಜಗತ್ತಿನ ಪ್ರತಿಯೊಬ್ಬ ಮಹಾರಾಜರಿಗೂ ಮಾದರಿಯಂತಿದ್ದರು ನಮ್ಮ ಮೈಸೂರು ಸಂಸ್ಥಾನದ ಅರಸರು. ಇಪ್ಪತ್ಮೂರನೇ ಮಹಾರಾಜ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರು ಸ್ವತಂತ್ರ ಪೂರ್ವದಲ್ಲೇ **'ಪ್ರಜಾಪ್ರತಿನಿಧಿ'** ಸಭೆಯನ್ನು ನಾಡಿನಲ್ಲಿ ಅನುಷ್ಠಾನಗೊಳಿಸಿದವರು. ತನ್ಮೂಲಕ ಪ್ರಜಾಪ್ರಭುತ್ವದ ಆಶಯಗಳನ್ನು, ಆಶೋತ್ತರಗಳನ್ನು, ಆದರ್ಶಗಳನ್ನು, ಜಾರಿಗೆ ತಂದ ದೇಶದ, ಅಷ್ಟೇ ಏಕೆ ಜಗತ್ತಿನ ಮೊದಲ ಮಹಾರಾಜ ಎಂಬ ಹಿರಿಮೆ ಗಳಿಸಿದವರು. ಇಂತಹ ಪ್ರಜಾಪ್ರಭುತ್ವಾದಿ ಮಹಾರಾಜರ ಸುಪುತ್ರರೇ ನಾಲ್ವಡಿ ಕೃಷ್ಣರಾಜ ಒಡೆಯರ್. ಇವರು ಪ್ರಜಾವಾತ್ಸಲ್ಯಮುಖಿಯಾಗಿ ನಾಡು ಕಟ್ಟಿದವರು. ಅದಕ್ಕೇನೇ ಮಹಾತ್ಮ ಗಾಂಧೀಜಿ ಅವರು, "ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಂತೆ ದೇಶದ ಎಲ್ಲಾ ಮಹಾರಾಜರುಗಳೂ ಇದ್ದಿದ್ದರೆ ನಮಗೆ ಸ್ವಾತಂತ್ರ್ಯವೇ ಬೇಕಿರಲಿಲ್ಲ. ಇದಕ್ಕಾಗಿ ಹೋರಾಟದ ಅಗತ್ಯವೂ ಇರಲಿಲ್ಲ!" ಎಂದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದರು. ಅವರ ಆಡಳಿತವನ್ನು ರಾಮರಾಜ್ಯವೆಂದು ಕರೆದರು.

1910ರ ದಶಕ. ಆಳರಸರ ದರ್ಬಾರಿನಲ್ಲಿ ಮೈಸೂರು ದಸರಾ ವೈಭವದಿಂದ ನಡೆಯುತ್ತಿದ್ದ ಕಾಲವದು. ಆಗ ನವರಾತ್ರಿಯ ಸಂದರ್ಭದಲ್ಲಿ ಯೂರೋಪಿಯನ್ನರಿಗಾಗಿ ವಿಶೇಷ ದರ್ಬಾರು ನಡೆಯುತ್ತಿತ್ತು. ದಿವಾನರಾದಿಯಾಗಿ ಅಲ್ಲಿ ಎಲ್ಲಾ ಗಣ್ಯರೂ ಕೆಳಗೆ ಕೂರುವುದು ಮತ್ತು ಯೂರೋಪಿಯನ್ನರು ಹಾಗೂ ಅತಿಥಿಗಳು ಮಾತ್ರ ವಿಶೇಷವಾದ ಕುರ್ಚಿಯ ಮೇಲೆ ಕೂರುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಆದರೆ ಅಂದಿನ ಮಹಾರಾಜರಿಗೆ ಈ ತಾರತಮ್ಯತೆ ಸರಿ ಕಾಣಲಿಲ್ಲ. ತಕ್ಷಣವೇ ತಲತಲಾಂತರದಿಂದ ನಡೆದು ಬಂದಿದ್ದ ಈ ತಾರತಮ್ಯತೆಗೆ ತಿಲಾಂಜಲಿಯಿತ್ತು ಎಲ್ಲರೂ ಸಮಾನವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಗೆ 1910ರಲ್ಲಿ ನಾಂದಿ ಹಾಡಿದರು. ಆ ಕಾಲದಲ್ಲಿದು ಬಹುದೊಡ್ಡ ವಿಷಯವಾಗಿ ಮೈಸೂರಿಗೆ ಮೈಸೂರೇ ಇಂಥ ಸಮಾನ ನೀತಿಜ್ಞ ಮಹಾರಾಜರ ಸಮಾನ ಸಮಾಜದ ಪ್ರಗತಿಪರ ದೃಷ್ಟಿಯನ್ನು ಮನಸಾರೆ ಮೆಚ್ಚಿ ಕೊಂಡಾಡಿತ್ತು. ಇದೇ ಮಹಾರಾಜರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂದು ಅರಮನೆಯೊಳಗಿನ ದರ್ಬಾರಿಗೆ ದಲಿತರಿಗೆ ಪ್ರವೇಶವಿಲ್ಲದಂತಿದ್ದ ಕಟ್ಟುಪಾಡನ್ನು ಸ್ವತಃ ತಾವೇ ಮುರಿದು, ದಲಿತರೂ ನಮ್ಮಂತೆಯೇ ಮನುಷ್ಯರೇ ಆಗಿರುವಾಗ ಇಲ್ಲಿ ಭೇದ–ಭಾವ ಕೂಡದೆಂದರು. ಅಂತೆಯೇ 1936ರಲ್ಲಿ ನಡೆದ ದಸರಾ ಮಹೋತ್ಸವದ ದರ್ಬಾರಿನಲ್ಲಿ ದಲಿತರೆಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ಭಾಗವಹಿಸುವ ಅವಕಾಶ ಕಲ್ಪಿಸಿ, ಮನುಷ್ಯರೆಲ್ಲಾ ಒಂದೇ ಎಂದು ಅವರನ್ನೂ ಗೌರವಿಸಿ ಮಾನವ ಕುಲ ತಾನೊಂದೇ ಎಂದು ಜಗತ್ತಿಗೆ ಸಾರಿ ಸಮಾನತೆಯ ಬೆಳಕು ಚೆಲ್ಲಿದ್ದರು. ಆ ಮಹಾರಾಜರೇ ಎಂದೆಂದಿಗೂ ನಾಡು ಮರೆಯದ ನಾಲ್ವಡಿ ಕೃಷ್ಣರಾಜ ಒಡೆಯರ್!

ನಮ್ಮ ದೇಶದ ಯಾವ ಸಂಸ್ಥಾನದ ಮಹಾರಾಜರಿಗೂ ಅಂದು ಇರದಿದ್ದ ಸಮಾನ ನೀತಿ ಅಂದಿನ ಕಾಲದಲ್ಲೇ ಇವರಲ್ಲಿದ್ದು ಸಮಾನತೆಯ ಹರಿಕಾರರಾಗಿ ಎಲ್ಲರಿಗೂ ಮಾದರಿಯಾಗಿದ್ದ ಮಹಾರಾಜರಾಗಿದ್ದರು. ಹಾಗೆಯೇ ದಸರಾ ದರ್ಬಾರಿಗೆ ದಲಿತರಿಗೆ ಮುಕ್ತ ಅವಕಾಶ ನೀಡಿ ಅಸ್ಪೃಶ್ಯತೆ ಅಳಿಸಲು ಮುಂದಾದ ಇವರ 'ಸಮಾನ ನೀತಿಜ್ಞ' ಆಡಳಿತವನ್ನು 1938ರ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ವಿಶೇಷ ಸಂಪುಟದಲ್ಲಿ ಬಗೆಬಗೆಯಾಗಿ ಬಣ್ಣಿಸಿ ಶ್ಲಾಘಿಸಿದೆ. ಅಷ್ಟೇ ಅಲ್ಲ ದೇಶ ವಿದೇಶಗಳ ಗಣ್ಯರನೇಕರು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಆಡಳಿತವನ್ನು ಪ್ರಶಂಸಿಸಿರುವುದು ಇತಿಹಾಸದ ಪುಟಗಳಲ್ಲಿದೆ. ದಿವಾನರಾಗಿ ಮಿರ್ಜಾ ಇಸ್ಮಾಯಿಲ್‌ರವರು 1930ರಲ್ಲಿ ಪ್ರತಿನಿಧಿಸಿದ್ದ ಇಂಗ್ಲೆಂಡ್‌ನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ನಾಲ್ವಡಿಯವರ ಆಡಳಿತವು ಇಡೀ ದೇಶದಲ್ಲಿಯೇ ಉತ್ತಮ ರಾಜ್ಯವೆಂದು ಪ್ರಶಂಸೆಗೊಳಗಾಗಿತ್ತು. ಇವರ ಸಮಕಾಲೀನ ಮಹಾರಾಜರಾಗಿದ್ದ ಬರೋಡದ ಸಯ್ಯಾಜಿ ರಾವ್ ಗಾಯಕವಾಡ್ ಮತ್ತು ಕೊಲ್ಲಾಪುರದ ಶಾಹು ಮಹಾರಾಜರು ನಾಲ್ವಡಿಯವರಂತೆಯೇ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದು, ಜನಪರ ಕಾಳಜಿಯುಳ್ಳ ಸಮಾನ ಮನಸ್ಕರಾಗಿದ್ದರು.

ನಾಡಿನ ಭವ್ಯ ಪರಂಪರೆಯನ್ನು ಉಳಿಸಿ, ಬೆಳೆಸಿ, ಬೆಳಗಿಸಿ, ದೇಶದ ಸಂಸ್ಕೃತಿ ಕಲೆ ಅಳಿಸಿ ಹೋಗದಂತೆ ಕಾಪಾಡಿದ ಮಹಾನ್ ವ್ಯಕ್ತಿ ಮತ್ತು ಸಮಾನ ಸಮಾಜದ ಸಮಾನತಾದೃಷ್ಟಿ ಹೊಂದಿದ್ದ ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನಿಸಿದ್ದು 1884ರ ಜೂನ್ 4ರಂದು. ತಂದೆ ಜನಪರವಾಗಿ ಮೈಸೂರು ರಾಜ್ಯವನ್ನು ಆಳಿದ ಯದು ವಂಶದ 23ನೇ ಮಹಾರಾಜರಾದ ಹತ್ತನೇಯ ಚಾಮರಾಜೇಂದ್ರ ಒಡೆಯರ್, ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿ ವಿಲಾಸ ಸನ್ನಿಧಾನರು. ಇವರ ಜೇಷ್ಠಪುತ್ರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹುಟ್ಟಿದ್ದು 1886ರಲ್ಲಿ ಬೆಂಕಿಗೆ ಆಹುತಿಯಾದ ಮೈಸೂ ರಿನ ಹಿಂದಿನ ಹಳೆಯ ಅರಮನೆಯಲ್ಲಿ. ನಂತರದ ದಿನಗಳಲ್ಲಿ ಇವರ ತಾಯಿ ವಾಣಿ ವಿಲಾಸ್ ಸನ್ನಿಧಾನರೇ ಈಗಿರುವ ಜಗದ್ವಿಖ್ಯಾತ ಮೈಸೂರು ಅರಮನೆಯನ್ನು ಭವ್ಯವಾಗಿ ನಿರ್ಮಿಸಿದರು. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಅಭೂತಪೂರ್ವ ಸಾಧನೆಯೂ ಹೌದು! ನಾಲ್ವಡಿಯವರ ಒಡಹುಟ್ಟಿದವರು ಜಯ ಲಕ್ಷ್ಮಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಕೃಷ್ಣಾಜಮ್ಮಣ್ಣಿ–ಮೂವರು ತಂಗಿಯರು. ಓರ್ವ ತಮ್ಮ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್. ಒಟ್ಟು ಐದು ಮಂದಿ ಮಕ್ಕಳಿವರು.

1894ರಲ್ಲಿ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಹತ್ತನೇ ಚಾಮರಾಜ ಒಡೆಯರ್, ಕಲ್ಕತ್ತಾದಲ್ಲಿದ್ದಾಗ ಗಂಟಲು ಬೇನೆಯಿಂದ ಅಕಾಲಿಕ ಮರಣಕ್ಕೆ ತುತ್ತಾದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ 1895 ಫೆಬ್ರವರಿ 2ರಂದು ಪಟ್ಟಾಭಿಷೇಕವಾಯಿತು. ಇವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಅಂದಿನ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್ ಆಗಿದ್ದ ಎಲ್ಗಿನ್ ಅವರು ತಾಯಿ ಮಹಾರಾಣಿ ವಾಣಿವಿಲಾಸರಿಗೆ ಮೈಸೂರು ಸಂಸ್ಥಾನದ ರಾಜಪ್ರತಿನಿಧಿ (ರೀಜೆಂಟ್) ಯಾಗಿ ಅಧಿಕಾರ ವಹಿಸಿಕೊಟ್ಟರು. ಭಾರತೀಯ ನಾಗರಿಕ ಸೇವಾ (ಐಸಿಎಸ್) ಅಧಿಕಾರಿಯಾದ ಫ್ರೇಸರ್ ಸರ್ ಸ್ಟುವರ್ಟ್ ಮಿಟ್‌ಫೋರ್ಡ್ ಅವರು ಬಾಲಕ ನಾಲ್ವಡಿ ಮಹಾರಾಜರ ಟ್ಯೂಟರ್ ಆಗಿ 1896ರಲ್ಲಿ ನೇಮಕವಾದರು. ಈ ಸಂದರ್ಭದಲ್ಲಿ 1895 ರಿಂದ 1902ರ ತನಕ ಏಳು ವರ್ಷಗಳ ಕಾಲ ಇವರ ತಾಯಿ ಮಹಾರಾಣಿ ವಾಣಿವಿಲಾಸರು ಕೆಲವು ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದ್ದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿದ್ಯಾಭ್ಯಾಸಕ್ಕಾಗಿಯೇ ರಾಯಲ್ ಸ್ಕೂಲ್ ಎಂಬ ರಾಜಶಾಲೆ 1892ರಲ್ಲಿ ಆರಂಭವಾಗಿತ್ತು. ಇವರು ಪಾಶ್ಚಾತ್ಯ ಅಧ್ಯಯನದ ಜೊತೆಗೆ ಕನ್ನಡ, ಇಂಗ್ಲೀಷ್, ಉರ್ದು, ಪಾರ್ಷಿ ಮತ್ತು ಸಂಸ್ಕೃತವನ್ನು ಕಲಿತರು. ಅಷ್ಟೇ ಅಲ್ಲ ಈ ಎಲ್ಲಾ ಭಾಷೆಗಳಲ್ಲೂ ಪಾಂಡಿತ್ಯ ಗಳಿಸಿದರು. ಜೆ.ಜೆ.ವೈಟ್ಲಿ, ಪಿ.ರಾಘವೇಂದ್ರ ರಾವ್, ಎಂ.ಎ.ನಾರಾಯಣ್‌ರಾವ್, ಬಿ.ಭೀಮರಾವ್, ಎಂ.ಹುಸೇನ್ ಅಲಿ ಅವರು ಗುರುಗಳಾಗಿದ್ದರು. ಮಿರ್ಜಾ ಇಸ್ಮಾಯಿಲ್, ಲಕ್ಷ್ಮೀಕಾಂತ ರಾಜ ಅರಸ್, ಟಿ.ಎಸ್.ಅಲಿಖಾನ್, ಎಂ.ಎಸ್.ರಾಮಚಂದ್ರರಾವ್ ಮುಂತಾದವರು ಸಹಪಾಠಿಗಳಾಗಿದ್ದರು. ಬಾಂಬೆ ಸಿವಿಲ್ ಸರ್ವೀಸ್‌ನ ಫ್ರೇಸರ್ ಸರ್ ಸ್ಟುವರ್ಟ್ ಇವರಿಗೆ ಆಡಳಿತದ ಬಗ್ಗೆ ತರಬೇತಿ ನೀಡಿದ್ದರು. ಆ ಸಂದರ್ಭದಲ್ಲೇ ತಮಗೆ ಬೇಕಾದ ಕುದುರೆ ಸವಾರಿ, ಅಂಗ ಸಾಧನೆ, ಚಿತ್ರಕಲೆ, ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ಸೇರಿದಂತೆ ಸಕಲ ಕಲಾ ಶಿಕ್ಷಣವನ್ನೂ ತಮ್ಮದಾಗಿಸಿಕೊಂಡ ಇವರು ರಾಜ್ಯಾಡಳಿತದ ಚುಕ್ಕಾಣಿ ಹಿಡಿಯಲು ಸರ್ವ ರೀತಿಯಲ್ಲೂ ಅರ್ಹತೆಯನ್ನೂ ಪಡೆದುಕೊಂಡು 1902ರ ಆಗಸ್ಟ್ 8ರಂದು ವೈಸ್‌ರಾಯ್ ಲಾರ್ಡ್ ಕರ್ಜನ್ ಅವರಿಂದ ಆಡಳಿತದ ಪೂರ್ಣಾಧಿಕಾರ ತೆಗೆದುಕೊಂಡರು. ಅಲ್ಲಿಂದ ಶುರುವಾಯಿತು ಮೈಸೂರು ಸಂಸ್ಥಾನದ 24ನೇ ಮಹಾರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಸುಭಿಕ್ಷ ಕಾಲ. ಸೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಕೂಡ ಒತ್ತಾಸೆಯಾಗಿ ನಿಂತರು.


ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ದಿವಾನರಾಗಿ ಪಿ.ಎನ್.ಕೃಷ್ಣಮೂರ್ತಿ (1901–1906), ವಿ.ಪಿ.ಮಾಧವರಾವ್ (1906–1909), ಟಿ.ಆನಂದರಾವ್ (1909–1912), ಎಂ.ವಿಶ್ವೇಶ್ವರಯ್ಯ (1912–1918), ಎಂ.ಕಾಂತರಾಜ ಅರಸ್ (1918–1922), ಎ.ಆರ್.ಬ್ಯಾನರ್ಜಿ (1922–1926) ಹಾಗೂ ಮಿರ್ಜಾ ಇಸ್ಮಾಯಿಲ್(1926–1940) ಅವರುಗಳು ಸೇವೆ ಸಲ್ಲಿಸಿದ್ದರು. ಈ 7 ಮಂದಿ ಮೇಧಾವಿ ದಿವಾನರುಗಳೂ ನಾಲ್ವಡಿಯವರ ಆಶಯಕ್ಕೆ, ನಾಡಿನ ಸರ್ವತೋಮುಖ ಪ್ರಗತಿಗಾಗಿ ಸಹಕರಿಸಿದ್ದರು. ಹಾಗಾಗಿ ನಾಲ್ವಡಿಯವರು ಕಂಡ ಕನಸುಗಳೆಲ್ಲವೂ ಬಹುಬೇಗ ಸಾಕಾರಗೊಳ್ಳುತ್ತಿದ್ದವು. ಅದರಲ್ಲೂ ವಿಶೇಷವಾಗಿ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಸಂದರ್ಭದಲ್ಲಿ ನಾಲ್ವಡಿಯವರ ನಾಡಿನ ಅಭಿವೃದ್ಧಿ ಕಾರ್ಯಗಳು ದುಪ್ಪಟ್ಟುಗೊಂಡು ವೇಗ ಪಡೆದುಕೊಂಡಿದ್ದವು.

ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ಇವರ ಕಾಲದಲ್ಲೇ ಹೆಚ್ಚು ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು. ಇಡೀ ಏಷ್ಯಾದಲ್ಲೇ ಮೊದಲಿಗೆ 1905ರಲ್ಲಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನೆ ಆರಂಭಿಸಿದ ಕೀರ್ತಿಯ ಜೊತೆಗೆ 1905ರ ಆಗಸ್ಟ್ 5ರಲ್ಲಿ ಬೆಂಗಳೂರಿಗೆ ವಿದ್ಯುತ್ ಬೀದಿ ದೀಪಗಳನ್ನು ಬೆಳಗಿಸಿ ವಿದ್ಯುತ್ ಬೀದಿದೀಪಗಳನ್ನು ಪಡೆದ ಏಷ್ಯಾದ ಮೊದಲ ನಗರವೆಂಬ ಹೆಗ್ಗಳಿಕೆಯನ್ನು ಇವರು ಬೆಂಗಳೂರಿಗೆ ತಂದುಕೊಟ್ಟರು. ಅಂತೆಯೇ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಇದು ಏಷ್ಯಾದಲ್ಲೇ ಪ್ರಥಮ ಪ್ರಯೋಗವಾಗಿದೆ. ಹಾಗೆಯೇ ಇವರ ದೂರದೃಷ್ಟಿಯ ಫಲವಾಗಿ 1911ರಲ್ಲಿ ಆರಂಭಿಸಿ 1932ರಲ್ಲಿ ಸಂಪೂರ್ಣಗೊಂಡು ನಿರ್ಮಿಸಲ್ಪಟ್ಟ ಕೆಆರ್‌ಎಸ್ ಎಂದೇ ವಿಶ್ವವಿಖ್ಯಾತಿ ಹೊಂದಿರುವ ಕನ್ನಂಬಾಡಿ ಕಟ್ಟೆ ಅಂದಿನಿಂದ ಇಂದಿಗೂ ಲಕ್ಷಾಂತರ ರೈತರ ಪಾಲಿಗೆ ಅಕ್ಷಯ ಪಾತ್ರೆಯಾಗಿದೆ. 1913ರಲ್ಲಿ ಎಲ್ಲರಿಗೂ ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣದ ಆದೇಶ ಹೊರಡಿಸಿದ ಖ್ಯಾತಿಯೂ ಇವರದ್ದೇ ಆಗಿದೆ. ಭಾರತೀಯ ರಾಜ್ಯವೊಂದು ಆರಂಭಿಸಿದ ಮೊದಲ ವಿಶ್ವವಿದ್ಯಾಲಯವೆಂಬ ಹಿರಿಮೆಯೊಡನೆ 1916ರ ಜುಲೈ 27ರಂದು ಇವರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ ಇಂದು ದೇಶದ ಪ್ರತಿಷ್ಠಿತ ವಿಶ್ವ ವಿದ್ಯಾಲಯವಾಗಿದೆ. ಇದರ ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬನಾರಸ್ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿ ಸೇವೆಗೈದು ಶೈಕ್ಷಣಿಕ ಸಾಧನೆ ಮೆರೆದಿದ್ದಾರೆ. 1918ರಲ್ಲಿ ದೇಶದಲ್ಲೇ ಮೊದಲಿಗೆ ನ್ಯಾಯಮೂರ್ತಿ ಮಿಲ್ಲರ್ ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗ ರಚಿಸಿ ಮೀಸಲಾತಿ ಜಾರಿಗೆ ತಂದಿದ್ದ ಕೀರ್ತಿ ಇವರದು.

ಚುನಾವಣೆ ಸಂದರ್ಭದಲ್ಲಿ ಮತದಾರರ ಬೆರಳಿಗೆ ಹಚ್ಚುವ ಬಣ್ಣವನ್ನು ತಯಾರಿಸುವ ದೇಶದ ಏಕೈಕ ಕಾರ್ಖಾನೆಯಾದ ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯನ್ನು 1937ರಲ್ಲಿ ಸ್ಥಾಪಿಸಿದ ಮತ್ತು ಆಗಿನ ಕಾಲಕ್ಕೆ ಇಡೀ ದೇಶದಲ್ಲೇ ಬೃಹತ್ ವಾಣಿಜ್ಯ ಸಂಕೀರ್ಣವೆಂದು ಕರೆಯಲಾದ 882 ಅಡಿ ಉದ್ದ ಹಾಗೂ 180 ಅಡಿ ಅಗಲದ 726 ಮಳಿಗೆಗಳುಳ್ಳ ದೇವರಾಜ ಮಾರುಕಟ್ಟೆಯನ್ನು 1903ರಲ್ಲಿ ನಿರ್ಮಿಸಿದ ಕೀರ್ತಿ ಇವರದು. ಅಂತೆಯೇ 1906ರಲ್ಲಿ ಚಾಮರಾಜೇಂದ್ರ ಇಂಜಿನಿಯರಿಂಗ್ ಸಂಸ್ಥೆ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್, 1916ರಲ್ಲಿ ಶ್ರೀಗಂಧದೆಣ್ಣೆ ಕಾರ್ಖಾನೆ, 1930ರಲ್ಲಿ ಮೈಸೂರು ಮೆಡಿಕಲ್ ಕಾಲೇಜು, 1921ರಲ್ಲಿ ತಮ್ಮ ಸೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಹೆಸರಿನಲ್ಲಿ ಪಿ.ಕೆ. ಸ್ಯಾನಿಟೋರಿಯಂ ನಿರ್ಮಿಸಿದ ಗರಿಮೆ ಕೂಡ ಇವರದೇ. ಆಶ್ಚರ್ಯವೆಂದರೆ 1903ರಲ್ಲೇ ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಗಾಗಿ ದೇಶದಲ್ಲೇ ಮೊಟ್ಟಮೊದಲಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಇವರು ಸ್ಥಾಪಿಸಿದ್ದರು.

1900ರಲ್ಲಿ ಕಾಠೇವಾಡದ ರಾಜಕುಮಾರಿ ಪ್ರತಾಪಕುಮಾರಿ ಬಾಯಿ ಅವರೊಡನೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಅದ್ದೂರಿ ವಿವಾಹ ಸಮಾರಂಭದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದ ನಾಲ್ವಡಿ ಅವರು ತಮ್ಮ ಆಳ್ವಿಕೆಯಲ್ಲಿ 25 ವರ್ಷ ಪೂರೈಸಿದ ದ್ಯೋತಕವಾಗಿ ರಜತ ಮಹೋತ್ಸವವನ್ನು ಅಷ್ಟೇ ಭವ್ಯವಾಗಿ ಆಚರಿಸಿಕೊಂಡಿದ್ದರು.

'ರಾಜ ಪ್ರತ್ಯಕ್ಷ ದೈವ' ಎಂಬ ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3ರಂದು ಇನ್ನಿಲ್ಲವಾದರೂ ಕೂಡ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ. ರೈತರ ಬಾಳನ್ನು ಹಸಿರುಗೊಳಿಸಿ, ಹಸನುಗೊಳಿಸಲು ಇವರು ಕಟ್ಟಿದ ಕನ್ನಂಬಾಡಿ ಕಟ್ಟೆಯ ಭೋರ್ಗರೆತ ಕಂಡಾಗ ಅದೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರು ಅಮರರು, ಅಜರಾಮರ ರೆಂದು ಸಾರಿ ಸಾರಿ ಹೇಳುತ್ತಿರುವಂತೆ ಅನಿಸುತ್ತದೆ. ನಾಡಿಗೆ ಬೆಳಕು ನೀಡಲು ಇವರು ಸ್ಥಾಪಿಸಿರುವ ಶಿವನಸಮುದ್ರ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕಂಡರೆ ಅದೂ ಕೂಡ ನಾಲ್ವಡಿಯವರು ಬೆಳಕಲ್ಲಿ ಬೆಳಕಾಗಿ ನನ್ನೊಳಗಿದ್ದಾರೆಂದು ನುಡಿಯುತ್ತಿದೆಯೇನೋ ಎನಿಸುತ್ತದೆ. ಏಕೆಂದರೆ, ಇವೆರಡೂ ನಾಡಿಗೆ ನಾಲ್ವಡಿಯವರ ಅಂಥಾ ಅದ್ಭುತ ಕೊಡುಗೆಗಳು. ಹೀಗೆ ವಿಸ್ಮಯದೋಪಾದಿಯಲ್ಲಿ ಅಭಿವೃದ್ಧಿಯ ಕೆಲಸಗಳನ್ನು ಮಾಡಿ ನಾಡ ಶಿಲ್ಪಿಯಾಗಿ ಜನ ಮೆಚ್ಚುಗೆ ಗಳಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರು ನಾಡು ಮಾತ್ರವಲ್ಲ ದೇಶ ಕೂಡ ಎಂದೂ ಮರೆಯದೆ ಯಾವತ್ತೂ ಸ್ಮರಿಸುತ್ತದೆ. ಅಂಥ ಸ್ಮರಣೀಯ ಮಹಾರಾಜರಿವರು.



ನಾಲ್ವಡಿ ಕೃಷ್ಣರಾಜ ಒಡೆಯರ್

ಸಾಂಸ್ಕೃತಿಕ ನಗರಿಯಾದ ಮೈಸೂರಿಗೆ ಅರಮನೆಗಳ ನಗರಿ ಎಂಬ ಖ್ಯಾತಿ ಬರಲು ಇವರು ಬಹುಮುಖ್ಯ ಕಾರಣರು. ಇಂದಿಗೂ ಒಂದೊಂದು ಅರಮನೆಯೂ ಒಂದೊಂದು ಕಥೆ ಹೇಳುತ್ತಾ ಮೈಸೂರಲ್ಲಿ ಮಿನುಗುತ್ತಿರುವ ಲಲಿತಮಹಲ್ ಅರಮನೆ, ಚೆಲುವಾಂಬ ವಿಲಾಸ್ ಅರಮನೆ, ಜಯಲಕ್ಷ್ಮಿ ವಿಲಾಸ್ ಅರಮನೆ, ರಾಜೇಂದ್ರ ವಿಲಾಸ್ ಅರಮನೆ, ಕಾರಂಜಿ ವಿಲಾಸ್ ಅರಮನೆಗಳು ನಾಲ್ವಡಿ ಅವರು ನಿರ್ಮಿಸಿದ್ದೇ ಆಗಿವೆ. ಮೈಸೂರು ಮತ್ತು ಇದರ ಸುತ್ತಮುತ್ತ ಪುಟ್ಟ ಪುಟ್ಟ ಅರಮನೆಗಳಂತೆ ಕಂಗೊಳಿಸುತ್ತಿರುವ ಪುರಭವನ, ಕ್ರಾಫರ್ಡ್ ಭವನ, ವಿಶ್ವೇಶ್ವರಯ್ಯ ಕಟ್ಟಡ, ದೊಡ್ಡ ಗಡಿಯಾರ, ಜನತಾ ಬಜಾರ್ ಕಟ್ಟಡ, ಗನ್‌ಹೌಸ್, ಮಹಾನಗರ ಪಾಲಿಕೆ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ವಾಣಿವಿಲಾಸ್ ಮಾರುಕಟ್ಟೆ ಮುಂತಾದ ಭವ್ಯ ಭವನಗಳು ಇವರ ಕೊಡುಗೆಯೇ. 1914ರಲ್ಲಿ 'ಎಕನಾಮಿಕ್ ಜರ್ನಲ್' ಎಂಬ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಆರಂಭಿಸಿದ್ದ ಇವರು ಪತ್ರಿಕೋದ್ಯಮಕ್ಕೂ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಇವತ್ತಿಗೂ ಕರ್ನಾಟಕದ ಪತ್ರಿಕೋದ್ಯಮ ಇವರನ್ನು ನೆನಸಿಕೊಳ್ಳಲೇಬೇಕು.

ಕೆ.ಆರ್.ಕ್ಷೇತ್ರದ ಮತದಾರರ ಋಣ ನನ್ನ ಮೇಲಿದೆ

ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ: ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು, ಜೂ.3 (ಎಸ್‌ಪಿಎನ್)– ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಜಿಲ್ಲಾ ವಿಪ್ರ ಸಂಘ ಸೇರಿದಂತೆ ಇತರೆ ಸಂಘಟನೆಗಳ ಪದಾಧಿಕಾರಿಗಳು ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಸನ್ಮಾನಿಸಿದರು.

ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ವಿವಿಧ ವಿಪ್ರ ಸಂಘಟನೆಗಳು ಆಯೋಜಿಸಿದ್ದ ಸಮಾರಂಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಅಭಿನಂದಿಸಿದರು.

ನಂತರ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಇದು ಕೇವಲ ಒಬ್ಬರ ಗೆಲುವಲ್ಲ. ಇದು ಜನಸಾಮಾನ್ಯರ ಗೆಲುವು ಎಂದು ಬಿಂಬಿತವಾಗುತ್ತಿರುವುದೇ ಉತ್ತಮ ಬೆಳವಣಿಗೆ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಅವರ ಮುಂದೆ ಕ್ಷೇತ್ರದಲ್ಲಿ ಸಾಕಷ್ಟು ಸವಾಲುಗಳಿವೆ. ಇವೆಲ್ಲವನ್ನು ನಿಭಾಯಿಸಿಕೊಂಡು ಹೋಗುವ ಚಾಕಚಕ್ಯತೆ ಶ್ರೀವತ್ಸ ಅವರಲ್ಲಿದೆ. ಹಾಗಾಗಿ ಬ್ರಾಹ್ಮಣ ಸಮುದಾಯ ಮುಂದೆಯೂ ಒಗ್ಗಟ್ಟು ಕಾಪಾಡಿಕೊಂಡು ರಾಜಕೀಯವಾಗಿ ಮೇಲೇಳಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.



ಅಭಿನಂದನೆ ಸ್ವೀಕರಿಸಿ ಮಾತನಾಡಿದ ಟಿ.ಎಸ್.ಶ್ರೀವತ್ಸ, ಬಿಜೆಪಿಯಲ್ಲಿ ಕಳೆದ 35 ವರ್ಷದಿಂದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಜನರ ಪರಿಚಯ ಹೆಚ್ಚಾಯಿತು. ಬಿಜೆಪಿ ಕಾರ್ಯಕರ್ತರು ಮತ್ತು ಸಮುದಾಯದ ಎಲ್ಲಾ ಮುಖಂಡರು ಮನೆಮನೆಗೆ ತೆರಳಿ ನನ್ನ ಗೆಲುವಿಗೆ ಶ್ರಮಿಸಿದ್ದಾರೆ. ಎಲ್ಲರಿಗೂ ನಾನು ಸದಾ ಅಭಾರಿಯಾಗಿರುತ್ತೇನೆ ಎಂದರು.

ನಾನು ಕೆ.ಆರ್.ಕ್ಷೇತ್ರದ ಶಾಸಕನಾಗಿ ಆಯ್ಕೆಯಾಗಿ, ಈ ಸಭಾಂಗಣದಲ್ಲಿ ಸೇರಿರುವ ನಿಮ್ಮೆಲ್ಲರೆದುರು ಇಂದು ಸನ್ಮಾನ ಸ್ವೀಕರಿಸುವುದಕ್ಕೆ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ ಅವರ ಕೊಡುಗೆ ಅಪಾರ. ನನ್ನ ಗೆಲುವಿನಲ್ಲಿ ಅವರ ಶ್ರಮವೂ ಸೇರಿಕೊಂಡಿದೆ. ಅವರ ಸೇವೆಯನ್ನು ನಾನು, ಸದಾ ಸ್ಮರಿಸುತ್ತೇನೆ. ಈ ಸಭಾಂಗಣದಲ್ಲಿರುವ ಪ್ರತಿಯೊಬ್ಬರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರಚಾರ ಮಾಡಿ, ನನ್ನ ಗೆಲುವಿಗೆ ಕಾರಣಕರ್ತರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಈ ಗೆಲುವಿನ ಹಿಂದೆ ಸಾವಿರಾರು ಬಿಜೆಪಿ ಕಾರ್ಯಕರ್ತರ ಪರಿಶ್ರಮವಿದೆ. ಈ ಬಾರಿ ಚುನಾವಣೆಯಲ್ಲಿ ನಾನು ಕಾರ್ಯಕರ್ತರಿಗೆ ಪರಿಚಯವಿದ್ದ ವ್ಯಕ್ತಿ. ಆದರೆ, ಬಿಜೆಪಿ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆ ಮುಖಂಡರು ನನ್ನ ಪರವಾಗಿ ಕ್ಷೇತ್ರದ ಪ್ರಚಾರದಲ್ಲಿ ಮಾಡಿ, ಇಡೀ ಕೃಷ್ಣರಾಜ ಕ್ಷೇತ್ರಕ್ಕೆ ಪರಿಚಯಿಸಿದ್ದಾರೆ. ಇವರೆಲ್ಲರ ಋಣ ನನ್ನ ಮೇಲಿದೆ. ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ. ಮುಂದಿನ ದಿನಗಳಲ್ಲಿ ಇದನ್ನ ನಿಭಾಯಿಸಿ ನಿಮ್ಮೆಲ್ಲರ ನಿರೀಕ್ಷೆಯನ್ನು ತಪ್ಪದೇ ಪಾಲಿಸುತ್ತೇನೆ ಎಂದರು.

ಬಿಜೆಪಿ ಮುಖಂಡ ಗೋಪಾಲ್ ರಾವ್ ಮಾತನಾಡಿ, ಕಳೆದ 30 ವರ್ಷಗಳಿಂದ ಶ್ರೀವತ್ಸ ಅವರು ಪ್ರಾಮಾಣಿಕ ಕಾರ್ಯಕರ್ತರಾಗಿ ದುಡಿದ ಫಲವಾಗಿ ಇಂದು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಪಕ್ಷ ಸಂಘಟನೆಯಲ್ಲಿ ಪ್ರಾಮಾಣಿಕತೆ ತೊಡಗಿಸಿಕೊಂಡರೆ ಉನ್ನತ ಸ್ಥಾನಮಾನ ದೊರಕುತ್ತದೆ ಎಂಬುದಕ್ಕೆ ಶ್ರೀವತ್ಸ ಸಾಕ್ಷಿ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮಾಂತರ ಅಧ್ಯಕ್ಷ ಗೋಪಾಲ್‌ರಾವ್, ಪಾಲಿಕೆ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಎಂ.ಸಿ. ರಮೇಶ್, ಸಾಹಿತಿಗಳಾದ ಪುಷ್ಪ ಅಯ್ಯಂಗಾರ್, ರವಿಶಾಸ್ತ್ರಿ, ಪಂಡಿತ್ ಅನಿರುದ್ಧಾಚಾರ್, ಟಿ.ಎಸ್.ಅರುಣ್, ಪುಟ್ಟಣ್ಣ ಭಟ್, ಹರೀಶ್, ಎಂಆರ್ ಬಾಲಕೃಷ್ಣ, ಹೆಚ್.ಎನ್ ಶ್ರೀಧರಮೂರ್ತಿ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕೆಎಂ.ನಿಶಾಂತ್, ಹರೀಶ್, ಶ್ರೀನಾಥ್, ಕಲ್ಲೆರೆ ನಾಗರಾಜ್, ಸುಚೀಂದ್ರ, ನಾಗೇಶ್, ಚಿತ್ರಾಣಿ, ಜ್ಯೋತಿ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 4 ಭಾನುವಾರ 2023

ಸಂಪುಟ: 44 | ಸಂಚಿಕೆ: 49 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಒಡಿಶಾ ರೈಲುಗಳ ದುರಂತ

ಸತ್ತವರ ಸಂಖ್ಯೆ 300ಕ್ಕೂ ಅಧಿಕ

900ಕ್ಕೂ ಹೆಚ್ಚು ಗಾಯಾಳುಗಳು

ಬಾಲಸೋರ್ (ಒಡಿಶಾ), ಜೂ.3–ಒಡಿಶಾದ ಬಾಲಸೋರ್ ಜಿಲ್ಲೆಯ ಬಹನಾಗ ಬಜಾರ್ ರೈಲು ನಿಲ್ದಾಣದ ಬಳಿ ಶುಕ್ರವಾರ ಸಂಜೆ ನಡೆದ ಸರಣಿ ರೈಲು ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 300ಕ್ಕೆ ಏರಿಕೆಯಾಗಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಅದೇ ವೇಳೆ ಲಭ್ಯವಿರುವ ಮಾಹಿತಿಗಳ ಪ್ರಕಾರ 900 ಮಂದಿ ಗಾಯಗೊಂಡಿದ್ದಾರೆ.

ಎರಡು ಎಕ್ಸ್‌ಪ್ರೆಸ್ ರೈಲುಗಳು ಮತ್ತು ಗೂಡ್ಸ್ ರೈಲ್ ನಡುವೆ ಸಂಭವಿಸಿದ ಈ ಭೀಕರ ಅಪಘಾತದ ರಕ್ಷಣಾ ಕಾರ್ಯಾಚರಣೆ ಶುಕ್ರವಾರ ಸಂಜೆಯಿಂದಲೇ ಸಮರೋಪಾದಿ ನಡೆಯುತ್ತಿದ್ದು, ಇಂದು ಮಧ್ಯಾಹ್ನದ ವೇಳೆಗೆ ರಕ್ಷಣಾ ಕಾರ್ಯ ಪೂರ್ಣಗೊಂಡಿದೆ. ಈ ಕಾರ್ಯಾಚರಣೆಯಲ್ಲಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ರೈಲ್ವೆ ರಕ್ಷಣಾ ತಂಡ, ಒಡಿಶಾ ರಾಜ್ಯ ಪೊಲೀಸರು, ಅಗ್ನಿಶಾಮಕ ದಳ, ಕಂದಾಯ ಇಲಾಖೆ ಹಾಗೂ ಸ್ಥಳೀಯರು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು. ಬೋಗಿಗಳಲ್ಲಿ ಸಿಲುಕಿದ್ದ ಮೃತದೇಹಗಳನ್ನು ಹೊರ ತೆಗೆಯಲು ಗ್ಯಾಸ್ ಕಟ್ಟರ್‌ಗಳನ್ನು ಬಳಸಿ ● 9ನೇ ಪುಟಕ್ಕೆ





ಡ್ರೋಣ್ ಮೂಲಕ ಸೆರೆಹಿಡಿಯಲಾದ ಅಪಘಾತ ಸ್ಥಳದ ಭಯಾನಕ ದೃಶ್ಯ ಶನಿವಾರ ಪ್ರಧಾನಿ ಮೋದಿ ದುರಂತ ಸ್ಥಳಕ್ಕೆ ಭೇಟಿ ನೀಡಿ, ಪರಿಹಾರ ಕಾರ್ಯಾಚರಣೆ ಬಗ್ಗೆ ಚರ್ಚೆ ನಡೆಸಿದರು.

ಅಪಘಾತ ಸ್ಥಳಕ್ಕೆ ಪ್ರಧಾನಿ ಮೋದಿ ಭೇಟಿ; ಪರಿಶೀಲನೆ

ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ವಿಚಾರಣೆ

ಬಾಲಸೋರ್ (ಒಡಿಶಾ), ಜೂ.3–ಒಡಿಶಾ ರೈಲು ಅಪಘಾತ ಸ್ಥಳಕ್ಕೆ ಶನಿವಾರ ಮಧ್ಯಾಹ್ನ ಪ್ರಧಾನಿ ನರೇಂದ್ರ ಮೋದಿಯವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಅವರು ಬಾಲಸೋರ್ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಈ ವೇಳೆ ಗಾಯಾಳುಗಳೊಂದಿಗೆ ಮಾತನಾಡಿದ ಅವರು, ಅಪಘಾತದಲ್ಲಿ ಗಾಯಗೊಂಡವರ ಚಿಕಿತ್ಸೆಗೆ ಎಲ್ಲಾ ರೀತಿಯ ಸಹಾಯವನ್ನು ಸರ್ಕಾರ ನೀಡುತ್ತದೆ. ಇದೊಂದು ಗಂಭೀರ ಘಟನೆಯಾಗಿದ್ದು, ಪ್ರತಿಯೊಂದು ಕೋನದಿಂದಲೂ ತನಿಖೆ ನಡೆಸುವಂತೆ ಸೂಚಿಸಲಾಗಿದೆ. ತಪ್ಪಿತಸ್ಥರೆಂದು ಕಂಡುಬಂದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು. ಮತ್ತೊಂದೆಡೆ ರೈಲ್ವೆ ಇಲಾಖೆ ಹಳಿಗಳ ● 9ನೇ ಪುಟಕ್ಕೆ

ಮೈಸೂರಲ್ಲಿ ಇತಿಹಾಸಕಾರ ವಿಕ್ರಂ ಸಂಪತ್‌ರಿಗೆ 'ವೀರ ಸಾವರ್ಕರ್ ಸಮ್ಮಾನ್' ಪ್ರಶಸ್ತಿ ಪ್ರದಾನ

ಸಾವರ್ಕರ್ ರಾಜಕೀಯ ಸೇರಲ್ಲ ಎಂದು ಬರೆದುಕೊಟ್ಟಿದ್ದನ್ನೇ 'ಕ್ಷಮಾಪಣೆ' ಎಂದು ದೂರಲಾಗುತ್ತಿದೆ; ಇದು ತಪ್ಪು

ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಸ್ಪಷ್ಟನೆ

ಮೈಸೂರು, ಜೂ.3(ಎಸ್‌ಬಿಡಿ)– ಸಾವರ್ಕರ್ ವಿರುದ್ಧದ ಆರೋಪವೆಲ್ಲಾ ಸುಳ್ಳು ಎಂದು ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರು ಹೇಳಿದರು.

ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ವೀರ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಇತಿಹಾಸಕಾರ ವಿಕ್ರಂ ಸಂಪತ್ ಅವರಿಗೆ 'ವೀರ ಸಾವರ್ಕರ್ ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಸಾವರ್ಕರ್ ವಿರುದ್ಧ ಪದೇಪದೆ ಕೀಳಾಗಿ ಮಾತನಾಡುತ್ತಾರೆ. ಅದರಲ್ಲೂ ಅವರು ಜೈಲಿನಲ್ಲಿದ್ದಾಗ ಬ್ರಿಟಿಷರಿಗೆ ಕ್ಷಮಾಪಣಾ ಪತ್ರ ಬರೆದುಕೊಟ್ಟರು ಎಂದು ಆರೋಪಿಸುತ್ತಾರೆ. ಅವರು ಬರೆದುಕೊಟ್ಟಿದ್ದು ಕ್ಷಮಾಪಣಾ ಪತ್ರವಲ್ಲ, ಜೈಲಿನಿಂದ ಹೊರ ಹೋದ ಬಳಿಕ ರಾಜಕೀಯಕ್ಕೆ ಸೇರುವುದಿಲ್ಲ ಎಂದು ಬ್ರಿಟಿಷರು ಬರೆಸಿಕೊಂಡಿದ್ದು ಎಂದು ತಿಳಿಸಿದರು.

ಸಾವರ್ಕರ್ ಅವರಿಗೆ 52 ವರ್ಷ ಶಿಕ್ಷೆ ವಿಧಿಸಲಾಗಿತ್ತು. ಅವರು ಜೈಲಿನಲ್ಲಿದ್ದಾಗ ಅವರಿಗೆ ಬ್ರಿಟಿಷಿನವರು ಒಂದು ಅವಕಾಶ ಕೊಟ್ಟಿದ್ದರು. ಬಿಡುಗಡೆ ಬಳಿಕ ರಾಜಕೀಯಕ್ಕೆ ಹೋಗುವುದಿಲ್ಲ ಎಂದು ಬರೆದುಕೊಟ್ಟರೆ ಬಿಡುವುದಾಗಿ ಹೇಳಿದ್ದರು. ಆದರೆ ಸಾವರ್ಕರ್ ಒಪ್ಪಿರಲಿಲ್ಲ. ಅಂಡಮಾನ್ ದ್ವೀಪದಲ್ಲಿ ವಿಪರೀತ ಸೆಕೆ. ಕೊಬ್ಬರಿ ಗಾಣಕ್ಕೆ ಕೋಣಗಳನ್ನು ಕಟ್ಟಿ ತಿರುಗಿಸುವಂತೆ ಅಲ್ಲಿ ಸಾವರ್ಕರ್ ಅವರನ್ನು ಗಾಣಕ್ಕೆ ಕಟ್ಟಿ ದಿನದಲ್ಲಿ 12 ಗಂಟೆ ತಿರುಗಿಸುತ್ತಿದ್ದರು. ಇಂತಹ ಘೋರ ಶಿಕ್ಷೆಯನ್ನು ಸಾವರ್ಕರ್ 12 ವರ್ಷ ಅನುಭವಿಸಿದರು. ನಂತರ ಆರೋಗ್ಯ ಹಾಳಾಗಿದೆ, ನಾನು ಹೆಚ್ಚು ವರ್ಷ ಬದುಕಲ್ಲ. ಯಾವ ಸಾಧನೆಗೆ ಇಲ್ಲಿರಬೇಕು ಎಂದು ಆಲೋಚನೆ ಮಾಡಿದರು. ಬಳಿಕ ಜೈಲಿನಿಂದ ಬಿಡುಗಡೆಯಾದ ಬಳಿಕ ನಾನು ರಾಜಕೀಯಕ್ಕೆ ಹೋಗುವುದಿಲ್ಲ ಎಂದು ಬರೆದುಕೊಟ್ಟರು ಎಂದು ಹೇಳಿದರು.

ಅಲ್ಲದೆ ದೇಶದಲ್ಲಿದ್ದ ಪರಿಸ್ಥಿತಿಯೂ ಅವರಿಗೆ ಗೊತ್ತಿತ್ತು. ಕ್ರಾಂತಿಯಿಂದ ಸ್ವಾತಂತ್ರ್ಯ ಪಡೆಯಬೇಕೆಂಬುವರಲ್ಲಿ ಮುಂಚೂಣಿಯಲ್ಲಿದ್ದ ಬಾಲಗಂಗಾಧರ ತಿಲಕರನ್ನು 6 ವರ್ಷ ಬರ್ಮಾದ ಜೈಲಿನಲ್ಲಿಟ್ಟಿದ್ದರು. ಅಹಿಂಸೆ ಎಂದು ಕೇಳಿ ಕೇಳಿ ನಮ್ಮ ಹಿಂದೂಗಳು ದೇಶದ ಫಿಲಾಸಫಿಯನ್ನೇ ತಪ್ಪಾಗಿ ತಿಳಿದುಕೊಂಡಿದ್ದರು. ಗಾಂಧಿ ಕಾಲದಲ್ಲೇ ಜೈಲಿಗೆ ಹೋಗುವುದು ಹೆಚ್ಚಿನ ಸಂಕಟವೆನಿಸಿರಲಿಲ್ಲ. ತಕ್ಕ ಮಟ್ಟಿಗೆ ಊಟ ಕೊಡುತ್ತಿದ್ದರು. ಹೆಚ್ಚಿಗೆ ಕೆಲಸವಿರುತ್ತಿರಲಿಲ್ಲ. ಓದಲು ಪುಸ್ತಕವನ್ನೂ ಕೊಡುತ್ತಿದ್ದರು. ಇದರ ನಡುವೆ ಜೈಲಿನಿಂದ ● 7ನೇ ಪುಟಕ್ಕೆ



ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ಖ್ಯಾತ ಲೇಖಕ, ಇತಿಹಾಸಕಾರ ವಿಕ್ರಂ ಸಂಪತ್ ಅವರಿಗೆ 'ವೀರ ಸಾವರ್ಕರ್ ಸಮ್ಮಾನ್' ಪ್ರಶಸ್ತಿಯನ್ನು ಖ್ಯಾತ ಸಾಹಿತಿಗಳಾದ ಎಸ್.ಎಲ್.ಭೈರಪ್ಪ ಅವರು ಪ್ರದಾನ ಮಾಡಿದರು. ವಾಗ್ಮಿ ಚಕ್ರವರ್ತಿ ಸೂಲಿಬೆಲೆ, ಸಾವರ್ಕರ್ ಪ್ರತಿಷ್ಠಾನ ಮೈಸೂರು ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ಉಪಸ್ಥಿತರಿದ್ದಾರೆ.

ವಿಕ್ರಂ ಸಂಪತ್ ಅವರ ಸಂಪುಟಗಳು ಕನ್ನಡಕ್ಕೆ ಬರಲಿ

ಮೈಸೂರಲ್ಲಿ ಸಾವರ್ಕರ್ ಪ್ರತಿಷ್ಠಾನವನ್ನು ಸ್ಥಾಪನೆ ಮಾಡಿದವರಿಗೆ ಮೊದಲು ಅಭಿನಂದನೆ ಸಲ್ಲಿಸುತ್ತೇನೆ. ಸಾವರ್ಕರ್ ಸಮ್ಮಾನ್ ಪ್ರಶಸ್ತಿಗೆ ವಿಕ್ರಂ ಅವರನ್ನು ಆಯ್ಕೆ ಮಾಡಿದ್ದು ಸೂಕ್ತವಾಗಿದೆ. ಇವರು ಸಾವರ್ಕರ್ ಬಗ್ಗೆ ಸಮಗ್ರ ಮಾಹಿತಿ ಸಂಪಾದಿಸಿ 2 ಸಂಪುಟಗಳನ್ನು ಬರೆದಿದ್ದಾರೆ. ಅವೆರಡೂ ಕನ್ನಡಕ್ಕೆ ಬರಬೇಕು. ಈ ಜವಾಬ್ದಾರಿಯನ್ನು ಸಾವರ್ಕರ್ ಪ್ರತಿಷ್ಠಾನ ನಿರ್ವಹಿಸಬೇಕು. ಆ ಕಾರ್ಯಕ್ಕೆ ಚಕ್ರವರ್ತಿ ಸೂಲಿಬೆಲೆ ಅವರ ಸಹಕಾರ ಪಡೆಯಬೇಕು. ಕಾರಣ ಇಂಗ್ಲಿಷ್‌ನಲ್ಲಿರುವುದಕ್ಕೆ ತಕ್ಕುದಾದ ಕನ್ನಡ ಪದವನ್ನು ಬಳಸಿ, ಉತ್ತಮವಾಗಿ ಅನುವಾದ ಮಾಡಬೇಕು. ಅದಕ್ಕೆ ಸೂಕ್ತ ಅನುವಾದಕರನ್ನು ಆಯ್ಕೆ ಮಾಡಬೇಕು. ಬಳಿಕ ತಿದ್ದಿ ಒಳ್ಳೆಯ ಪುಸ್ತಕವಾಗಿ ಸಿದ್ಧಪಡಿಸಬೇಕು. ಪ್ರಕಟಣೆ ಕಷ್ಟವಾಗುವುದಿಲ್ಲ. ಕನ್ನಡಕ್ಕೆ ಅನುವಾದಿಸಿದರೆ ತುಂಬಾ ಚೆನ್ನಾಗಿ ವ್ಯಾಪಾರವಾಗಿ, ಆರ್ಥಿಕ ಲಾಭವೂ ಆಗುತ್ತದೆ. ಆ ಹಣದಲ್ಲೇ ಮುಂದಿನ ವರ್ಷ ಪ್ರಶಸ್ತಿ ನೀಡಬಹುದು. ಓದುಗರು ಯಾವ ಪುಸ್ತಕವನ್ನು ಕೊಳ್ಳುತ್ತಾರೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ ಎಂದು ಡಾ.ಎಸ್.ಎಲ್.ಭೈರಪ್ಪ ಸಲಹೆ ನೀಡಿದರು.

ಸಾವರ್ಕರರದು ಜಾತಿ, ಮತ, ಭೇದವಿಲ್ಲದ ಹಿಂದುತ್ವ: ಇದನ್ನು ಎತ್ತಿ ಹಿಡಿಯಲು ತರುಣ ವರ್ಗ ಒಗ್ಗಟ್ಟಾಗಬೇಕು

ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಕರೆ

ಮೈಸೂರು, ಜೂ.3(ಎಂಕೆ)– ಸಾವರ್ಕರ್ ಹಿಂದುತ್ವ ಜಾತಿ, ಮತ, ಭೇದಗಳನ್ನು ಮರೆತ ಹಿಂದುತ್ವ, ಮಹರ್ ಸಮುದಾಯದವರನ್ನು ದೇವಸ್ಥಾನದೊಳಗೆ ಕರೆದುಕೊಂಡ ಹೋದ ಬದಲಾವಣೆಯ ಹರಿಕಾರ. ಅವರಲ್ಲಿ ಇದ್ದಂತಹ ಶಕ್ತಿಯು ಇಂದು ನೂರುಪಟ್ಟು ಹೆಚ್ಚಿನ, ಭರ್ಜರಿ ಶಕ್ತಿಯಾಗಿ ರೂಪುಗೊಳ್ಳಬೇಕಾಗಿದೆ. ಅದಕ್ಕಾಗಿ ಎಲ್ಲಾ ತರುಣ ವರ್ಗ ಒಗ್ಗಟ್ಟಾಗಬೇಕು ಎಂದು ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಕರೆ ನೀಡಿದರು.

ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ನಡೆದ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಾವರ್ಕರ್ ನಮ್ಮ ಕಲ್ಪನೆಯನ್ನೂ ಮೀರಿದವರು. ಅವರ ವಿಚಾರದಲ್ಲಿ ಎಷ್ಟೇ ಹೇಳಿದರೂ ಸಾಲದು. ಅಂತಹ ವ್ಯಕ್ತಿತ್ವ ಅವರದು. ಇಂತಹವರನ್ನು ಅಳಿಸುವ ಕೆಲಸವಾಗಿದೆ. ಆದರೆ ಈ ದೇಶದ ಪ್ರಧಾನಿಗಳು ನೂತನ ಸಂಸತ್ ಭವನವನ್ನು ಸಾವರ್ಕರ್ ಅವರ ಜನ್ಮದಿನದಂದು ಉದ್ಘಾಟನೆ ಮಾಡುವ ಮೂಲಕ ಸಾವರ್ಕರ್ ಅವರನ್ನು ಪ್ರತಿಯೊಬ್ಬರು ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಸಾವರ್ಕರ್ ಇವತ್ತಿಗೂ ಜೀವಂತ: ಸರ್ಕಾರದ ಉಚಿತ ಯೋಜನೆಗಳ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಸರ್ಕಾರಿ ನೌಕರರೊಬ್ಬರನ್ನು ಸಸ್ಪೆಂಡ್ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ದಿನ ಬೆಳಗಾದರೆ ವಿಷ ಸರ್ಪ ಎನ್ನುವುದರಿಂದ ಹಿಡಿದು ಏನೆಲ್ಲಾ ಮಾತನಾಡಬೇಕೋ ಅದನ್ನೆಲ್ಲವನ್ನೂ ಮಾತನಾಡುವವರನ್ನು ಜೈಲಿಗೆ ಕಳುಹಿಸಬೇಕೋ ಬೇಡವೋ. ವಾಕ್ ಸ್ವಾತಂತ್ರ್ಯದ ಕುರಿತು ಉದ್ದುದ್ದ ಭಾಷಣ ಮಾಡುವವರು ಫೆವಿಕಾಲ್ ನುಂಗಿ ಕುಳಿತಿದ್ದಾರೆ. ಆಗಲೂ ಇದ್ದಂತಹ ಇಂತಹ ಪರಿಸ್ಥಿತಿಯಲ್ಲಿ ಸಾವರ್ಕರ್ ಹೋರಾಟ ನಡೆಸಿದ್ದಾರೆ. ಬೇಕಾದ್ದನ್ನು ಮಾತನಾಡಲು, ಮುಕ್ತವಾಗಿ ಬರೆಯಲು ಅವಕಾಶ ನೀಡದ ಈ ತರಹದ ಮಾನಸಿಕತೆಯ ವಿರುದ್ಧ ಹೋರಾಟ ಮಾಡಲು ಇವತ್ತಿಗೂ ಸಾವರ್ಕರ್ ಜೀವಂತವಾಗಿದ್ದಾರೆ ಎಂದರು.

ಬದುಕಿದ್ದಾಗಲೇ ದೇಶದ್ರೋಹಿ ಪಟ್ಟ: ಸಾವರ್ಕರ್ ನನ್ನ ಪ್ರಾಣವನ್ನು ಬಿಡುತ್ತೇನೆ ಎಂದು ಹೇಳಿಕೊಂಡೆ ಪ್ರಾಣ ಬಿಟ್ಟಂತಹ ನಮ್ಮ ಕಾಲದ ಭೀಷ್ಮ. ಯಾಕೆ ಬಿಡಬೇಕಾಯಿತು ಎಂದರೆ ಅವರ ಬದುಕಿನ 2ನೇ ಹಂತವನ್ನು ನರಕವನ್ನಾಗಿಸಿದರು. ಬದುಕಿದ್ದಾಗಲೇ ಅವರನ್ನು ದೇಶದ್ರೋಹಿ ಎಂದು ಕರೆದರು. ಅವಹೇಳನ ಮಾಡುವ ಲೇಖನಗಳು ಬಂದವು. ಅವರ ಭಾಷಣ ಆಲ್ ಇಂಡಿಯಾ ರೇಡಿಯೋದಲ್ಲಿ ಪ್ರಸಾರವಾಗದಂತೆ ನಿರ್ಬಂಧ ಹೇರಲಾಯಿತು. ಅವರ ಹಿಂದೆ ಯಾರಾದರೂ ಹೋದರೆ ಅವರಿಗೆ ಶಿಕ್ಷೆ ಕೊಡುವಂತಹ ವಾತಾವರಣವನ್ನು ರೂಪಿಸಲಾಯಿತು. ಒಟ್ಟಾರೆ ಅವರನ್ನು ಒಬ್ಬಂಟಿಯನ್ನಾಗಿಸಲಾಯಿತು. ಸ್ವತಂತ್ರ ಭಾರತದಲ್ಲಿಯೂ ಸಾವರ್ಕರ್ ನೂರು ದಿನಗಳ ಕಾಲ ಜೈಲಿನಲ್ಲಿದ್ದರು. ನಮಗೋಸ್ಕರ ಮನೆ–ಮಠ ಎಲ್ಲವನ್ನೂ ಕಳೆದುಕೊಂಡ ವ್ಯಕ್ತಿಯನ್ನು ಜೈಲಿನಲ್ಲಿಡಲಾಯಿತು ಎಂದು ಸಂಕಟ ವ್ಯಕ್ತಪಡಿಸಿದರು.

ಸಾವರ್ಕರ್ ಬಗ್ಗೆ ಶಿವರಾಮು ಬರೆದಿರುವ ಪುಸ್ತಕದಲ್ಲಿ, ಸಾವರ್ಕರ್ ಅವರನ್ನು ಎಲ್ಲರೂ ಪ್ರೀತಿಯಿಂದ ತಾತ್ಯ ಎಂದು ಕರೆಯುತ್ತಿದ್ದರು. ಅದೇ ಹೆಸರನ್ನು ಸಂಬೋಧಿಸಿ, 'ತಾತ್ಯ, 1857ರ ಕೃತಿಯಲ್ಲಿ ನೀನೇ ತಾತ್ಯಾಟೋಪಿಯ ಬಗ್ಗೆ ಬರೆದಿದ್ದೀಯಾ... ನೀನು ಈ ದೇಶದಲ್ಲಿ ಹುಟ್ಟಬಾರದಿತ್ತು. ಜಗತ್ತಿನ ಯಾವ ದೇಶದಲ್ಲಿ ಹುಟ್ಟಿದ್ದರೂ ನಿನ್ನಂತಹ ವೀರನನ್ನು ಆನೆ ಮೇಲೆ ಅಂಬಾರಿ ಇಟ್ಟು ಅದರಲ್ಲಿ ಕೂರಿಸಿ, ಮೆರವಣಿಗೆ ಮಾಡಿ ತಿರುಗಾಡಿಸುತ್ತಿದ್ದರು. ಈ ದೇಶದ ಜನತೆಗೆ ನಿನ್ನ ಬಗ್ಗೆ ಗೊತ್ತಿಲ್ಲ ಎಂದು ಓದಿದಾಗ ಸಂಕಟವಾಗುತ್ತದೆ ಎಂದು ವಿಷಾದಿಸಿದರು. ● 7ನೇ ಪುಟಕ್ಕೆ

ಇಲಾಖೆಯಲ್ಲಿ ಖಾಲಿ ಇರುವ ಪಶು ವೈದ್ಯ ಹುದ್ದೆಗಳ ಭರ್ತಿಗೆ ಕ್ರಮ: ಸಚಿವ ಕೆ.ವೆಂಕಟೇಶ್

ಹೈನುಗಾರಿಕೆ ಉತ್ತೇಜನಕ್ಕೆ ಹಲವಾರು ಯೋಜನೆ ಜಾರಿಗೆ ತರಲು ಸಿಎಂ ಜತೆ ಸಮಾಲೋಚನೆ

ಮೈಸೂರು,ಜೂ.3(ಎಂಟಿವೈ)– ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿಯಿರುವ ಪಶುವೈದ್ಯರು ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿಯೊಂದಿಗೆ ಹೈನುಗಾರಿಕೆ ಉತ್ತೇಜಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಎಂದು ಪಶು ಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈನುಗಾರಿಕೆಯನ್ನು ಕೋಟ್ಯಂತರ ರೈತರು ಅವಲಂಬಿಸಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನಗೆ ಮೂಕಪ್ರಾಣಿಗಳ ಸೇವೆ ಮಾಡುವಂತಹ ಖಾತೆಯನ್ನು ನೀಡಿದ್ದು, ಇಲಾಖೆಗೆ ಹೊಸ ರೂಪ ನೀಡಿ ಹೈನುಗಾರಿಕೆಯನ್ನು ಉತ್ತೇಜಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರು, ಸಿಬ್ಬಂದಿ ಸೇರಿ 18 ಸಾವಿರ ಹುದ್ದೆಗಳಿದ್ದು, ಅದರಲ್ಲಿ 9 ಸಾವಿರ ಹುದ್ದೆಗಳು ಖಾಲಿ ಇವೆ. 4,230 ಪಶುಚಿಕಿತ್ಸಾ ಆಸ್ಪತ್ರೆಗಳಿದ್ದು, 1,600 ವೈದ್ಯರ ಕೊರತೆ ಇದೆ. ಹಾಗಾಗಿ, ತಕ್ಷಣವೇ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 400 ವೈದ್ಯರನ್ನು ನೇಮಕ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಆದೇಶ ನೀಡಲಾಗಿದೆ. ಈ ಹಿಂದೆ ಮೆರಿಟ್ ಆಧಾರದಲ್ಲಿ ಪಶುವೈದ್ಯರ ನೇಮಕಾತಿ ಮಾಡಲಾಗುತ್ತಿತ್ತು. ಆದರೆ, ಈಗ ಪರೀಕ್ಷೆ ಮೂಲಕ ಆಯ್ಕೆ ನಡೆಸುವಂತೆ ಒತ್ತಡ ಬಂದಿದ್ದರಿಂದ ಕೆಪಿಎಸ್‌ಸಿಗೆ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನುಳಿದ ಖಾಲಿಯಿರುವ ಪಶುವೈದ್ಯರ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಪ್ರಸ್ತುತ ರಾಜ್ಯದಲ್ಲಿ ಹಾಲು ಉತ್ಪಾದನೆ ಪ್ರಮಾಣ ಹೆಚ್ಚಾಗಿದೆ. ಹೈನುಗಾರಿಕೆಗೆ ಉತ್ತೇಜನ ನೀಡಿದರೆ ರೈತರಿಗೆ ಅನುಕೂಲವಾಗುತ್ತದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸುವುದಾಗಿ ತಿಳಿಸಿದರು.

ಸರ್ಕಾರದಿಂದಲೇ ರೇಷ್ಮೆ ಗೂಡು ಖರೀದಿ: ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸುವ ವಿವಿಧ ಕಾರ್ಯಕ್ರಮವನ್ನು ಜಾರಿಗೆ ತರಲು ಚಿಂತನೆ ನಡೆಸಲಾಗಿದೆ. ತಂಬಾಕು ಬೆಳೆಗೆ ಪರ್ಯಾಯವಾಗಿ ರೇಷ್ಮೆ ಬೆಳೆಯಲು ಉತ್ತೇಜಿಸಲಾಗುವುದು. ರೇಷ್ಮೆ ಗೂಡಿನ ದರ ಇಳಿಕೆಯಾಗಿರುವ ಬಗ್ಗೆ ರೈತರು ಅಳಲು ತೋಡಿಕೊಂಡಿರುವುದರಿಂದ ಕರ್ನಾಟಕ ರೇಷ್ಮೆ ಮಾರುಕಟ್ಟೆ ಬೋರ್ಡ್‌ನಿಂದಲೇ ರೈತರಿಂದ ರೇಷ್ಮೆ ಗೂಡು ಖರೀದಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದರು.


ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಯಲಾಗುತ್ತಿದೆ. ಈ ಬೆಳೆ ಇತರೆ ಜಿಲ್ಲೆಗಳಿಗೂ ವಿಸ್ತರಿಸುವ ಅಗತ್ಯವಿದೆ. ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು ಭಾಗದಲ್ಲಿ ತಂಬಾಕಿಗೆ ಪರ್ಯಾಯ ಬೆಳೆಗಳನ್ನು ಬೆಳೆಯಲು ಅನುಕೂಲ ಮಾಡಿಕೊಡಲಾಗುವುದು. ರೇಷ್ಮೆ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಮುಂದೆ ಏನು ಮಾಡಬಹುದು ಎಂಬುದರ ಬಗ್ಗೆ ಚರ್ಚಿಸುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮಾಧ್ಯಮ ವಕ್ತಾರ ಮಹೇಶ್, ಮುಖಂಡರಾದ ದ್ಯಾವಪ್ಪನಾಯಕ, ಈಶ್ವರ್ ಚಕ್ಕಡಿ ಇನ್ನಿತರರು ಉಪಸ್ಥಿತರಿದ್ದರು.

ಐದು ಗ್ಯಾರಂಟಿ ಕಾರ್ಯಕ್ರಮ ಜಾರಿಯಿಂದ ದೇಶವೇ ರಾಜ್ಯದತ್ತ ದೃಷ್ಟಿ ಹಾಯಿಸಿದೆ: ಸಚಿವ ಕೆ.ವೆಂಕಟೇಶ್

- ನುಡಿದಂತೆ ನಡೆಯುವುದೇ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗುರಿ
- ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೆಲೆ ಏರಿಕೆಯಿಂದ ತತ್ತರಿಸಿದ ಜನತೆಗೆ ಈಗ ನಿರಾಳ
- ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಚಿವ ಸಂಪುಟ ಸಾಥ್

ಮೈಸೂರು, ಜೂ.3(ಎಂಟಿವೈ)– ರಾಜ್ಯದಲ್ಲಿ 5 ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಇಡೀ ದೇಶವೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಮೇಲೆ ದೃಷ್ಟಿ ಹಾಯಿಸುವಂತಾಗಿದೆ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.



ಸಚಿವರಾದ ಬಳಿಕ ಮೊದಲ ಬಾರಿಗೆ ಮೈಸೂರಿನ ಕಾಂಗ್ರೆಸ್ ಕಚೇರಿಗೆ ಆಗಮಿಸಿದ ಸಚಿವ ಕೆ.ವೆಂಕಟೇಶ್ ಅವರಿಗೆ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ಸಾಂಪ್ರದಾಯಿಕವಾಗಿ ಸನ್ಮಾನಿಸಲಾಯಿತು. ನಂತರ ಮಾತನಾಡಿದ ಸಚಿವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ನುಡಿದಂತೆ ನಡೆಯುವ ಮೂಲಕ ಬಡ ಜನರ, ದೀನ ದಲಿತರ ರಕ್ಷಣೆಗೆ ಒತ್ತಾಸೆಯಾಗಿ ನಿಂತಿದೆ. ಈ ಯೋಜನೆಗೆ 57 ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚಾಗಿ ಖರ್ಚಾಗುತ್ತದೆ. ಸರ್ಕಾರಕ್ಕೆ ಹೊರೆಯಾದರೂ ಬಡ ಜನರಿಗೆ ನೆರವಾಗಬೇಕು ಎಂದು ಪಣ ತೊಟ್ಟಿದ್ದೇವೆ. ಜನರಿಗೆ ನಾವು ಮಾತು ಕೊಟ್ಟಿದ್ದೇವೆ ಎಂದು ಸಿದ್ದರಾಮಯ್ಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಇದರಿಂದ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಲ ಬರಲು ಸಹಕಾರಿಯಾಗುತ್ತದೆ ಎಂದರು.

ಪರಿಶುದ್ಧ ಆಡಳಿತಗಾರ: ಸಿದ್ದರಾಮಯ್ಯ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದು ನಾವೆಲ್ಲರೂ ಹೆಮ್ಮೆಪಡುವಂತಾಗಿದೆ. ಒಳ್ಳೆಯ ಆಡಳಿತಗಾರ ಎಂದು ಜನರಿಂದ ಮೆಚ್ಚುಗೆ ಪಡೆದ ವ್ಯಕ್ತಿ. ಆರೋಪ ಹಾಗೂ ದೋಷವಿಲ್ಲದ ಆಡಳಿತ ನಡೆಸಿದ್ದಾರೆ. ಸಿದ್ದರಾಮಯ್ಯ ಅವರ ಬಗ್ಗೆ ನೈಜವಾದ ಆರೋಪ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವ ಸಿದ್ದರಾಮಯ್ಯ ಸಣ್ಣ ಭ್ರಷ್ಟಾಚಾರಕ್ಕೂ ಆಸ್ಪದ ನೀಡದೆ ಆಡಳಿತ ನಡೆಸಿದ್ದಾರೆ. ಆ ಕಾರಣದಿಂದಲೇ ಎಲ್ಲಾ ವರ್ಗದ ಜನ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕು ಎಂದು ಬಯಸುತ್ತಿದ್ದರು. ಎರಡನೇ ಬಾರಿಗೆ ಆಡಳಿತ ನಡೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಬಡ ಜನರಿಗೆ ನೆರವಾಗುತ್ತದೆ: ಚುನಾವಣೆ ಸಂದರ್ಭದಲ್ಲಿ ನಾವು ಜನರಿಗೆ ಕೊಟ್ಟಿದ್ದ ಭರವಸೆಯನ್ನು ಈಡೇರಿಸಲೇಬೇಕು ಎಂದು ನಮ್ಮ ಸರ್ಕಾರ ಪಣ ತೊಟ್ಟಿತ್ತು. ಬಡಜನರ ಮೇಲಿನ ಕಾಳಜಿ, ಹಸಿವು ನೀಗಿಸಲು ಇರುವ ಬದ್ಧತೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೆಲೆ ಏರಿಕೆಯಿಂದಾಗಿ ತತ್ತರಿಸಿದ್ದ ಜನರಿಗೆ ನಮ್ಮ ಸರ್ಕಾರದ 5 ಗ್ಯಾರಂಟಿ ಯೋಜನೆಗಳು ನೆರವಾಗುತ್ತದೆ ಎಂದು ತಿಳಿಸಿದರು.

ಜನರಿಗೆ ಮನವರಿಕೆ ಮಾಡಿಕೊಡಿ: ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕೆಂದು ಪಣ ತೊಟ್ಟಿದೆ. ಇದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಮಂತ್ರಿಮಂಡಲ ಸಾಥ್ ನೀಡುತ್ತಿದೆ. ಈ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರ ಜವಾಬ್ದಾರಿಯೂ ಇದೆ. ಈ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಟ್ಟು, ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಇಂತಹ ಕಾಳಜಿಯುಳ್ಳ ಕಾರ್ಯಕ್ರಮ ಜಾರಿಗೊಳಿಸಲು ಸಾಧ್ಯ ಎಂದು ತಿಳಿಸುವ ಹೊಣೆ ಪಕ್ಷದ ಕಾರ್ಯಕರ್ತರದ್ದಾಗಿದೆ. ಈ ಹಿಂದೆ ಆಡಳಿತ ನಡೆಸಿದವರ ಕಾಲದಲ್ಲಿ ಜನರು ಯಾವ ರೀತಿ ಸಂಕಷ್ಟಕ್ಕೆ ಗುರಿಯಾಗಿದ್ದರು. ಈಗ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಪರಿಸ್ಥಿತಿ ಯಾವ ರೀತಿ ಸುಧಾರಿಸುತ್ತಿದೆ. ಬಡವರಿಗಾಗಿ ಏನೆಲ್ಲಾ ಕಾರ್ಯಕ್ರಮ ಜಾರಿಗೊಳಿಸಿದ್ದೇವೆ ಎಂದು ಮನವರಿಕೆ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಕೆ.ಮರೀಗೌಡ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಕ್ತಾರ ಎಂ.ಲಕ್ಷ್ಮಣ್, ಜಿ.ಪಂ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಬಿ.ಎಂ.ರಾಮು, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಟಿ.ಬಿ.ಚಿಕ್ಕಣ್ಣ, ಬಿ.ಕೆ.ಪ್ರಕಾಶ್, ಮೋದಾಮಣಿ, ದಕ್ಷಿಣಾಮೂರ್ತಿ, ನರಸಿಂಹ ಅಯ್ಯಂಗಾರ್, ಮಾಜಿ ಉಪ ಮೇಯರ್‌ಗಳಾದ ಪುಷ್ಪವಲ್ಲಿ, ಸಿದ್ದರಾಜು, ಮುಖಂಡರಾದ ಶಿವಣ್ಣ, ಬಸವಣ್ಣ, ಸೋಮಸುಂದರ್, ಅಬುಬೂಕರ್, ಶಿವಮಲ್ಲು, ಈಶ್ವರ್ ಚಕ್ಕಡಿ, ಎಂ.ಕೆ.ಅಶೋಕ, ಚಂದ್ರಕಲಾ, ಕಮಲಾ ಅನಂತರಾಮು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ರಾಜವಂಶಸ್ಥರ ಕೊಡುಗೆ ಅಪಾರ

ಮೈಸೂರು ಜಿಲ್ಲೆ ಅತ್ಯಂತ ಹೆಸರುವಾಸಿ ಜಿಲ್ಲೆಯಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ರಾಜವಂಶಸ್ಥರು ನೀಡಿರುವ ಕೊಡುಗೆ ಅಪಾರ. ಮೈಸೂರಿಗರಾದ ನಾವು ರಾಜವಂಶಸ್ಥರ ಕೊಡುಗೆ ಸ್ಮರಿಸಬೇಕು. ಸ್ವಾತಂತ್ರ್ಯ ಬಂದ ಮೇಲೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಹಾಗೂ ಸಿದ್ದರಾಮಯ್ಯ ಪ್ರಾಮಾಣಿಕವಾಗಿ ಜನರ ಪರ ಕೆಲಸ ಮಾಡಿದ್ದಾರೆ. ಈ ಇಬ್ಬರು ನಾಯಕರು ಮೈಸೂರು ಜಿಲ್ಲೆಗೆ ಕೊಡುಗೆ ನೀಡಿದ್ದಾರೆ ಎಂದರು. ಸಿದ್ದರಾಮಯ್ಯ ಅವರ ಅಧಿಕಾರಾವಧಿಯಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಇನ್ನಷ್ಟು ಅಭಿವೃದ್ಧಿ ಕೆಲಸ ಮಾಡಲು ಶ್ರಮಿಸಬೇಕು. ಬಾಕಿ ಇರುವ ಅಭಿವೃದ್ಧಿ ಕೆಲಸವನ್ನು ಗುರುತಿಸಬೇಕು. ಮೈಸೂರು ಜಿಲ್ಲೆಯನ್ನು ಇನ್ನಷ್ಟು ಅಭಿವೃದ್ಧಿ ಮಾಡುವುದಕ್ಕೆ ಮುಖ್ಯಮಂತ್ರಿಗಳು ಬಯಸಿದ್ದಾರೆ ಎಂದು ತಿಳಿಸಿದರು.

ಎಮ್ಮೆ, ಕೋಣ ಕಡಿಯುವುದಕ್ಕೆ ಅವಕಾಶವಿದೆ, ವಯಸ್ಸಾದ ಹಸು ಏಕೆ ಕಡಿಯಬಾರದು: ಸಚಿವರ ವಿವಾದಾತ್ಮಕ ಹೇಳಿಕೆ

ಮೈಸೂರು,ಜೂ.3(ಎಂಟಿವೈ)– ಈ ಹಿಂದೆ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಗೋಹತ್ಯೆ ನಿಷೇದ ಮಸೂದೆಯಲ್ಲಿ ಎಮ್ಮೆ ಮತ್ತು ಕೋಣವನ್ನು ಕಡಿಯುವುದಕ್ಕೆ ಅವಕಾಶ ನೀಡಿದ್ದಾರೆ. ಆದರೆ ವಯಸ್ಸಾದ ಹಸುವನ್ನು ಯಾಕೆ ಕಡಿಯಬಾರದು ಎಂಬ ಪ್ರಶ್ನೆ ಕಾಡುತ್ತದೆ ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಪ್ರಶ್ನಿಸಿದ್ದಾರೆ.

ಬಿಜೆಪಿ ಸರ್ಕಾರದಲ್ಲಿ ಜಾರಿಗೆ ತಂದಿರುವ ಗೋಹತ್ಯೆ ನಿಷೇಧ ಕಾಯ್ದೆ ಬಗ್ಗೆ ನಾವು ಚರ್ಚೆ ಮಾಡಿಲ್ಲ. ಮುಂದೆ ಚರ್ಚೆ ಮಾಡುತ್ತೇವೆ. ಬಿಜೆಪಿ ಜಾರಿಗೆ ತಂದಿರುವ ಮಸೂದೆಯಲ್ಲಿ ಎಮ್ಮೆ, ಕೋಣವನ್ನು ಕಡಿಯುವುದಕ್ಕೆ ಅವಕಾಶ ನೀಡಿದ್ದಾರೆ. ಆದರೆ, ವಯಸ್ಸಾದ ಹಸು ಕಡಿಯಬಾರದೆಂದು ಹೇಳಲಾಗಿದೆ. ಎಮ್ಮೆ, ಕೋಣವನ್ನೇ ಕಡಿದಾಗ ವಯಸ್ಸಾದ ಹಸು ಯಾಕೆ ಕಡಿಯಬಾರದು ಎಂದು ಪ್ರಶ್ನಿಸಿದರು.

ಈ ಹಿಂದೆ ನಾವು ಮೂರು ಹಸುಗಳನ್ನು ಸಾಕುತ್ತಿದ್ದೆವು. ಒಂದು ಹಸು ತೀರಿ ಹೋದಾಗ ಏನು ಮಾಡಬೇಕೆಂದು ವೈದ್ಯರನ್ನು ಕೇಳಿದಾಗ ಮಣ್ಣು (ಹೂಳು) ಮಾಡಿ ಎನ್ನುತ್ತಿದ್ದರು. ಮೃತ ಹಸುವನ್ನು ಹತ್ತಾರು ಮಂದಿ ಎತ್ತಿಕೊಂಡು ಕೊಂಡೊಯ್ಯಲು ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ಜೆಸಿಬಿ ತರಿಸಿ ಹೂಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ತಂದಿರುವ ಮಸೂದೆಯಲ್ಲಿನ ನ್ಯೂನತೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ ಎಂದರು. ಅಮುಲ್ ಎದುರಿಸಲು ಸಿದ್ಧ: ಸಧ್ಯಕ್ಕೆ ಕರ್ನಾಟಕಕ್ಕೆ ಅಮುಲ್ ಉತ್ಪನ್ನಗಳು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಮುಲ್ ಉತ್ಪನ್ನಗಳು ಮಾರುಕಟ್ಟೆಗೆ ಬಂದಿರುವ ಬಗ್ಗೆ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ಬಂದಿದ್ದರೆ ಅದನ್ನು ಸಮರ್ಥವಾಗಿ ಎದುರಿಸಲು ನಾವು ಸಿದ್ಧ. ನಮ್ಮ ರೈತರ ಪರವಾಗಿ ನಾವು ಇರಬೇಕು. ಈಗ ಬೇರೆ ವಿಚಾರಗಳ ಬಗ್ಗೆ ಚರ್ಚೆ ಮಾಡೋದು ಬೇಡ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿಎಂ ಜತೆ ಚರ್ಚೆ: ಪಶುಸಂಗೋಪನಾ ಇಲಾಖೆ ದೊಡ್ಡದಾದರೂ ಬರುತ್ತಿರುವ ಅನುದಾನ ಮಾತ್ರ ಕಡಿಮೆಯಾಗಿರುವ ಕಾರಣ ಸಿಎಂ ಜತೆ ಚರ್ಚೆ ನಡೆಸುವೆ. ಮುಖ್ಯಮಂತ್ರಿಗಳು ಮೊದಲು ಇಲಾಖೆಯ ಸಚಿವರಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ, ಹೆಚ್ಚಿನ ಅನುದಾನ ಕೊಡುವಂತೆ ಮನವಿ ಮಾಡುತ್ತೇನೆ. ಮೈಸೂರು ಜಿಲ್ಲೆಯ ಅಭಿವೃದ್ಧಿಗೆ ಮತ್ತು ಮುಂದೆ ಆಗಬೇಕಿರುವ ಕೆಲಸ ಕಾರ್ಯಗಳ ಬಗ್ಗೆ ಸಿಎಂ ಜತೆ ಚರ್ಚಿಸಲಾಗುವುದು. ಜಿಲ್ಲೆಯವರೇ ಆಗಿದ್ದ ಡಿ.ದೇವರಾಜ ಅರಸು ನಂತರ ಸಿದ್ದರಾಮಯ್ಯ ಒಳ್ಳೆಯ ಆಡಳಿತ ಕೊಟ್ಟಿದ್ದಾರೆ. ಮತ್ತೆ ಸಿಎಂ ಆಗಿರುವ ಕಾರಣ ಹೆಚ್ಚಿನ ಯೋಜನೆಗಳನ್ನು ತರಲು ಪ್ರಯತ್ನಿಸಲಾಗುವುದು ಎಂದರು.



ವಾರಭವಿಷ್ಯ

4.6.2023 ರಿಂದ 10.6.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ವೃಷಭ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಕಟಕ, ಬುಧ–ಮೇಷ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ನಿಮ್ಮ ರಾಶಿಯಲ್ಲಿ ಹಲವು ಗ್ರಹಗಳ ಸಂಯೋಜನೆ ಇರುವ ಕಾರಣ ಮಾಡುವ ಕೆಲಸಗಳಲ್ಲಿ ಸಣ್ಣ ಪುಟ್ಟ ಅಡಚಣೆಗಳು ಉಂಟಾಗಲಿದೆ. ಕುಟುಂಬ ಸದಸ್ಯರೊಂದಿಗೆ ಭಿನ್ನಾಭಿಪ್ರಾಯಗಳು ಉಂಟಾಗುತ್ತದೆ. ಪ್ರಮುಖ ವಿಷಯಗಳಲ್ಲಿ ಆಲೋಚನೆಗಳು ಸ್ಥಿರವಾಗಿರುವುದಿಲ್ಲ. ವಾರದ ಕಡೆಗೆ ಶುಭ ಚಂದ್ರನಿಂದ ಕೆಲಸದ ಹೊರೆ ಕಡಿಮೆ ಆಗುವುದು. ಅನಿರೀಕ್ಷಿತ ಧನಾದಾಯವೂ ಆಗುವುದು.
ಶ್ರೀಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ–5.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಆರಂಭಕ್ಕೆ ವ್ಯಾಪಾರ, ವ್ಯವಹಾರಗಳು ಚುರುಕಾಗಿ ನಡೆಯುವುದು. ಬಾಕಿ ವಸೂಲಾತಿಯೂ ಆಗುವುದು. ಗುರುಬಲ ಇದೆ. ನಿವೇಶನ, ಗೃಹ ಹೊಂದಲು ಅವಕಾಶವಿದೆ. ನಿಮ್ಮ ವಿರೋಧಿಗಳೇ ಮಿತ್ರತ್ವ ಬಯಸಿ ಬರುವರು. ಆಟೋಮೊಬೈಲ್ ವ್ಯಾಪಾರಿಗಳಿಗೂ, ರಿಪೇರಿ ಮಾಡುವವರಿಗೂ ಕೈ ತುಂಬಾ ಸಂಪಾದನೆ ಆಗುವುದು. ಸಾಲ ಸೋಲಗಳಿಂದ ಬಿಡುಗಡೆ ಹೊಂದುವ ಅವಕಾಶವಿದೆ. ಅಜೀರ್ಣ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–7



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದಾರಂಭಕ್ಕೆ ಹಲವು ಮೂಲಗಳಿಂದ ಧನ ಸಂಚಯ. ಪ್ರಯತ್ನಕ್ಕೆ ತಕ್ಕುದಾದ ಫಲ ದೊರೆಯುವುದು. ಕೃಷಿ ಹಾಗೂ ಪಶು ಸಂಗೋಪನೆಯಿಂದ ಹಣ ಸಂಪಾದನೆ. ಗುರು–ರಾಹು ವ್ಯಯಸ್ಥಿತರಾಗಿದ್ದು ನಂಬಲರ್ಹರಲ್ಲದವರೊಡನೆ ಹಣಕಾಸು ವ್ಯವಹಾರ ಮಾಡದಿರಿ. ಕೆಟ್ಟ ಅಭ್ಯಾಸಕ್ಕೆ ದಾಸರಾಗುವ ಸಾಧ್ಯತೆ ಇರುತ್ತದೆ. ಸ್ವನಿಯಂತ್ರಣ ಮುಖ್ಯ ಪುಣ್ಯಕ್ಷೇತ್ರ ಸಂದರ್ಶನದಿಂದ ವಾರಕ್ಕೆ ತೆರೆ.
ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯು)
ಸಪ್ತಾಹದ ಆದಿಗೆ ಧನ–ಧಾನ್ಯ ವೃದ್ಧಿ, ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ ವಸ್ತು ವ್ಯಾಪಾರಿಗಳಿಗೆ ಅಧಿಕವಾದ ಧನಲಾಭ. ಧೈರ್ಯ, ಸಾಹಸಗಳಿಂದ ಕಾರ್ಯ ಸಾಧನೆಗೆ ಪ್ರೇರಣೆ ಆಗುವುದು. ಕ್ರೀಡೆಗಳಲ್ಲಿ ಜಯ, ಯಾರೋ ಮಾಡಿದ ತಪ್ಪಿಗೆ ನೀವು ಬೆಲೆ ತೆರಬೇಕಾದೀತು. ವ್ಯಯಸ್ಥಿತ ಕೇತುವಿನಿಂದ ಕೋಪದಿಂದ ಕಾರ್ಯನಾಶ. ಸತಿ–ಪತಿಯರು ಪರಸ್ಪರ ಸೋತು ಗೆದ್ದರೆ ಗೃಹ ಶಾಂತಿಗೆ ಭಂಗ ಬರದು.
ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಲಾಭ ಸ್ಥಾನದಲ್ಲಿ ಗುರು ಸಂಚಾರವಿದ್ದು ಎದುರಾಗುವ ಕಷ್ಟ ಪರಂಪರೆಗಳಿಂದ ಪಾರಾಗುವಿರಿ. ರಾಜಕೀಯ ವಿರೋಧಿಗಳಿಗೆ ಸೂಕ್ತ ಉತ್ತರ ನೀಡಲು ಸಮರ್ಥರಾಗುವಿರಿ. ಆಮೋದ–ಪ್ರಮೋದಗಳಲ್ಲಿ ಸಮಯ ಕಳೆಯುವುದು. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಬೆಟ್ಟಿಂಗ್ ಇತ್ಯಾದಿಗಳಲ್ಲಿ ಹಾಕಬೇಡಿ. ಆಡಿಟರ್‌ಗಳಿಗೆ ದೊಡ್ಡ ಕಂಪನಿ ಫೈಲುಗಳು ದೊರೆಯುವುದು. ವಾಯು ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಸತ್ಯನಾರಾಯಣಸ್ವಾಮಿ ಸೇವೆ. ಶುಭ ಸಂಖ್ಯೆ–3.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರ ರಾಶ್ಯಾಧಿಪತಿ ಬೃಹಸ್ಪತಿಯ ಕೃಪೆ ನಿಮ್ಮದಾಗಿದೆ. ಕೆಲವೊಂದು ಶುಭ ಪ್ರಸಂಗಗಳು ಅಯಾಚಿತವಾಗಿ ಘಟಿಸುವ ಸಾಧ್ಯತೆ ಇದೆ. 'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ' ಎಂಬಂತೆ. ಕುಟುಂಬ ಸದಸ್ಯರೊಡನೆ ಆಮೋದ–ಪ್ರಮೋದಗಳು, ಮನೋರಂಜನೆಗಳು ಉಂಟಾಗಲಿದೆ. ರಾಜಕಾರಣಿಗಳಿಗೆ ನೂತನ ಅಧಿಕಾರ ದೊರೆಯುವ ಸಂಭವವಿದೆ.
ಶ್ರೀ ಸುದರ್ಶನ ಮಂತ್ರ ಪಠಿಸಿ. ಶುಭ ಸಂಖ್ಯೆ–5




ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ನಿಮ್ಮ ಅನಿರೀಕ್ಷಿತ ನಡವಳಿಕೆಗೆ ಅಷ್ಟಮ ಶನಿದೇವ ಕಾರಣ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆ ಉಂಟಾಗಲಿದೆ. ಸ್ಥಿರತೆ ಇಲ್ಲದ ನಿರ್ಧಾರಗಳಿಂದ ನಿಮ್ಮ ಕಾರ್ಯ ಯೋಜನೆಗಳು ಉಲ್ಟಾ ಹೊಡೆಯುವುದು. ವಾರಮಧ್ಯೆ ನಂತರ ದೈವ ಕೃಪೆಯಿಂದ ಅಧಿಕಾರಿಗಳ ಭೇಟಿಯಿಂದ ಆಸ್ತಿ ವಿಚಾರಗಳು ಇತ್ಯರ್ಥ. ಉದ್ಯೋಗ ಸ್ಥಾನದಲ್ಲಿ ಬಡ್ತಿ ಜೊತೆ ಸ್ಥಾನ ಬದಲಾವಣೆ ಸಂಭವ. ವಾರಾಂತ್ಯಕ್ಕೆ ಕುಲದೇವತಾ ದರ್ಶನ.
ಶ್ರೀದೇವೀ ಉಪಾಸನೆ. ಶುಭ ಸಂಖ್ಯೆ–4.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ಸಾಡೇಸಾತಿ ಪ್ರಭಾವದ ನಡುವೆಯೂ ಚಂದ್ರಗ್ರಹ ಭ್ರಮಣ ನಿಮ್ಮ ರಕ್ಷೆಗೆ ಇದೆ. ಹೋಟೆಲ್, ಲಾಡ್ಜಿಂಗ್, ಕೇಟರಿಂಗ್, ಟ್ರಾವೆಲ್ಸ್ ವ್ಯವಹಾರಿಗಳಿಗೆ ಬಿಡುವಿಲ್ಲದ ಕೆಲಸ ಹಾಗೂ ಹೆಚ್ಚಿನ ಧನಾದಾಯ. ಜಲಜನ್ಯ ವಸ್ತುಗಳಿಂದ ಅಧಿಕ ಧನಲಾಭವಾಗುವುದು. ಮುತ್ತು, ಹವಳ ವ್ಯಾಪಾರ ಬಿರುಸಾಗಿ ನಡೆಯುವುದು. ಸಹೋದರರೊಡನೆ ಆಸ್ತಿ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದು. ಸಟ್ಟಾ–ಬೆಟ್ಟಿಂಗ್‌ಗಳಿಂದ ದೂರವಿರಿ.
ಶ್ರೀ ಶನಿ ಸ್ತೋತ್ರ. ಶುಭ ಸಂಖ್ಯೆ–2.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ, ಸುವರ್ಣ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಪರೀಕ್ಷೆ, ಸಂದರ್ಶನದಲ್ಲಿ ಯಶಸ್ಸು, ಮಕ್ಕಳ ಯಶಸ್ಸಿನಿಂದ ಹರುಷ. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯಾಗುವ ಸಮಭವ. ಸತಿ–ಪತಿಯರಲ್ಲಿ ವಿಶ್ವಾಸ ಬಿಗಡಾಯಿಸುವುದು, ಪರಸ್ಪರ ಸೋತು ಗೆಲ್ಲಿ. ಲೆಕ್ಕ ಪರಿಶೋಧಕರಿಗೆ ಉತ್ತಮ ಆದಾಯವಾಗುವುದು. ಗ್ಯಾಸ್ ಟ್ರಬಲ್ ಕಾಡಬಹುದು.
ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–2.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ತೀರ್ಥಯಾತ್ರೆಯ ಯೋಗವಿದೆ. ಪಶು ವ್ಯಾಪಾರದಿಂದಲೂ ಕ್ಷೀರಜನ್ಯ ವಸ್ತು, ಐಸ್ ಕ್ರೀಂ ವ್ಯಾಪಾರದಿಂದಲೂ ಅಧಿಕ ಆದಾಯವನ್ನು ಗಳಿಸುವಿರಿ. ಶುಭ ಚಂದ್ರನ ಪರಿಭ್ರಮಣ ಜನ್ಮ ಶನಿಯ ಪ್ರಭಾವವನ್ನು ತಗ್ಗಿಸಲಿದ್ದಾನೆ. ಮಾತೃಶ್ರೀಯವರ ಕಡೆಯಿಂದ ನೆರವು ದೊರೆಯುವುದು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ವ್ಯವ ಹಾರಗಳಿಂದ ತೊಂದರೆಗೆ ಗುರಿಯಾಗುವರು.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ–6



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ದೈವ ಸಹಾಯವಿಲ್ಲದೆ ಜಯ ದೊರಕದು. ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಈ ನಡುವೆ ಫ್ಯಾನ್ಸಿ ಅಂಗಡಿಯವರಿಗೆ, ಕೆಟರಿಂಗ್ ವ್ಯವಹಾರಿಗಳಿಗೆ ಆದಾಯ ಚೆನ್ನಾಗಿರುತ್ತದೆ. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ಅಧಿಕ ತಿರುಗಾಟಗಳಿಂದ ದೇಹಾಯಾಸ, ನಿಮಗೆ ವಿಶ್ರಾಂತಿಯ ಅಗತ್ಯವಿದೆ. ವಾರಾಂತ್ಯಕ್ಕೆ ಮನೆಗೆ ಆದರಣೀಯ ಬಂಧುಗಳ ಆಗಮನದಿಂದ ಹರುಷದ ವಾತಾವರಣ.
ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–1.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ನೌಕರಿ ತಲಾಶ್ ಮಾಡುವವರಿಗೆ ಶುಭ ಸಮಾಚಾರ ಬರುವುದು. ಪ್ರೀತಿ–ಪ್ರಣಯ ವಿಷಯಗಳಲ್ಲಿ ಉಂಟಾಗಿದ್ದ ಕಸಿವಿಸಿಗಳು ನಿವಾರಣೆ ಆಗುವುದು. ಹೊಸ ವ್ಯಾಪಾರ ಅನುಷ್ಠಾನ ಮಾಡಲು ಅಡ್ಡಿಯಿಲ್ಲ. ರೆಡಿಮೇಡ್ ವಸ್ತ್ರ ವ್ಯಾಪಾರಿಗಳಿಗೂ, ವಾಹನ ಏಜೆನ್ಸಿಗಳಿಗೂ ವಿಶೇಷ ಧನಲಾಭವಾಗುವುದು. ಕಾರ್ಮಿಕ ವರ್ಗದವರಿಗೆ ತೊಂದರೆ. ನಿಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ತಲೆ ಹಾಕಿ ಸಂಕಷ್ಟಕ್ಕೆ ಸಿಲುಕಿಕೊಳ್ಳಬೇಡಿ.
ಶ್ರೀರಾಘವೇಂದ್ರ ಸ್ತುತಿ. ಶುಭ ಸಂಖ್ಯೆ–4.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಕಾನೂನು ಜಾರಿಗೆ ಬರಲಿ

ಮೈಸೂರು, ಜೂನ್ 3(ಸಿಎನ್)– ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆನೀಡುವಂತಹ ಕಾನೂನು ದೇಶದಲ್ಲಿ ಜಾರಿಯಾಗಬೇಕೆಂದು ಎಂದು ಯುವ ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಒತ್ತಾಯಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ದೇಶ, ರಾಜ್ಯ ಹಾಗೂ ನಮ್ಮ ಮೈಸೂ ರಿನ ಹೆಣ್ಣು ಮಕ್ಕಳ ಪ್ರತಿನಿಧಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುಮಾರು 28 ಅಂಶಗಳ ನೇರ ಪ್ರಶ್ನೆಗಳುಳ್ಳ ಬಹಿರಂಗ ಪತ್ರ ಬರೆದಿದ್ದೇನೆ. ಅತ್ಯಾಚಾರಿಗಳಿಗೆ ಆಗು ತ್ತಿರುವ ಶಿಕ್ಷೆಯ ಪ್ರಮಾಣ ಸಾಧಾರಣ ವಾಗಿದೆ. ಹೀನ ಕೃತ್ಯದಲ್ಲಿ ಭಾಗಿ ಯಾದ ವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುವ ಮೂಲಕ ತಕ್ಕ ಪಾಠ ಕಲಿಸಬೇಕು ಎಂಬ ಉದ್ದೇಶದಿಂದ ಪ್ರಧಾನಿಗೆ ಪತ್ರ ಬರೆದಿ ದ್ದೇನೆ ಎಂದರು.

ದೆಹಲಿಯ ನಿರ್ಭಯಾ ಅತ್ಯಾಚಾರ ಪ್ರಕರಣ, ಮಂಡ್ಯದ ಬಾಲಕಿ ಮೇಲೆ ನಡೆದ ಅತ್ಯಾಚಾರ ಪ್ರಕರಣ, ಶ್ರದ್ಧಾ ಹತ್ಯೆ, ಹೈದರಾಬಾದ್‌ನ ದಿಶಾ ಸಾಮೂಹಿಕ ಅತ್ಯಾಚಾರ, ಸಾಕ್ಷಿಯ ಭೀಕರ ಕೊಲೆ ಹೀಗೆ ಕೆದಕಿದರೆ ಇಂಥ ನೂರಾರು ಪ್ರಕರಣ ದೇಶದಲ್ಲಿ ಕಂಡು ಬಂದಿದೆ. ಇದನ್ನು ಅವಲೋಕಿಸಿದರೆ ದೇಶ ಎತ್ತ ಸಾಗುತ್ತಿದೆ ಎಂಬ ಆತಂಕ ಎದುರಾಗುತ್ತದೆ. ಇನ್ನು ಅವರಿಗೆ ಶಿಕ್ಷೆ ನೀಡಿರುವ ಸ್ಥಿತಿಗತಿ ಬಗ್ಗೆ ಜನಸಾಮಾನ್ಯರಿಗೆ ಅರಿವೇ ಇರಲ್ಲ. ಕೆಲವರಿಗೆ ನೀಡಿರುವ ಶಿಕ್ಷೆ ಪ್ರಮಾಣ ಕೂಡ ಜನರ ಗಮನಕ್ಕಿಲ್ಲ. ದಿನೇದಿನೇ ಕೊಲೆ, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ, ವಿದೇಶದಲ್ಲಿ ಜಾರಿ ಇರುವಂತೆ ಕಠಿಣ ಕಾನೂನು, ನಮ್ಮಲ್ಲೂ ಜಾರಿಯಾಗಬೇಕು. ಆ ನಿಟ್ಟಿನಲ್ಲಿ ಪ್ರಧಾನಿಯವರು ದೇಶದ ಕಾನೂನು ಸುವ್ಯವಸ್ಥೆ, ಜನರ ಹಿತ ಕಾಪಾಡುವಲ್ಲಿ ಕಠಿಣ ಕ್ರಮಕ್ಕೆ ಸೂಚಿಸಬೇಕು ಎಂದು ಮನವಿ ಮಾಡಿದರು.

ಸಿಎಂ ನೇತೃತ್ವದಲ್ಲಿ ಪಠ್ಯ ಪರಿಷ್ಕರಣೆ ಖಚಿತ

ಶಿವಮೊಗ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪಠ್ಯ ಪುಸ್ತಕದ ಪರಿಷ್ಕರಣೆ ಖಚಿತ. ಈ ಸಂಬಂಧ ಸಾಹಿತಿಗಳು ಹಾಗೂ ತಜ್ಞರ ಜೊತೆ ಮಾತನಾಡಿದ್ದೇನೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.



ಶಿವಮೊಗ್ಗದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮುಂದಿನ ವರ್ಷ ಈ ರೀತಿ ಸಮಸ್ಯೆ ಆಗದಂತೆ ಈಗಿನಿಂದಲೇ ಕ್ರಮ ಕೈಗೊಳ್ಳುತ್ತೇವೆ. ಪಠ್ಯ ಪರಿಷ್ಕರಣೆ ಸಂಬಂಧ ಸೋಮವಾರ ಸಂಜೆ ಬಂದು ಕಾಣುವಂತೆ ಮುಖ್ಯಮಂತ್ರಿ ಹೇಳಿದ್ದಾರೆ ಎಂದರು. ನನ್ನ ಇಲಾಖೆಯಲ್ಲಿ ಶಿಕ್ಷಕರ ಕೊರತೆಯಿದೆ. ಶಿಕ್ಷಕರ ಕೌನ್ಸಲಿಂಗ್ ಆರಂಭವಾಗಿದೆ. 52 ಶಾಲೆಗಳಲ್ಲಿ ಅತಿಥಿ ಶಿಕ್ಷಕರು ಬೇಡ ಎಂದು ಪಾಲಕರು ಮಕ್ಕಳನ್ನು ಶಾಲೆಗೆ ಕಳಿಸಿಲ್ಲ. ಅದಕ್ಕಾಗಿ ಕಾಯಂ ಶಿಕ್ಷಕರ ನೇಮಕ ಸಂಬಂಧ ಕ್ರಮ ಕೈಗೊಂಡಿದ್ದೇನೆ ಎಂದರು.

ಯುವನಿಧಿ, ಅನ್ನಭಾಗ್ಯ ಯೋಜನೆಗಳ ಜಾರಿಗೆ ಮಾರ್ಗಸೂಚಿ ಪ್ರಕಟ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈಡೇರಿಸುತ್ತಿದೆ. ಇದೀಗ ಯುವನಿಧಿ ಹಾಗೂ ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಹೊರಡಿಸಿದೆ. ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ ಕೌಶಲಾಭಿ ವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿವೆ.

ಯುವನಿಧಿ ಮಾರ್ಗಸೂಚಿಗಳು

2022–23ರಲ್ಲಿ ತೇರ್ಗಡೆ ಹೊಂದಿದ ವೃತ್ತಿಶಿಕ್ಷಣವೂ ಸೇರಿ ಎಲ್ಲ ಪದವೀಧರರಿಗೆ ನೋಂದಣಿ ಮಾಡಿಕೊಂಡ ದಿನದಿಂದ 24 ತಿಂಗಳ (2 ವರ್ಷ) ವರೆಗೆ ಪ್ರತಿ ತಿಂಗಳು 3 ಸಾವಿರ ರೂ., ಡಿಪ್ಲೊಮಾ ಪದವೀಧರರಿಗೆ 1,500 ರೂಪಾಯಿ ನೀಡಲಾಗುವುದು. ಅಷ್ಟರೊಳಗೆ ಉದ್ಯೋಗ ಪಡೆದವರು ಘೋಷಿಸಿಕೊಳ್ಳಬೇಕು. ಉದ್ಯೋಗ ಸಿಕ್ಕರೆ ನಿಧಿ ಸ್ಥಗಿತವಾಗಲಿದೆ. ಯುವಕ, ಯುವತಿ + ತೃತೀಯಲಿಂಗಿಗಳಿಗೂ ಅನ್ವಯ. ಜಾಯಿ, ಧರ್ಮ, ಲಿಂಗ ಬೇಧವಿಲ್ಲದೇ ಸಹಾಯನಿಧಿ ನೀಡಲಾಗುತ್ತದೆ. ಇದಕ್ಕೆ ಅರ್ಜಿ ಹಾಕಬೇಕು

ಬ ಪದವಿ ಅಥವಾ ಡಿಪ್ಲೋಮಾ ಮುಗಿಸಿ 6 ತಿಂಗಳಾದರೂ ಉದ್ಯೋಗ ದೊರಕದ ಕನ್ನಡಿಗರು ಮಾತ್ರ ಯುವ ನಿಧಿ ಯೋಜನೆಗೆ ಅರ್ಹರಾಗಿರುತ್ತಾರೆ. ಎರಡು ವರ್ಷಗಳವರೆಗೆ ಇವರು ನಿರುದ್ಯೋಗ ಭತ್ಯೆ ಪಡೆಯಬಹುದು. 2 ವರ್ಷದೊಳಗೆ ಉದ್ಯೋಗ ಸಿಕ್ಕರೆ ಭತ್ಯೆ ಪಾವತಿ ಸ್ಥಗಿತ ಮಾಡಲಾಗುವುದು. ಉದ್ಯೋಗ ದೊರಕಿದ ಬಗ್ಗೆ ತಪ್ಪು ಮಾಹಿತಿ ನೀಡಿದರೆ ಅಥವಾ ಉದ್ಯೋಗ ಸಿಕ್ಕಿದೆ ಎಂದು ಘೋಷಣೆ ಮಾಡದಿದ್ದರೆ ದಂಡ, ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು, ಅರ್ಹ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಯುವ ನಿಧಿ ಯೋಜನೆ ಭತ್ಯೆ ಪಾವತಿ, ಪದವಿ ಅಥವಾ ಡಿಪ್ಲೋಮಾ ಬಳಿಕ ಉನ್ನತ ವ್ಯಾಸಂಗ ಮುಂದುವರಿಸಿದರೆ ಭತ್ಯೆ ಇಲ್ಲ, ಅಪ್ರೆಂಟಿಸ್ ವೇತನ ಪಡೆಯುತ್ತಿರುವವರಿಗೆ ಭತ್ಯೆ ಇಲ್ಲ, ಸರ್ಕಾರಿ ಅಥವಾ ಖಾಸಗಿ ವಲಯದಲ್ಲಿ ಉದ್ಯೋಗ ಪಡೆದವರಿಗೆ ಭತ್ಯೆ ಇಲ್ಲ, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ಹಾಗೂ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಸ್ವಯಂ ಉದ್ಯೋಗ ಮಾಡುತ್ತಿರುವವರಿಗೂ ಯುವ ನಿಧಿ ಯೋಜನೆಯಡಿ ಭತ್ಯೆ ಸಿಗುವುದಿಲ್ಲ

ಅನ್ನಭಾಗ್ಯ ಯೋಜನೆಗೆ ಮಾರ್ಗಸೂಚಿಗಳು

ಜುಲೈ 1 ರಿಂದ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ದಾರರಿಗೆ 'ಅನ್ನಭಾಗ್ಯ' ಯೋಜನೆಯಡಿ 10 ಕೆಜಿ ಅಕ್ಕಿ ವಿತರಿಸಲಾಗುವುದು. ಜು.1 ರಿಂದ ಬಿಪಿಎಲ್ + ಅಂತ್ಯೋದಯ ಅನ್ನ ಕಾರ್ಡುದಾರರಿಗೆ ತಲಾ 10 ಕೆ.ಜಿ. ಅಕ್ಕಿ ಕೊಡುತ್ತೇವೆ.

ಅಂತ್ಯೋದಯ ಪಡಿತರ ಕಾರ್ಡ್ ಹೊಂದಿರುವ ಕುಟುಂಬಗಳಲ್ಲಿ ಮೂವರು ಸದಸ್ಯರಿದ್ದರೆ ತಿಂಗಳಿಗೆ ಕೇಂದ್ರ ಸರ್ಕಾರ ಈವರೆಗೆ ನೀಡುತ್ತಿದ್ದಂತೆ 35 ಕೆ.ಜಿ. ಆಹಾರಧಾನ್ಯ ಉಚಿತ, ಅಂತ್ಯೋದಯ ಪಡಿತರ ಕಾರ್ಡ್ ಹೊಂದಿರುವ ಕುಟುಂಬಗಳಲ್ಲಿ ನಾಲ್ಕು ಜನರಿದ್ದರೆ ತಲಾ 10 ಕೆ.ಜಿ.ಯಂತೆ ಒಟ್ಟು 40 ಕೆ.ಜಿ., ಐವರು ಇದ್ದರೆ ಒಟ್ಟು 50 ಕೆ.ಜಿ. ಪ್ರತಿ ವ್ಯಕ್ತಿಗೆ 10 ಕೆ.ಜಿ.ಯಂತೆ ಆಹಾರಧಾನ್ಯ ನೀಡಲಾಗುವುದು. ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಲ್ಲಿ ಪ್ರತಿ ಸದಸ್ಯರಿಗೆ 10 ಕೆ.ಜಿ.ಯಂತೆ ಉಚಿತ ಆಹಾರ ಧಾನ್ಯ, ಆಹಾರ ಭದ್ರತಾ ಕಾಯ್ದೆಯಡಿ ಕೇಂದ್ರ ಸರ್ಕಾರವು ಈಗಾಗಲೇ ಅಂತ್ಯೋದಯ ಪಡಿತರ ಚೀಟಿ ಹೊಂದಿದ ಕುಟುಂಬಗಳಿಗೆ ತಲಾ 35 ಕೆ.ಜಿ. ಹಾಗೂ ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಲಾ ಐದು ಕೆ.ಜಿ. ಆಹಾರ ಧಾನ್ಯವನ್ನು ಒದಗಿಸುತ್ತಿದೆ. ಹೆಚ್ಚುವರಿ ಆಹಾರ ಧಾನ್ಯದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ.

ಸಿವೇಜ್ ಫಾರಂನ 6 ಲಕ್ಷ ಟನ್ ಕಸಕ್ಕೆ ಶೀಘ್ರ ಮುಕ್ತಿ

● ಸ್ವಚ್ಛ ಭಾರತ ಅಭಿಯಾನದಡಿ 59 ಕೋಟಿ ರೂ. ವೆಚ್ಚದಲ್ಲಿ ಪಾರಂಪರಿಕ ತ್ಯಾಜ್ಯ ತೆರವಿಗೆ ವಾರದೊಳಗೆ ಟೆಂಡರ್ ● ದಿಶಾ ಸಮಿತಿ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಮಾಹಿತಿ ● ತಿಪ್ಪೆ ರಾಜಕಾರಣ ಕೊನೆಗಾಣುತ್ತಿದ್ದೇವೆ; ಸಂಸದರ ಮಾರ್ಮಿಕ ನುಡಿ



ಮೈಸೂರು ಜಿಪಂ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು. ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ಡಿಸಿ ಡಾ.ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಚಿತ್ರದಲ್ಲಿದ್ದಾರೆ.

ಮೈಸೂರು,ಜೂ.3(ಪಿಎಂ)– ಮೈಸೂರಿನ ವಿದ್ಯಾರಣ್ಯಪುರಂನ ಸಿವೇಜ್ ಫಾರಂನಲ್ಲಿರುವ ಪಾರಂಪರಿಕ ತ್ಯಾಜ್ಯಕ್ಕೆ ಮುಕ್ತಿ ನೀಡುವ ಮೂಲಕ ತಿಪ್ಪೆ ರಾಜಕಾರಣ ಕೊನೆಗಾಣಿಸುತ್ತಿದ್ದೇವೆ ಎಂದು ಸಂಸದ ಪ್ರತಾಪ್ ಸಿಂಹ ಮಾರ್ಮಿಕವಾಗಿ ನುಡಿದರು. ಸ್ವಚ್ಛ ಭಾರತ ಅಭಿಯಾನದಡಿ 6 ಲಕ್ಷ ಟನ್ ತ್ಯಾಜ್ಯವನ್ನು 59 ಕೋಟಿ ರೂ. ವೆಚ್ಚದಲ್ಲಿ ತೆರವಿಗೆ ವಾರದೊಳಗೆ ಟೆಂಡರ್ ಕರೆಯಲಾಗುತ್ತಿದೆ ಎಂದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 2023–24ನೇ ಸಾಲಿನ ಮೊದಲನೇ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ)ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಮಿತಿ ಅಧ್ಯಕ್ಷರೂ ಆದ ಸಂಸದರು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಅವರೊಂದಿಗೆ ಪಾರಂಪರಿಕ ತ್ಯಾಜ್ಯ ತೆರವು ಸಂಬಂಧ ನಡೆದಿರುವ ಆಡಳಿತಾತ್ಮಕ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಬಳಿಕ ಮಾಧ್ಯಮದವರಲ್ಲಿ ಅವರು ಈ ಮಾಹಿತಿ ನೀಡಿದರು.

ವಿ.ಸೋಮಣ್ಣ ಅವರು ಉಸ್ತುವಾರಿ ಸಚಿವರಾಗಿದ್ದಾಗ, 2019ರ ನವೆಂಬರ್ ತಿಂಗಳಲ್ಲಿ ಈ ಪಾರಂಪರಿಕ ತ್ಯಾಜ್ಯ ತೆರವು ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿತ್ತು. ಆ ಮೂಲಕ ಕಾಯಕಲ್ಪ ಕೊಡುವ ಪ್ರಯತ್ನ ಮಾಡಲಾಗಿತ್ತು. 18 ಕೋಟಿ ರೂ. ವೆಚ್ಚದ ಟೆಂಡರ್ ಸಹ ಕರೆಯಲಾಗಿತ್ತು. ಆದರೆ ಎಸ್‌ಆರ್ ಮೌಲ್ಯ ಹೆಚ್ಚಾಗಿದೆ ಎಂದು ಮರು ಮೌಲ್ಯಮಾಪನಕ್ಕೆ ಹೋಯಿತು. ಅಲ್ಲಿ 6 ಲಕ್ಷ ಟನ್ ತ್ಯಾಜ್ಯ ಸಂಗ್ರಹವಿದ್ದು, ಸ್ವಚ್ಛ ಭಾರತ ಅಭಿಯಾನದಡಿ ಸುಮಾರು 59 ಕೋಟಿ ರೂ. ವೆಚ್ಚದಲ್ಲಿ ಅದನ್ನು ತೆರವು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸದರಿ ಪಾರಂಪರಿಕ ತ್ಯಾಜ್ಯ ತೆರವಿಗೆ ಸರ್ಕಾರದ ಎಲ್ಲಾ ಹಂತದಲ್ಲಿ ಅನುಮೋದನೆ ಸಿಕ್ಕಿದ್ದು, ವಾರದೊಳಗೆ ಟೆಂಡರ್ ಆಗಲಿದೆ. ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿಯವರು ಇದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕೆಂದು ಶ್ರಮಿಸಿದ್ದಾರೆ. ಮೈಸೂರಿನ ತಿಪ್ಪೆಯನ್ನು ಕಡೆಗೂ ತೆರವು ಮಾಡುತ್ತಿದ್ದೇವೆ ಎಂದು ಆಯುಕ್ತರನ್ನು ಅಭಿನಂದಿಸಿ, ಹರ್ಷ ವ್ಯಕ್ತಪಡಿಸಿದರು.

ಎಷ್ಟು ಸಮಯದೊಳಗೆ ತೆರವು ಪೂರ್ಣಗೊಳ್ಳಲಿದೆ ಎಂಬ ಸಂಸದರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತರು, 16 ತಿಂಗಳ ಅವಧಿಯಲ್ಲಿ ತೆರವುಗೊಳಿಸಬೇಕಿದೆ. ಮುಂಗಾರು ಮಳೆ ಅವಧಿ ಸೇರಿದಂತೆ 22 ತಿಂಗಳೊಳಗೆ ತೆರವು ಮಾಡಬೇಕಿದೆ ಎಂದು ಮಾಹಿತಿ ನೀಡಿದರು.

ಆರೋಗ್ಯ ಕಾರ್ಡ್ ವಿತರಣೆಯಲ್ಲಿ ಹಿಂದೆ: ಜಿಲ್ಲೆಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ವಿತರಣೆಯಲ್ಲಿ ಶೇ.20 ರಷ್ಟು ಮಾತ್ರವೇ ಪ್ರಗತಿಯಾಗಿರುವ ಮಾಹಿತಿಗೆ ಸಂಸದರು, ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಕಳೆದ ಬಾರಿಯ ಸಭೆಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ವಿತರಣೆಯಲ್ಲಿ ಗಮನಾರ್ಹ ಸಾಧನೆಯಾಗಬೇಕು ಎಂದು ಸೂಚಿಸಲಾಗಿತ್ತು ಎಂದು ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆರ್‌ಸಿಹೆಚ್‌ಓ ಡಾ.ಜಯಂತ್, ಜಿಲ್ಲೆಯಲ್ಲಿ 25 ಲಕ್ಷ ಮಂದಿಗೆ ಕಾರ್ಡ್ ವಿತರಿಸಬೇಕಿದ್ದು, ಈ ಪೈಕಿ 5 ಲಕ್ಷದ 65 ಸಾವಿರ ಮಂದಿಗೆ ಕಾರ್ಡ್ ವಿತರಿಸಲಾಗಿದೆ ಎಂದು ತಿಳಿಸಿದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಂಸದರು, ಅಲ್ಲಿಗೆ ಕೇವಲ ಶೇ.20 ರಷ್ಟು ಮಾತ್ರವೇ ಕಾರ್ಡ್ ವಿತರಣೆಯಾಗಿದೆ. ಉಳಿದ ಶೇ.80ರಷ್ಟು ಮಂದಿಗೆ ಯಾವಾಗ ನೀಡುತ್ತಿದ್ದೀರಿ. ಇನ್ನು ಮೂರು ತಿಂಗಳಲ್ಲಿಯಾದರೂ ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದರಲ್ಲದೆ, ಜಯಂತರವರೇ ಮೈಸೂರಿನಲ್ಲೇ ಇರಬೇಕೆಂದು ಇಲ್ಲೇ ಇದ್ದೀರಿ. ಕೆಲವನ್ನಾದರೂ ಮಾಡಿ ಎಂದು ತಾಕೀತು ಮಾಡಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕಾರ್ಡ್ ವಿತರಣೆಗೆ ಯಾವ್ಯಾವ ಕಾರ್ಯತಂತ್ರ ರೂಪಿಸಿದ್ದೀರಿ. ತಾಲೂಕುವಾರು ಮಾಹಿತಿ ಕೊಡಿ ಎಂದು ಡಾ.ಜಯಂತ್ ಅವರಿಗೆ ಸೂಚಿಸಿದರು. ಕೊನೆಗೆ ಇದರ ಮೇಲ್ವಿಚಾರಣೆ ನಡೆಸಿ ಪ್ರಗತಿ ಸಾಧಿಸಲು ಒತ್ತು ನೀಡಲಾಗುವುದು ಎಂದು ಸಂಸದರಿಗೆ ಡಿಸಿಯವರು ಹೇಳಿದರು.

ಗೈರು ಹಾಜರಿಗೆ ನೋಟಿಸ್ ನೀಡಿ: ಎಲ್ಲಾ ಇಲಾಖೆ ಅಧಿಕಾರಿಗಳಿಂದ ಹಾಜರಾತಿ ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಗೈರು ಹಾಜರಿದ್ದವರಿಗೆ ನೋಟಿಸ್ ನೀಡಬೇಕೆಂದು ಸಭೆ ಆರಂಭದಲ್ಲೇ ಸಂಸದರು ಸೂಚನೆ ನೀಡಿದರು. ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವೈದ್ಯಕೀಯ ಕಾಲೇಜು ಶತಮಾನೋತ್ಸವ ಪ್ರಯುಕ್ತ

ಹೊಸ ಹೊರರೋಗಿ ವಿಭಾಗ ಸ್ಥಾಪನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ

ಕೆಆರ್ ಆಸ್ಪತ್ರೆ ಆವರಣದಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪನೆಗೂ ಯೋಜನೆ ರೂಪಿಸಿ; ಸಂಸದರ ಸೂಚನೆ

ಮೈಸೂರು,ಜೂ.3(ಪಿಎಂ)– ಮೈಸೂರು ವೈದ್ಯಕೀಯ ಕಾಲೇಜು ಶತಮಾನೋತ್ಸವ ಪ್ರಯುಕ್ತ ಹೊಸ ಹೊರರೋಗಿ ವಿಭಾಗ ಸ್ಥಾಪನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಂಸದ ಪ್ರತಾಪ್ ಸಿಂಹ ಸೂಚನೆ ನೀಡಿದರಲ್ಲದೆ, ಕೆಆರ್ ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆ ಸಾಮರ್ಥ್ಯದ ಡಯಾಲಿಸಿಸ್ ಕೇಂದ್ರ ಸ್ಥಾಪನೆಗೆ ಯೋಜನೆ ರೂಪಿಸಿ ಎಂದು ಮೈಸೂರು ವೈದ್ಯಕೀಯ ಕಾಲೇಜು ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ ಅವರಿಗೆ ನಿರ್ದೇಶನ ನೀಡಿದರು.

ಜಿಪಂ ಸಭಾಂಗಣದಲ್ಲಿ ನಡೆದ ದಿಶಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಕಾಲೇಜಿನ ಶತಮಾನೋತ್ಸವ ವರ್ಷ ಆಗಿರುವುದರಿಂದ ಹೊಸ ಹೊರ ರೋಗಿ ವಿಭಾಗ ನಿರ್ಮಾಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನು ದಾನ ಪಡೆಯಲು ಪ್ರಸ್ತಾವನೆ ಸಿದ್ಧಪಡಿಸಿ, ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ನನಗೂ ಅದರ ಪ್ರತಿಗಳನ್ನು ನೀಡಿ ಎಂದರು. ದೊಡ್ಡ ರೋಗ ದೊಡ್ಡವರಿಗೆ ಮಾತ್ರ ಬರಲ್ಲ, ಪಾಪದವರಿಗೇ ಬರುವುದು. ಮೈಸೂರಿಗೆ 200 ಹಾಸಿಗೆ ಸಾಮರ್ಥ್ಯದ ಡಯಾಲಿಸ್ ಕೇಂದ್ರ ಅಗತ್ಯವಿದೆ. ಅಷ್ಟೊಂದು ಬೇಡಿಕೆ ಇದ್ದು, ಸದ್ಯಕ್ಕೆ 100 ಹಾಸಿಗೆ ಸಾಮರ್ಥ್ಯದ ಡಯಾಲಿಸಿಸ್ ಕೇಂದ್ರ ಸ್ಥಾಪನೆಗಾದರೂ ಯೋಜನೆ ರೂಪಿಸಿ ಎಂದು ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಾ.ಕೆ.ದಾಕ್ಷಾಯಿಣಿ, ಪಿಕೆಟಿಬಿ ಆಸ್ಪತ್ರೆ ನವೀಕರಿಸಿ ಒಂದು ಕೇಂದ್ರದ ವ್ಯವಸ್ಥೆ ಮಾಡಲು ಅವಕಾಶ ಇದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ 20 ಹಾಸಿಗೆ ವ್ಯವಸ್ಥೆಯಡಿ ಸೌಲಭ್ಯ ಕಲ್ಪಿಸಲಾಗಿದೆ. ಕೆಆರ್ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ 20 ಹಾಸಿಗೆ ಇದ್ದು, ಇಲ್ಲಿ ದಿನಕ್ಕೆ 20ರಿಂದ 25 ಡಯಾಲಿಸಿಸ್ ಆಗುತ್ತಿದೆ. ಸದ್ಯಕ್ಕೆ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಮಾಡಿಕೊಳ್ಳಬಹುದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಕನಿಷ್ಠ 45 ಹಾಸಿಗೆ ಸಾಮರ್ಥ್ಯದ ಡಯಾಲಿಸಿಸ್ ಕೇಂದ್ರ ಸ್ಥಾಪನೆಗೆ ಪ್ರಸ್ತಾವನೆ ಸಿದ್ಧಪಡಿಸಿ ಎಂದು ನಿರ್ದೇಶನ ನೀಡಿದರು.

2024ರ ಆಗಸ್ಟ್‌ಗೆ ಶತಮಾನೋತ್ಸವ: ಇಡೀ ಕೆಆರ್ ಆಸ್ಪತ್ರೆ ನವೀಕರಣಕ್ಕೆ ನಮ್ಮ ಸರ್ಕಾರದ ಅವಧಿಯಲ್ಲಿ 89.5 ಕೋಟಿ ಅನುದಾನ ನೀಡಿದ್ದು, ಟೆಂಡರ್ ಆಗಿದೆ. ಕಾಮಗಾರಿ ಪ್ರಾರಂಭ ಆಗಿದೆಯೆ ಎಂದು ಸಂಸದರು ಮಾಹಿತಿ ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಾ.ಕೆ.ಆರ್. ದಾಕ್ಷಾಯಿಣಿ, 2024ರ ಆಗಸ್ಟ್‌ನಲ್ಲಿ ಶತಮಾನೋತ್ಸವ ಇದ್ದು, 2023ರ ಸೆಪ್ಟೆಂಬರ್‌ನಿಂದ ವರ್ಷಪೂರ್ತಿ ಆಚರಣೆಗೆ ಸಜ್ಜಾಗುತ್ತಿದ್ದೇವೆ. ನಾಣ್ಯ ಮತ್ತು ಅಂಚೆ ಚೀಟಿ ಹೊರ ತರಲು ಯೋಜನೆ ಮಾಡಿದ್ದೇವೆ. 89.5 ಕೋಟಿ ಅನುದಾನದಡಿ 14 ವಿಧದ ಕಾಮಗಾರಿ ಪ್ರಾರಂಭಗೊಂಡಿದೆ. ಚೆಲುವಾಂಬ ಆಸ್ಪತ್ರೆಯಲ್ಲಿ 3 ಕಡೆ, ಕೆಆರ್ ಆಸ್ಪತ್ರೆಯಲ್ಲಿ 2 ಕಡೆ ಹಾಗೂ ಪಿಕೆಟಿಬಿ ಆಸ್ಪತ್ರೆ, ಕಾಲೇಜಿನ ಆಡಳಿತ ವಿಭಾಗದ ಕಟ್ಟಡದಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ಡಿಸೆಂಬರ್ ಒಳಗೆ ಕಾಮಗಾರಿ ಮುಗಿಯಲಿವೆ ಎಂದರು.



ವೀರ ಸಾವರ್ಕರ್ ಜಯಂತಿ ಕಾರ್ಯಕ್ರಮಕ್ಕೆ ತಡೆಯತ್ನ; ಮುಕ್ತ ವಿವಿ ಘಟಿಕೋತ್ಸವ ಭವನದ ಬಳಿ ಕೆಲಕಾಲ ಬಿಗುವಿನ ವಾತಾವರಣ

● ಭವನದ ಹೊರಗೆ ಚಿತ್ರಕಲೆ ಬಿಡಿಸಲು ಆರಂಭಿಸಿದ ಮಕ್ಕಳು ● ಪೀಕಲಾಟಕ್ಕೀಡಾದ ಮುಕ್ತ ವಿವಿ ಆಡಳಿತ; ಕೊನೆಗೆ ಗೇಟ್ ತೆಗೆದು ಭವನ ಪ್ರವೇಶಕ್ಕೆ ಅವಕಾಶ ● ಇದರ ಹಿಂದಿರುವ ಕಾಣದ 'ಕೈ' ಬಗ್ಗೆ ಸಾವರ್ಕರ್ ಅಭಿಮಾನಿಗಳ ಆಕ್ರೋಶ



ಪೊಲೀಸರು ತಡೆಯೊಡ್ಡಿದ್ದರಿಂದ ಮುಕ್ತ ವಿವಿ ಗೇಟ್ ಬಳಿಯೇ ಚಿತ್ರಕಲೆಯಲ್ಲಿ ನಿರತರಾಗಿದ್ದ ವಿದ್ಯಾರ್ಥಿಗಳು.

ಮೈಸೂರು, ಜೂ.3(ಎಸ್‌ಬಿಡಿ)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ವೀರ ಸಾವರ್ಕರ್ ಜಯಂತಿ ಪ್ರಯುಕ್ತ ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳಿಗೆ ತೆರಳುತ್ತಿದ್ದವರನ್ನು, ಗೇಟ್‌ನಲ್ಲೇ ಪೊಲೀಸರು ತಡೆದಿದ್ದರಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಶನಿವಾರ ಸಂಜೆ ಆಯೋಜಿಸಲಾಗಿದ್ದ ಸಾವರ್ಕರ್ ಜಯಂತಿ ಪ್ರಯುಕ್ತ ಮಧ್ಯಾಹ್ನ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಪ್ರಬಂಧ, ಛದ್ಮ ವೇಷಭೂಷಣ ಸ್ಪರ್ಧೆ ಹಾಗೂ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸಂಘಟಕರು ಮುಕ್ತ ವಿವಿ ಆವರಣಕ್ಕೆ ಆಗಮಿಸಿದಾಗ ಅದಕ್ಕೂ ಮೊದಲೇ ಸ್ಥಳದಲ್ಲಿದ್ದ ಪೊಲೀಸರು ತಡೆದಿದ್ದಾರೆ.

ಕಾರ್ಯಕ್ರಮಕ್ಕೆ ಅನುಮತಿ ಪಡೆಯದ ಕಾರಣ ಒಳಗೆ ಬಿಡುವುದಿಲ್ಲ ಎಂದು ಪೊಲೀಸರು ಹೇಳಿದರೆ, ಅನುಮತಿ ಪಡೆದೇ ಕಾರ್ಯಕ್ರಮ ಆಯೋಜಿಸಿರುವುದಾಗಿ ಸಂಘಟಕರು ವಾದಿಸಿದ್ದಾರೆ. ಪರಿಣಾಮ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಈ ಗೊಂದಲ ಮುಂದುವರೆದಿದ್ದರಿಂದ ಸ್ಪರ್ಧೆಗೆ ಆಗಮಿಸಿದ್ದ ವಿದ್ಯಾರ್ಥಿಗಳು ಗೇಟ್ ಮುಂಭಾಗವೇ ಕುಳಿತುಕೊಂಡು ಬಿಸಿಲಿನಲ್ಲೇ ಚಿತ್ರಕಲೆ ಬಿಡಿಸುವಲ್ಲಿ ನಿರತರಾದರು.

ಸ್ಥಳಕ್ಕಾಗಮಿಸಿದ ಸಂಸದ ಪ್ರತಾಪ್ ಸಿಂಹ, ಕಾರ್ಯಕ್ರಮಕ್ಕೆ ತಡೆಯೊಡ್ಡಿದ್ದಕ್ಕೆ ಕಿಡಿಕಾರಿದರಲ್ಲದೆ ಸಂಬಂಧಪಟ್ಟವರೊಂದಿಗೆ ಮಾತನಾಡಿದರು. ಅತ್ತ ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಯಶಸ್ವಿನಿ, ಟ್ರಸ್ಟಿಗಳಾದ ಕೆ.ಎಂ.ನಿಶಾಂತ್, ರಾಕೇಶ್ ಭಟ್, ರಜತ್, ಶಿವು ಮತ್ತಿತರರೂ ಮುಕ್ತ ವಿವಿಯ ಅಧಿಕಾರಿಗಳೊಂದಿಗೆ ಮಾತನಾಡಿದ್ದರಿಂದ ಮಧ್ಯಾಹ್ನ 3.45ರ ವೇಳೆಗೆ ಎಲ್ಲರನ್ನೂ ಸಭಾಂಗಣದ ಒಳಗಡೆ ಬಿಡಲಾಯಿತು. ಆಯೋಜಕರು ಸಾವರ್ಕರ್ ಪರ ಘೋಷಣೆ ಕೂಗುತ್ತ ಒಳ ಹೋದರು. ನಂತರ ಕಾರ್ಯಕ್ರಮ ಸಾಂಗವಾಗಿ ನೆರವೇರಿತು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಪ್ರತಿಷ್ಠಾನದ ಟ್ರಸ್ಟಿ ಕೆ.ಎಂ. ನಿಶಾಂತ್, ಸಾವರ್ಕರ್ ಜಯಂತಿ ಕಾರ್ಯಕ್ರಮಕ್ಕೆ 1.56 ಲಕ್ಷ ಹಾಗೂ ಜಿಎಸ್‌ಟಿ ಮೊತ್ತವನ್ನು ಪಾವತಿಸಿ ಮುಕ್ತ ವಿವಿಯ ಘಟಿಕೋತ್ಸವ ಭವನವನ್ನು 4 ದಿನಗಳ ಹಿಂದೆಯೇ ಕಾಯ್ದಿರಿಸಲಾಗಿತ್ತು. ಮುಕ್ತ ವಿವಿಯ ಕುಲಪತಿಯವರನ್ನು ಭೇಟಿಯಾಗಿ ಅವರ ಅನುಮೋದನೆಯನ್ನೂ ಪಡೆಯಲಾಗಿತ್ತು. ಜೊತೆಗೆ ಪೊಲೀಸರ ಅನುಮತಿ ಪಡೆಯಲಾಗಿತ್ತು ಆದರೆ ನಿನ್ನೆ ರಾತ್ರಿ ಸಿದ್ಧತಾ ಕಾರ್ಯಕ್ಕೆಂದು ಘಟಿಕೋತ್ಸವ ಭವನಕ್ಕೆ ಹೋದಾಗ ಸಭಾಂಗಣ ನೀಡದಂತೆ ಮುಖ್ಯಮಂತ್ರಿಗಳ ಕಚೇರಿಯಿಂದ ನಿರ್ದೇಶನ ಬಂದಿದೆ ಎಂದರು. ಕೂಡಲೇ ಮುಕ್ತ ವಿವಿಯ ಕುಲಪತಿ ಹಾಗೂ ಕುಲಸಚಿವರನ್ನು ಸಂಪರ್ಕಿಸಲು ಪ್ರಯತ್ನಿಸಿದೆವು. ಆದರೆ ಅವರು ಸಂಪರ್ಕಕ್ಕೆ ಸಿಗಲಿಲ್ಲ. ಬೆಳಗ್ಗೆ ಭೇಟಿಯಾದ ರಾಯಿತು ಎಂದು ವಾಪಸ್ಸಾದೆವು. ಆದರೆ ಇಂದು ಬೆಳಗ್ಗೆ 10 ಗಂಟೆಗೆ ಪೊಲೀಸ್ ಬಂದೋಬಸ್ತ್ ಮಾಡಿಕೊಂಡಿದ್ದರು ಎಂದರು.

ಪೊಲೀಸರು ಒಳಹೋಗದಂತೆ ತಡೆದಿದ್ದರಿಂದ ಸಾವರ್ಕರ್ ಜಯಂತಿ ಪ್ರಯುಕ್ತ ಚಿತ್ರಕಲೆ ಇನ್ನಿತರ ಸ್ಪರ್ಧೆಗೆ ಆಗಮಿಸಿದ್ದ ಮಕ್ಕಳು ಗೇಟ್ ಬಳಿಯೇ ಕುಳಿತು ಚಿತ್ರ ಬಿಡಿಸಿದರು. ಮುಕ್ತ ವಿವಿಯ ಧೋರಣೆ ವಿರುದ್ಧ ಪ್ರತಿಭಟನೆಗೆ ಸಿದ್ಧವಾಗಿದ್ದೆವು. ಅಷ್ಟರಲ್ಲಿ ಸಂಸದ ಪ್ರತಾಪ್ ಸಿಂಹ ಅವರೂ ಬಂದು ಸಂಬಂಧಪಟ್ಟವರೊಂದಿಗೆ ಮಾತನಾಡಿದರು. ಕೊನೆಗೆ ಕುಲಪತಿಯವರು ಕಾರ್ಯಕ್ರಮಕ್ಕೆ ಅನುಮತಿ ನೀಡಿರುವುದಾಗಿ ಮುಕ್ತ ವಿವಿಯ ಸಿವಿಲ್ ಸೆಕ್ಷನ್ ಅಧಿಕಾರಿ ಭಾಸ್ಕರ್ ತಿಳಿಸಿದರು ಎಂದರು. ಈ ಬಗ್ಗೆ ಸ್ಪಷ್ಟನೆಗೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರನ್ನು ಸಂಪರ್ಕಿಸಲು ಯತ್ನಿಸಲಾಯಿತಾದರೂ ಅದು ಸಾಧ್ಯವಾಗಲಿಲ್ಲ.

ಸರ್ಕಾರದ ಕೈವಾಡ: ಸಿಂಹ ಆರೋಪ



ಮೈಸೂರು, ಜೂ.3– ಸಾವರ್ಕರ್ ಜಯಂತಿ ಕಾರ್ಯಕ್ರಮಕ್ಕೆ ಪೊಲೀಸರು ಹಾಗೂ ಅಧಿಕಾರಿಗಳು ಅಡ್ಡಿಪಡಿಸಲು ರಾಜ್ಯ ಸರ್ಕಾರ ಕಾರಣ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಮುಕ್ತ ವಿವಿ ಆವರಣಕ್ಕೆ ಭೇಟಿ ನೀಡಿದ್ದ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಸಾವರ್ಕರ್ ಜಯಂತಿ ಕಾರ್ಯಕ್ರಮದ ಆಯೋಜಕರು ನಿಗದಿತ ಶುಲ್ಕ ಪಾವತಿಸಿ ಮುಕ್ತ ವಿವಿಯ ಸಭಾಂಗಣ ಕಾಯ್ದಿರಿಸಿದ್ದರು. ಆದರೆ ಕೊನೆ ಗಳಿಗೆಯಲ್ಲಿ ಇಲ್ಲದ ತಕರಾರು ಮಾಡಲಾಗಿದೆ. ಸರ್ಕಾರದ ಕಡೆಯಿಂದ ಒತ್ತಡ ಬಂದ ಕಾರಣ ಕಾರ್ಯಕ್ರಮವನ್ನೇ ರದ್ದು ಮಾಡುವ ಪ್ರಯತ್ನ ನಡೆಸಲಾಗಿದೆ. ನಾವೆಲ್ಲ ಪ್ರತಿಭಟನೆ ಎಚ್ಚರಿಕೆ ನೀಡಿದ ಕಾರಣ ಮತ್ತೆ ಅನುಮತಿ ನೀಡಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಈ ರೀತಿಯ ಮನಸ್ಥಿತಿಯಿಂದ ಹೊರಬರಬೇಕು. ಎರಡೆರಡು ಜೀವಾವಧಿ ಶಿಕ್ಷೆಗೆ ಒಳಗಾದ ಏಕೈಕ ಭಾರತೀಯ ಸಾವರ್ಕರ್. ನೆಹರೂ ಕೂಡ ಅಷ್ಟೊಂದು ಶಿಕ್ಷೆ ಅನುಭವಿಸಿಲ್ಲ. ಕಾಂಗ್ರೆಸ್‌ನವರಿಗೆ ಯಾಕೆ ಸಾವರ್ಕರ್ ಬಗ್ಗೆ ಈ ರೀತಿಯ ತಗಾದೆ ಎನ್ನುವುದು ಗೊತ್ತಿಲ್ಲ. ನೆಹರೂ ಹಾಗೂ ಇಂದಿರಾ ಗಾಂಧಿ ಅವರ ಕಾಲದಲ್ಲಿ ಸಾವರ್ಕರ್ ಬಗ್ಗೆ ಇಂತಹ ಧೋರಣೆ ಇರಲಿಲ್ಲ. ಸೋನಿಯಾ ಗಾಂಧಿ ನೇತೃತ್ವದ ಕಾಂಗ್ರೆಸ್ ದ್ವೇಷದ ರಾಜಕಾರಣವನ್ನು ಮುಂದು ವರೆಸಬಾರದು. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದರು. ಗೋಹತ್ಯೆ ನಿಷೇಧ ಕಾಯ್ದೆ ಹಿಂತೆಗೆದುಕೊಳ್ಳಲು ಚಿಂತನೆ ನಡೆಸಿರುವುದಾಗಿ ಸಚಿವ ವೆಂಕಟೇಶ್ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಗೋವಿನ ಬಗ್ಗೆ ಮಹಾತ್ಮ ಗಾಂಧಿ ಅವರ ಭಾವನೆ ಏನಿತ್ತು ಎಂಬುದನ್ನು ಕಾಂಗ್ರೆಸ್ ಮೊದಲು ಅರ್ಥ ಮಾಡಿಕೊಳ್ಳಬೇಕು ಎಂದು ಕಿಡಿಕಾರಿದರು.

ಸಾವರ್ಕರರದ್ದು ಜಾತಿ, ಮತ, ಭೇದವಿಲ್ಲದ ಹಿಂದುತ್ವ

'ಕ್ಷಮಾಪಣೆ' ಎಂದು ದೂರಲಾಗುತ್ತಿದೆ; ಇದು ತಪ್ಪು

ಐದನೇ ಪುಟದಿಂದ

ಅಪರೂಪದ ಶಕ್ತಿ: ಸಾವರ್ಕರ್ ಏನು ಎಂಬುದಕ್ಕಿಂತ ಏನಲ್ಲ ಎಂಬುದನ್ನು ತಿಳಿಯಬೇಕು. ಸಾವರ್ಕರ್ ಅದ್ಭುತ ಬರಹಗಾರ. ಅವರ ಬರಹದ ಪ್ರಭಾವ ಹೇಗಿತ್ತೆಂದರೆ ಅವರು ಬರೆದ ಪುಸ್ತಕಗಳನ್ನು ಕದ್ದುಮುಚ್ಚಿ ಮಾರಾಟ ಮಾಡುತ್ತಿದ್ದ ಕ್ರಾಂತಿಕಾರಿಗಳು ಆ ದುಡ್ಡಿನಿಂದ ತಮ್ಮ ಕ್ರಾಂತಿ ಕಾರ್ಯವನ್ನು ನಡೆಸುತ್ತಿದ್ದರು. 1857ರ ಕೃತಿಯನ್ನು ಸಾವರ್ಕರ್ ಬರೆಯದೇ ಇದ್ದಿದ್ದರೆ ಇವತ್ತಿಗೂ ನಮ್ಮ ಪಠ್ಯಪುಸ್ತಕದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬುದರ ಬದಲು ಸಿಪಾಯಿ ದಂಗೆ ಎಂದೇ ಇರುತ್ತಿತ್ತು ಅದೇ ರೀತಿ ಓದುತ್ತಿದ್ದೆವು. ಹಾಗೆಯೇ ಅವರ ಮಾತಿನ ಪ್ರೇರಣೆಯಿಂದ ಮದನ್‌ಲಾಲ್ ದಿಂಗ್ರಾ ಎಂಬ ಸಾಮಾನ್ಯ ವ್ಯಕ್ತಿ, ಲಂಡನ್‌ನಲ್ಲಿ ಕರ್ಜನ್ ವೈಲಿ ಎಂಬ ಬ್ರಿಟಿಷ್ ಅಧಿಕಾರಿಯನ್ನು ಹತ್ಯೆ ಮಾಡಲು ಸಾಧ್ಯವಾಯಿತು. ಲಂಡನ್‌ನಲ್ಲಿಯೇ ಬ್ರಿಟಿಷರ ವಿರುದ್ಧ ಸಂಘಟನೆ ಮಾಡಿದ್ದು, ಸಾವರ್ಕರ್‌ಗೆ ಇದ್ದ ಸಂಘಟನೆಯ ಶಕ್ತಿಗೆ ಸಾಕ್ಷಿ. ಅವರೊಬ್ಬ ಭಾಷಾ ಶಾಸ್ತ್ರಜ್ಞ, ಧಾರ್ಮಿಕ ಚಿಂತನೆಯಲ್ಲಿ ಮುಂದಾಳತ್ವ ವಹಿಸಿದ್ದವರು. ಇತಿಹಾಸ ತಜ್ಞ ಒಟ್ಟಾರೆ ಸಾವರ್ಕರ್ ಅಪರೂಪದ ಶಕ್ತಿ ಎಂದರು.

ಮೈನಾ ಹಕ್ಕಿಗಳೊಂದಿಗೆ ಮಾತು: ಸಾವರ್ಕರ್ ಅವರನ್ನು ಮಾನಸಿಕವಾಗಿ ಕುಗ್ಗಿಸುವ ಕೆಲಸವನ್ನು ಪ್ರತಿದಿನವೂ ಮಾಡುತ್ತಿದ್ದರು. ಆದರೆ ಮಾನಸಿಕವಾಗಿ ಕುಗ್ಗದ ಸಾವರ್ಕರ್ ಅವರಿಗೆ ಅದ್ಭುತವಾದ ಶಕ್ತಿಯಿತ್ತು. ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನದ ನಡುವೆಯೂ ಜೀವಂತವಾಗಿರುವುದನ್ನು ಕಂಡುಕೊಂಡರು. ಅದು ಎಲ್ಲಿ ಎಂದರೆ ಅವರಿದ್ದ ಜೈಲಿನ ಕೊಠಡಿಯ ಕಿಟಕಿ ಬಳಿ ಬರುತ್ತಿದ್ದ ಮೈನಾ ಹಕ್ಕಿಗಳೊಂದಿಗೆ ಮಾತನಾಡುತ್ತಿದ್ದ ಸಾವರ್ಕರ್ 'ಮೈನಾ ಎಂತಹ ಹಕ್ಕಿ ನೀನು, ನೀನು ಎಲ್ಲಿ ಬೇಕಾದರೂ ಹೋಗಬಹುದು. ನಿನಗೆ ಒಂದಷ್ಟು ಕತೆಗಳನ್ನು ಹೇಳುತ್ತೇನೆ ಎನ್ನುತ್ತಿದ್ದರು. ನನ್ನ ದೇಶದ ಜನತೆಗೆ ಹೋಗಿ ಹೇಳುತ್ತೀಯಾ ಎಂದು ಮೈನಾ ಹಕ್ಕಿಗೆ ಕತೆಗಳನ್ನು ಹೇಳುವ ರೂಪದಲ್ಲಿ ಬರೆಯುತ್ತಿದ್ದರು. ದೇಶದಲ್ಲಿನ ಸ್ವಾತಂತ್ರ್ಯದ ಕಿಚ್ಚು ಆರದಂತೆ ಕಾಪಾಡಿಕೊಳ್ಳಲು ಈ ರೀತಿ ಮಾಡುತ್ತಿದ್ದರು. ಅವರೇ ಬರೆದಿರುವಂತೆ ನಾನು ಮೈನಾ ಹಕ್ಕಿಗಳ ಮೇಲೆ ಕುಳಿತು ದೇಶ ಸಂಚಾರ ಮಾಡುತ್ತಿದ್ದೆ. ಮೈನಾ ಹಕ್ಕಿಗಳು ನನಗೆ ದೇಶವನ್ನು ತೋರಿಸುತ್ತಿದ್ದವು ಎಂದು ಹೇಳಿರುವ ಸಾಲನ್ನು ಪಠ್ಯಪುಸ್ತಕದಲ್ಲಿ ಹಾಕಿದರೆ, ಮೈನಾ ಹಕ್ಕಿ ಮೇಲೆ ಕುಳಿತು ಯಾರಾದರೂ ಹಾರೋಕ್ಕಾಗುತ್ತೇ... ಎಂದು ಕೇಳುವ ಅಯೋಗ್ಯರಿಗೆ ಉತ್ತರ ಕೊಡಲು ಸಾಧ್ಯವೇ ಎಂದು ವ್ಯಂಗ್ಯವಾಡಿದರು.

ಗಾಂಧೀಜಿಯನ್ನು ಪ್ರಶ್ನೆ ಮಾಡಲಿಲ್ಲ ವೇಕೆ: ಮಹಾತ್ಮ ಗಾಂಧೀಜಿ ಖಿಲಾಫತ್ ಚಳವಳಿಗೆ ಯಾಕೆ ಬೆಂಬಲ ನೀಡಿದರು ಎಂಬುದನ್ನು ಯಾರೂ ಪ್ರಶ್ನೆ ಮಾಡಲಿಲ್ಲ ವೇಕೆ? ಇಲ್ಲಿನ ಮುಸಲ್ಮಾನರಿಗೂ ಅಲ್ಲಿನ ಖಲೀಫನಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಆ ಖಲೀಫನಿಗೋಸ್ಕರ ಇಲ್ಲಿನ ಮುಸಲ್ಮಾನರು ಬೆಂಬಲ ಕೊಟ್ಟಿದ್ದರ ಪರಿಣಾಮವಾಗಿ ಈ ದೇಶದಲ್ಲಿ ಹಿಂದೂ ಮತ್ತು ಮುಸಲ್ಮಾನರು ಪ್ರತ್ಯೇಕ ಎಂಬ ಕಂದಕವನ್ನು ನಿರ್ಮಾಣ ಮಾಡಿದ್ದು ಮಹಾತ್ಮ ಗಾಂಧೀಜಿ ಎಂಬುದನ್ನು ಯಾರಾದರು ಪ್ರಶ್ನೆ ಮಾಡಿದ್ದಾರಾ? ಆದರೆ ಇಂತಹ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕಂಡುಕೊಳ್ಳಲು ಹಿಂದೂಗಳನ್ನು ಆಂತರಿಕವಾಗಿ ಬಲಪಡಿಸುತ್ತಿದ್ದ ಸಾವರ್ಕರ್ ಅವರನ್ನು ಮಾತ್ರ ಹಿಂದುತ್ವ ವಾದಿ ಹಿಂದುತ್ವವಾದಿ ಎಂದು ಜರಿಯುವ ಪ್ರಯತ್ನ ನಡೆಯುತ್ತಿರುವುದು.

ಬಿಡುಗಡೆ ಮಾಡಿಬಿಡುತ್ತಿದ್ದರು. ಗಾಂಧಿ ವಿರುದ್ಧ ರಾಜಕೀಯಕ್ಕೆ ಹೋದವರನ್ನು ಜನರೇ ಒಪ್ಪುತ್ತಿರಲಿಲ್ಲ. ಅಷ್ಟರಮಟ್ಟಿಗೆ ಪುಕ್ಕಲುತನ ಬೆಳೆದುಹೋಗಿತ್ತು. ಹಾಗಾಗಿ ನಾನು ರಾಜಕೀಯಕ್ಕೆ ಹೋದರು ಏನೂ ಪ್ರಯೋಜನವಿಲ್ಲ ಎಂದು ಸಾವರ್ಕರ್ ತಿಳಿದುಕೊಂಡಿದ್ದರು ಎಂದರು. ರಾಜಕೀಯಕ್ಕೆ ಹೋಗಲ್ಲ ಎಂದು ಬರೆದುಕೊಟ್ಟು ಸಾವರ್ಕರ್ ಹೊರಬಂದ ಮೇಲೆ ಜನರನ್ನು ಹೋರಾಟಕ್ಕೆ ಹುರಿದುಂಬಿಸಿದರು. ನೀವೆಲ್ಲಾ ಸೈನ್ಯಕ್ಕೆ ಸೇರಿದರೆ ಹೋರಾಟದ ಕಿಚ್ಚು ಹೆಚ್ಚಾಗುತ್ತದೆ, ಹೇಗೆ ಬಂದೂಕು ಬಳಕೆ ಮಾಡಬೇಕೆಂದು ತಿಳಿಯುತ್ತದೆ. ನಂತರ ಸ್ವಾತಂತ್ರ್ಯ ಚಳವಳಿಗೆ ಹೊಸ ಮಾರ್ಗ ತೋರಿಸಬಹುದು ಎಂದು ಅರಿವು ಮೂಡಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ದಕ್ಷಿಣ ಭಾರತದವರ ಪಾತ್ರ ಮಹತ್ವವಾಗಿಲ್ಲ ಎನ್ನುವ ಕಾಲಘಟ್ಟದಲ್ಲಿ ಸಾವರ್ಕರ್ ಈ ರೀತಿಯಲ್ಲಿ ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸಿದರು. ಹಾಗಾಗಿ ಅವರ ವಿರುದ್ಧದ ಆರೋಪವೆಲ್ಲಾ ಸುಳ್ಳು ಎಂದರು.

ಬ್ರಿಟಿಷ್ ಸಾಮ್ರಾಜ್ಯ ಮುಂದುವರೆಯಲು ಅನುಕೂಲ ವಾಗುವಂತೆ ರಚಿಸಿಕೊಂಡಿದ್ದ ಇತಿಹಾಸ ಪುಸ್ತಕಗಳನ್ನು ಓದಿ ನೆಹರೂ ಅವರು ಜೈಲಿನಲ್ಲಿ 'ಡಿಸ್ಕವರಿ ಆಫ್ ಇಂಡಿಯಾ' ಬರೆದರು. ನೆಹರೂ ಪುಸ್ತಕ ಎಂಬ ಕಾರಣಕ್ಕೆ ಅದು ಪ್ರಸಿದ್ಧ ಹಾಗೂ ಅಧಿಕೃತವಾಯಿತು. ನಿರಂತರವಾಗಿ ಅಂಬೇಡ್ಕರ್ ಅವರನ್ನು ಹೀಯ್ಯಾಳಿಸುತ್ತಿದ್ದವರಿಗೆಲ್ಲಾ ನೆಹರೂ ಅವರೇ ಮಾದರಿಯಾಗಿದ್ದರು. ನೆಹರೂ ಅವರು ಜೈಲಿನಲ್ಲಿದ್ದಾಗ ಅವರ ತಂಗಿ ಕೃಷ್ಣಾ ಹುತೀಸಿಂಗ್ ನೋಡಲು ಹೋಗಿದ್ದರು. ಆ ಬಗ್ಗೆ ತಮ್ಮ 'ವಿತ್ ನೋ ರಿಗ್ರೇಟ್ಸ್' ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಜೈಲಿನಲ್ಲಿ ದೊಡ್ಡ ಗಾಜಿನ ಕಿಟಕಿ, ತಂಪಾದ ಹವಾ, ಒಂದೇ ಟೇಬಲ್, ಕುರ್ಚಿ, ಸೋಫಾ, ಮಂಚ, ನಮ್ಮ ಅಣ್ಣನ ಬಡತನ ನೋಡಿ ಕಣ್ಣಲ್ಲಿ ನೀರು ಬಂತು ಎಂದು ತಿಳಿಸಿದ್ದಾರೆ. ಆ ಪುಸ್ತಕವನ್ನು ದೇ.ಜವರೇಗೌಡರು (ದೇಜಗೌ) ಅವರು 'ನೆನಪು ಕಹಿಯಲ್ಲ' ಶೀರ್ಷಿಕೆಯಲ್ಲಿ ಕನ್ನಡಕ್ಕೆ ತುಂಬಾ ಚೆನ್ನಾಗಿ ಅನುವಾದ ಮಾಡಿದ್ದಾರೆ. ಖಂಡಿತ ಎಲ್ಲರೂ ಓದಬೇಕು ಎಂದು ಹೇಳಿದರು.

> ಅಧಿಕಾರಕ್ಕೆ ಬಂದು ಇನ್ನೂ ವಾರ ಕಳೆದಿಲ್ಲ. ಅಷ್ಟರಲ್ಲೇ ಸಾವರ್ಕರ್ ಕುರಿತ ಕಾರ್ಯಕ್ರಮವನ್ನು ರದ್ದುಮಾಡಬೇಕು ಎಂದು ಯೋಜನೆ ಮಾಡುತ್ತಾರೆ ಎಂದರೆ, ಪ್ರಜಾಪ್ರಭುತ್ವವನ್ನು ಏನು ಮಾಡಲು ಹೊರಟಿದ್ದಾರೆ. ನಮ್ಮದು ಸಂವಿಧಾನ ಆಧಾರಿತ ಸರ್ಕಾರ ಎನ್ನುವವರು ಮತ್ತೊಂದು ಪಕ್ಷದ ವಾದವನ್ನು ಕೇಳುವುದಕ್ಕೆ ಸಿದ್ಧವಿಲ್ಲ ಎಂದರೆ ಯಾವ ರೀತಿಯ ಸರ್ಕಾರವಿದು. ಇದು ಹಿಟ್ಲರ್ ಮಾದರಿ ಸರ್ಕಾರ.
> – ಚಕ್ರವರ್ತಿ ಸೂಲಿಬೆಲೆ, ವಾಗ್ಮಿ

2024ಕ್ಕೆ ಬಿಗ್ ಚಾಲೆಂಜ್...

2024 ನಮ್ಮ ಮುಂದಿರುವ ಬಿಗ್ ಚಾಲೆಂಜ್ ಆಗಿದೆ. ಭಾರತೀಯತೆ ಒಪ್ಪುವವರ, ಸಮರ್ಥಿಸುವವರ ಮತ್ತು ಭಾರತೀಯತೆಯನ್ನು ಧಿಕ್ಕರಿಸುವವರ ನಡುವೆ ನಡೆಯುವ ದೊಡ್ಡ ಹೋರಾಟ ಇದಾಗಿದೆ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿದರು. ಇದನ್ನು ರಾಜಕೀಯ ಎಂದು ತಿಳಿಯುವುದಕ್ಕಿಂತ ಭಾರತದ ಅಸ್ತಿತ್ವ ಎಂದು ತಿಳಿದುಕೊಳ್ಳಬೇಕು. ವ್ಯಕ್ತಿಯೊಬ್ಬರ ಬದಲು ಇಡೀ ರಾಷ್ಟ್ರಕ್ಕಾಗಿ ಹೇಳುತ್ತಿದ್ದೇನೆ. ಸದ್ಯ ಭಾರತ ವಿಶ್ವದ ಮೂರನೇ ಅತೀದೊಡ್ಡ ಆರ್ಥಿಕತೆಯ ರಾಷ್ಟ್ರವಾಗಿದೆ. ಭಾರತವನ್ನು ಪಕ್ಕಕ್ಕಿಟ್ಟು, ಬೇರೆ ಯಾವ ರಾಷ್ಟ್ರವೂ ತನ್ನ ಸ್ವಾಸ್ಥ್ಯವನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲ. ಇದನ್ನು ಬೇರೆ ದೇಶಗಳಿರಲೀ ನಮ್ಮಲ್ಲಿರುವವರೇ ಸಹಿಸಿಕೊಳ್ಳುತ್ತಿಲ್ಲ. ಮೊದಲಿನಂತೆ ಥರ್ಡ್ ವರ್ಡ್ ಕಂಟ್ರಿ ಎಂದು ಕರೆಸಿಕೊಂಡು ಬೇಡುವ ಸ್ಥಿತಿಗೆ ನಿಲ್ಲಬೇಕು ಎಂಬ ವಾತಾವರಣವನ್ನು ನಿರ್ಮಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಸಮರ್ಥವಾಗಿ ಎದುರಿಸಿ ನಿಲ್ಲುವ ಶಕ್ತಿಯನ್ನು ಸಾವರ್ಕರ್ ಹಿಂದುತ್ವ ನೀಡಲಿದೆ.

ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಪ್ರದಾನ

ಖ್ಯಾತ ಲೇಖಕ, ಇತಿಹಾಸಕಾರ ವಿಕ್ರಂ ಸಂಪತ್ ಅವರಿಗೆ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ 'ವೀರ ಸಾವರ್ಕರ್ ಸಮ್ಮಾನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ವಾಗ್ಮಿ ಚಕ್ರವರ್ತಿ ಸೂಲಿಬೆಲೆ, ಸಾವರ್ಕರ್ ಪ್ರತಿಷ್ಠಾನ ಮೈಸೂರು ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ಮತ್ತಿತರರಿದ್ದರು. ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಇತಿಹಾಸಕಾರ ವಿಕ್ರಂ ಸಂಪತ್, 1960ರಲ್ಲಿ ಸಾವರ್ಕರ್ ಅವರ ಕಡೆಯ ಜೀವನ ಚರಿತ್ರೆ ಪ್ರಕಟವಾಯಿತು. ಅದಾದ ನಂತರ ಅವರ ಜೀವನವನ್ನು ಪರಾಮರ್ಶಿಸುವ ಪ್ರಯತ್ನ ನಡೆಯಲಿಲ್ಲ. ಸ್ವಾತಂತ್ರ್ಯ ನಂತರದಲ್ಲಿ ಬೇಕಂತಲೇ ಅವರನ್ನು ಎಲ್ಲದರಿಂದ ದೂರ ಇಡಲಾಗಿತ್ತು. ದೇಶಕ್ಕೆ ಕೇವಲ ಅಹಿಂಸೆ ಮಾರ್ಗದಿಂದ ಸ್ವಾತಂತ್ರ್ಯ ಬರಲಿಲ್ಲ. ನೇತಾಜಿ, ಸಾವರ್ಕರ್‌ರಂತಹ ಹೋರಾಟವೂ ಅದಕ್ಕೆ ಕಾರಣವಾಗಿದೆ ಎಂದರು. ಸಾವರ್ಕರ್ ಕುರಿತ ಕೃತಿಗಾಗಿ ನಾನೂ ಅನೇಕ ವಿರೋಧಗಳನ್ನು ಎದುರಿಸಿದ್ದೇನೆ. ದೇಶಕ್ಕೆ ಹೊಸ ರಾಷ್ಟ್ರೀಯವಾದಿ, ನೈಜ ಇತಿಹಾಸ ರಚನೆಯ ಅಗತ್ಯವಿದ್ದು, ಯುವಜನರು ಈ ಬಗ್ಗೆ ಆಸಕ್ತಿ ತೋರಬೇಕು. ಇದೊಂದು ಧರ್ಮಯುದ್ಧದ ರೀತಿ ಭಾವಿಸಬೇಕು ಎಂದರು.

ವಿಜೇತ ಪುಟಾಣಿಗಳಿಗೆ ಬಹುಮಾನ ವಿತರಣೆ...

ಸಾವರ್ಕರ್ ಜಯಂತಿ ಪ್ರಯುಕ್ತ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಆರ್.ರಾಘವೇಂದ್ರ ಪ್ರಥಮ, ಸೋಮಶೇಖರ ದ್ವಿತೀಯ, ಎಂ.ಆರ್. ನಾಯಕ್ ತೃತೀಯ ಬಹುಮಾನ ಪಡೆದರೆ, ಛದ್ಮವೇಷ ಸಮರ್ಥ್ ಭಾರದ್ವಾಜ್ ಪ್ರಥಮ, ಸಿ.ಪರಮೇಶ್ ದ್ವಿತೀಯ, ಅಪ್ರಮೇಯ ಪ್ರಶಾಂತ್ ತೃತೀಯ ಬಹುಮಾನ ಪಡೆದರು. ವಿಡಿಯೋ ರೀಲ್ಸ್ ಸ್ಪರ್ಧೆಯಲ್ಲಿ ಐಶ್ವರ್ಯ ಪ್ರಥಮ, ಬೆಂಗಳೂರಿನ ಅಭಿಷೇಕ್ ದ್ವಿತೀಯ ಹಾಗೂ ಉಲ್ಲಾಸ್ ತೃತೀಯ ಬಹುಮಾನ ಗೆದ್ದರು.

ಮೈಸೂರು ಮಿತ್ರ ಭಾನುವಾರ 4 ಜೂನ್ 2023

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ರೈತರ ಬೆಳೆಗೆ ಬೆಂಬಲ ಬೆಲೆಗೆ ಒತ್ತಾಯಿಸಿ ಶಾಸಕ ಪೊನ್ನಣ್ಣರಿಗೆ ಮನವಿ



ಮಡಿಕೇರಿ, ಜೂ.3– ಕೊಡಗು ಜಿಲ್ಲೆಯಲ್ಲಿ ಕನಸಾಗಿಯೇ ಉಳಿದಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕನಸನ್ನು ನನಸು ಮಾಡಲು ಹಾಗೂ ಜಿಲ್ಲೆಯ ರೈತರ ಬೆಳೆಗೆ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಕೊಡವ ರೈಡರ್ಸ್ ಕ್ಲಬ್ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಒತ್ತಾಯಿಸಿದೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ನೂತನ ಶಾಸಕರಾಗಿ ಆಯ್ಕೆಯಾಗುವ ಮೂಲಕ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ನೇಮಕಗೊಂಡು, ಸಂಪುಟ ದರ್ಜೆಯ ಸಚಿವ ಸ್ಥಾನ ಪಡೆದಿರುವ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರನ್ನು ಇತ್ತೀಚೆಗೆ ಬೆಂಗಳೂರಿನ ಕಚೇರಿಯಲ್ಲಿ ಭೇಟಿಯಾದ ಕೊಡವ ರೈಡರ್ಸ್ ಕ್ಲಬ್ ಪ್ರಮುಖರು ಸಂಸ್ಥೆಯ ಪರವಾಗಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಕೊಡಗು ಜಿಲ್ಲೆಯ ಬಹುದಿನಗಳ ಬೇಡಿಕೆಯಾಗಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೂಡಲೇ ತೆರೆಯುವ ಮೂಲಕ ಜಿಲ್ಲೆಯ ಜನರ ಪ್ರಾಣ ರಕ್ಷಣೆ ಮುಂದಾಗಬೇಕು ಎಂದು ಒತ್ತಾಯಿಸಿದರು. ಕೊಡಗಿನ ಪ್ರಮುಖ ಬೆಳೆಗಳಾದ ಭತ್ತ, ಕಾಫಿ ಹಾಗೂ ಕರಿಮೆಣಸಿನ ಬೆಳೆಗೆ ಬೆಂಬಲ ಬೆಲೆ ಘೋಷಿಸಲು ಸರ್ಕಾರಕ್ಕೆ ಒತ್ತಾಯ ಹೇರಬೇಕು ಎಂದು ಮನವಿ ಮಾಡಿದರು. ಈ ಸಂದರ್ಭ ಕೊಡವ ರೈಡರ್ಸ್ ಕ್ಲಬ್ ಅಧ್ಯಕ್ಷ ಅಜ್ಜಿಕುಟ್ಟೀರ ಪೃಥ್ವಿ ಸುಬ್ಬಯ್ಯ, ಕಾರ್ಯದರ್ಶಿ ಸಣ್ಣುವಂಡ ದರ್ಶನ್ ಕಾವೇರಪ್ಪ, ಕಾನೂನು ಸಲಹೆಗಾರರಾದ ಅಜ್ಜಿಕುಟ್ಟೀರ ಗಾನ ಸುಬ್ಬಯ್ಯ, ಪ್ರಮುಖರಾದ ಮುರುವಂಡ ಸುಮಾ ಕುಟ್ಟಪ್ಪ, ಮೂಕಚಂಡ ಶಾಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾಡುಕೋಣ ಮಾಂಸ ಸಾಗಿಸುತ್ತಿದ್ದ ಕಾರು ವಶ

ಮಡಿಕೇರಿ, ಜೂ.3– ನಾಪೋಕ್ಲು ಬಳಿಯ ಕಕ್ಕಬ್ಬೆ ಕುಂಜಿಲ ಗ್ರಾಮದಿಂದ ಅಕ್ರಮವಾಗಿ ಕಾಡುಕೋಣ ಮಾಂಸ ಸಾಗಾಟ ಮಾಡುತ್ತಿದ್ದ ಕಾರೊಂದನ್ನು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ವಶಕ್ಕೆ ಪಡೆದುಕೊಳ್ಳುವಲ್ಲಿ ನಾಪೋಕ್ಲು ಪೊಲೀಸರು ಯಶಸ್ವಿಯಾಗಿದ್ದಾರೆ.

ಶುಕ್ರವಾರ ಮಧ್ಯರಾತ್ರಿ ಕೇರಳ ರಾಜ್ಯದ ನೋಂದಣಿ ಹೊಂದಿದ್ದ ಬಿಳಿಬಣ್ಣದ ವ್ಯಾಗನಾರ್ ಕಾರಿನಲ್ಲಿ ಅಕ್ರಮವಾಗಿ ಕಾಡುಕೋಣ ಮಾಂಸ ಸಾಗಾಟ ಮಾಡುತ್ತಿರುವ ಬಗ್ಗೆ ನಾಪೋಕ್ಲು ಪೊಲೀಸರಿಗೆ ಖಚಿತ ಮಾಹಿತಿ ದೊರೆತಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದಾಗ ವಾಹನದೊಂದಿಗೆ ಆರೋಪಿಗಳು ಪರಾರಿಯಾಗಲು ಯತ್ನಿಸಿದರು. ಈ ಸಂದರ್ಭ ಮಡಿಕೇರಿ ಗ್ರಾಮಾಂತರ



ಪೊಲೀಸರ ಸಹಕಾರದೊಂದಿಗೆ ನಾಪೋಕ್ಲು ಪೊಲೀಸರು, ವಾಹನವನ್ನು ಬೆನ್ನಟ್ಟಿದ ಸಂದರ್ಭ ಮಡಿಕೇರಿ ಬಳಿಯ ಮೇಕೇರಿ ಗ್ರಾಮದ ಸುಭಾಷ್‌ನಗರ ರಸ್ತೆಯಲ್ಲಿ ಆರೋಪಿಗಳಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆಯಿತು. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದ್ದು, ಕಾರನ್ನು ಸ್ಥಳದಲ್ಲೇ ಬಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ. ವಾಹನ ಸಮೇತ ಮಾಂಸವನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು, ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ. ಇದೀಗ ಪ್ರಕರಣವನ್ನು ಅರಣ್ಯ ಇಲಾಖೆಯ ವನ್ಯಜೀವಿ ಸಂರಕ್ಷಣಾ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ.

ಜಿಲ್ಲಾ ಪೊಲೀಸ್ ಅಧೀಕ್ಷಕ ರಾಮರಾಜನ್, ಹೆಚ್ಚುವರಿ ಪೊಲೀಸ್ ಉಪ ಅಧೀಕ್ಷಕ ಸುಂದರ್ ರಾಜ್ ನಿರ್ದೇಶನದಂತೆ ಡಿವೈಎಸ್ಪಿ ಜಗದೀಶ್, ವೃತ್ತ ನಿರೀಕ್ಷಕ ಶೇಖರ್ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.





ಮೈನವಿರೇಳಿಸಿದ ಆಫ್ ರೋಡ್ ಟ್ರ್ಯಾಕ್ ಸ್ಪರ್ಧೆ

ಗದ್ದೆ, ತೆವರಿ, ಕಲ್ಲು ಬಂಡೆಗಳ ಮೇಲೆ ಸಂಚರಿಸಿದ ವಾಹನಗಳು

ಗೋಣಿಕೊಪ್ಪ ಜೂ.3– ಕೂರ್ಗ್ ಚಾಲೆಂಜರ್ಸ್ ಅಸೋಸಿಯೇಷನ್ ವತಿಯಿಂದ ಕುಂದ ಗ್ರಾಮದ ರತನ್ ಎಸ್ಟೇಟ್‌ನಲ್ಲಿ ಶನಿವಾರ ನಡೆದ ಮೊದಲ ದಿನದ ರಾಷ್ಟ್ರಮಟ್ಟದ ಆಫ್ ರೋಡ್ ಟ್ರ್ಯಾಕ್ ರೋಚಕತೆಯಿಂದ ಕೂಡಿತ್ತು. ಸ್ಟಾಕ್ ಪೆಟ್ರೋಲ್, ಸ್ಟಾಕ್ ಡೀಸೆಲ್, ಲೇಡೀಸ್ ಓಪನ್, ಎಸ್‌ಯುವಿ, ಕೂರ್ಗ್ ಕಿಂಗ್ಸ್ ವಿಭಾಗದಲ್ಲಿ ಸ್ಪರ್ಧೆ ನಡೆಯಿತು. 50ಕ್ಕೂ ಹೆಚ್ಚು ಸವಾರರು ತಮ್ಮ ಚಾಕಚಕ್ಯತೆ ತೋರಿಸಿದರು.

ಸುಮಾರು 8 ಎಕರೆ ಗದ್ದೆಯಲ್ಲಿ ನಿರ್ಮಿಸಿರುವ ಟ್ರ್ಯಾಕ್‌ನಲ್ಲಿ ಸವಾರರಿಗೆ ಕುತೂಹಲ ಮೂಡಿಸಿತು. ಎಸ್‌ಯುವಿ ವಾಹನಗಳಿಗೆ 900 ಮೀಟರ್, ಕೂರ್ಗ್ ಕಿಂಗ್ಸ್ ವಿಭಾಗಕ್ಕೆ 800 ಮೀಟರ್, ಮಹಿಳಾ ವಿಭಾಗಕ್ಕೆ 750 ಮೀಟರ್ ಟ್ರ್ಯಾಕ್‌ನಲ್ಲಿ ಗದ್ದೆ, ತೆವರಿ ಮೇಲೆ ವಾಹನಗಳು ಸಾಗಿ ಬಂದವು. ವಾಹನಗಳ ಒಂದು ಬದಿಯ ಎರಡು ಚಕ್ರಗಳು ಗದ್ದೆಯ ಮೇಲೆ, ಮತ್ತೊಂದು ಬದಿಯ ಚಕ್ರಗಳು ತೆವರಿಯ ಮೇಲೆ ಸಾಗುವುದು ನೋಡುವುದೇ ರೋಚಕತೆ ಮೂಡಿಸಿತು.

ಭಾನುವಾರ ಮಾಡಿಫೈಡ್ ಕ್ಲಾಸ್

ಭಾನುವಾರ ಮಾಡಿಫೈಡ್ ವಾಹನಗಳಿಗೆ ಸ್ಪರ್ಧೆ ನಡೆಯಲಿದೆ. ಉಬ್ಬು– ತಗ್ಗುಗಳು ಚಾಲಕರಿಗೆ ರೋಚಕ ಅನುಭವ ನೀಡಲಿದೆ. ವಾಹನಗಳನ್ನು ರ್‍ಯಾಲಿ ಚಾಲನೆಗೆ ಪರಿವರ್ತಿಸಿಕೊಂಡಿರುವ ವಾಹನಗಳು ಪಾಲ್ಗೊಳ್ಳಲಿವೆ.

ತೆವರಿಯ ಮೇಲೆ ಸಾಗುವ ವಾಹನಗಳ ಸಂಚಾರ, ಗುಂಡಿಗೆ ಬಿದ್ದು ಎದ್ದು ಬರುವ ವಾಹನಗಳು ನೋಡುಗರನ್ನು ಒಂದು ಕ್ಷಣ ಭಯ ತರುವಂತಿತ್ತು. ದೊಡ್ಡ ದೊಡ್ಡ ಕಲ್ಲುಗಳ ಮೇಲೆ ವಾಹನ ಏರುವುದು, ತಿರುವುಗಳಲ್ಲಿ ವಾಹನಗಳನ್ನು ಚಲಿಸುವುದೇ ಸವಾಲಾಗಿತ್ತು.

ಉದ್ಘಾಟನೆ: ಗೋಣಿಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಆಫ್ ರೋಡ್ ಸ್ಪರ್ಧೆಗೆ ಚಾಲನೆ ನೀಡಲಾಯಿತು. ಹಿರಿಯ ರ್‍ಯಾಲಿಪಟು ಗುಮ್ಮಟ್ಟೀರ ಕಿಲನ್ ಗಣಪತಿ ಬಾವುಟ ಹಾರಿಸುವ ಮೂಲಕ ಉದ್ಘಾಟಿಸಿದರು. ಅಸೋಸಿಯೇಷನ್ ಪ್ರಮುಖರಾದ ಸಿಬಿ ಪೌಲ್, ಪಟ್ರಂಗಡ ಶ್ರೀಮಂತ್ ಮುತ್ತಣ್ಣ, ಅಜಿತ್, ಧೀರಜ್, ಧನಿ ರತನ್, ಸತೀಶ್, ಗುಮ್ಮಟ್ಟೀರ ಮುತ್ತಣ್ಣ, ತೀತಮಾಡ ಶರಣು, ಅಯ್ಯಣ್ಣ ಇದ್ದರು.

ಆಯೋಜಕ ಸಿ.ಬಿ. ಪೌಲ್ ಮಾತನಾಡಿ, ರಾಷ್ಟ್ರಮಟ್ಟದ ರ್‍ಯಾಲಿ ಪಟುಗಳು ಭಾಗವಹಿಸುವುದು ಹೆಮ್ಮೆಯ ವಿಚಾರ. ಹೆಚ್ಚು ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಿರುವುದರಿಂದ ರೋಚಕ ಅನುಭವಕ್ಕೆ ಸಾಕ್ಷಿಯಾಗಿದೆ. ಜೆಕೆ ಟೈರ್ಸ್ ಹಾಗೂ ವಂಶಿ ಮೆಲಾ ಕಂಪನಿಗಳ ಪ್ರೋತ್ಸಾಹ ರ್‍ಯಾಲಿಪಟುಗಳಿಗೆ ಉತ್ತೇಜನ ನೀಡಿದಂತಿದೆ ಎಂದರು.

ಅಸೋಸಿಯೇಷನ್ ಸಂಚಾಲಕ ಪಟ್ರಂಗಡ ಶ್ರೀಮಂತ್ ಮುತ್ತಣ್ಣ ಮಾತನಾಡಿ, ಟ್ರ್ಯಾಕ್‌ನಲ್ಲಿ ಚಾಲನೆ ಮಾಡುವವರಿಗೆ ಸವಾಲು ಇದ್ದೇ ಇದೆ. ವೀಕ್ಷಿಸುವವರಿಗೂ ರೋಚಕ ಅನುಭವ ನೀಡುವಂಥ ಟ್ರ್ಯಾಕ್ ನಿರ್ಮಿಸಲಾಗಿದೆ. ಪ್ರಶಾಂತ ವಾತಾವರಣದಲ್ಲಿ ಸ್ಪರ್ಧಿಗಳ ಕಲೆ ಬಿಂಬಿಸಲು ನೆರವಾಗಿದೆ. ಉತ್ತಮ ಬಹುಮಾನ ಕೂಡ ನೀಡಲಾಗುತ್ತಿದೆ ಎಂದರು.

ಬೊಳ್ಳಮ್ಮ ಪೂಣಚ್ಚ ನಿಧನ



ನಾಪೋಕ್ಲು, ಜೂ.3– ಬಲ್ಲಮಾವಟ್ಟಿ ಗ್ರಾಮದ ದಿವಂಗತ ಅಪ್ಪಚೆಟ್ಟೋಳಂಡ ಪೂಣಚ್ಚ ಅವರ ಧರ್ಮಪತ್ನಿ, ನಿವೃತ್ತ ಮುಖ್ಯಶಿಕ್ಷಕಿ ಬೊಳ್ಳಮ್ಮ ಪೂಣಚ್ಚ (84) ಶುಕ್ರವಾರ ನಿಧನ ಹೊಂದಿದರು. ಇವರ ಅಂತ್ಯಕ್ರಿಯೆ ಶುಕ್ರವಾರ ಬಲ್ಲಮಾವಟಿಯಲ್ಲಿರುವ ಮೃತರ ಸ್ವಗ್ರಾಮದಲ್ಲಿ ನೆರವೇರಿತು.

ಮೃತರು ಮೂವರು ಪುತ್ರರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಮೊದಲ ಕ್ಯಾಬಿನೆಟ್‌ನಲ್ಲೇ ಕೊಟ್ಟ ಭರವಸೆ ಈಡೇರಿಸಿದ್ದು ಇದೇ ಮೊದಲು

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ಜೂ.3– ರಾಜ್ಯದ ಜನತೆಗೆ ಕೊಟ್ಟ ಭರವಸೆಯಂತೆ 5 ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಘೋಷಿಸುವ ಮೂಲಕ ಮೊದಲ ಕ್ಯಾಬಿನೆಟ್‌ನಲ್ಲಿಯೇ ನಿರ್ಧಾರ ತೆಗೆದುಕೊಂಡಿದ್ದು ಇದೇ ಮೊದಲು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆದ ಕೃತಜ್ಞತಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮೊದಲ ಕ್ಯಾಬಿನೆಟ್‌ನಲ್ಲಿಯೇ ಇಂಥ ತೀರ್ಮಾನ ಕೈಗೊಂಡಿದ್ದನ್ನು ನಾನು ಎಂದಿಗೂ ನೋಡಿರಲಿಲ್ಲ. ಆದರೆ ನಿನ್ನೆ 3 ಗಂಟೆಗಳ ಕಾಲ ನಡೆದ ಕ್ಯಾಬಿನೆಟ್‌ನಲ್ಲಿ ನಾನೂ ಸಾಕ್ಷಿಯಾಗಿದ್ದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ರಾಜ್ಯದ ಜನರಿಗೆ ಕೊಟ್ಟ ಭರವಸೆಯಂತೆ 200 ಯೂನಿಟ್ ವಿದ್ಯುತ್ ಉಚಿತ, ನಿರುದ್ಯೋಗಿ ಪದವೀಧರರಿಗೆ 3 ಸಾವಿರ ರೂ., ಡಿಪ್ಲೋಮಾ ಪದವೀಧರರಿಗೆ 1500 ರೂ., ಮನೆ ಯಜಮಾನಿಗೆ 2 ಸಾವಿರ ರೂ. ಹಾಗೂ ಎಲ್ಲಾ ಮಹಿಳೆಯರಿಗೂ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಯೋಜನೆಗಳನ್ನು ಘೋಷಿಸುವ ಮೂಲಕ ಕಾಂಗ್ರೆಸ್ ಭರವಸೆ ಈಡೇರಿಸಿದ ಪಕ್ಷವಾಗಿ ಹೊರಹೊಮ್ಮಿದೆ ಎಂದು ತಿಳಿಸಿದರು.

ವಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಯೋಜನೆಗಳನ್ನು ಕೊಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಆದರೆ ಈಗ ಭರವಸೆಗಳನ್ನು ಘೋಷಿಸುವ ಮೂಲಕ ಸಾಧ್ಯವಾಗದ್ದನ್ನು ಸಾಧಿಸಿ ತೋರಿಸಿದ್ದೇವೆ. ಆದರೂ ವಿಪಕ್ಷಗಳು ಸಹಕಾರ ನೀಡದೆ ಟೀಕೆಗಳನ್ನು ಮಾಡುತ್ತಿದ್ದಾರೆ. ಅನವಶ್ಯಕ ನಿಯಮ ಹಾಕದೆ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಹಿಂದೆ ಇದ್ದ ಇವರದ್ದೇ ಸರ್ಕಾರಗಳು ಯಾವುದೇ ಭರವಸೆಗಳನ್ನು ಈಡೇರಿಸದೇ, ಇದ್ದ ಎಲ್ಲಾ ರೀತಿಯ ಭಾಗ್ಯಗಳನ್ನು ತಡೆ ಹಿಡಿದು ಜನರನ್ನು ಸಂಕಷ್ಟಕ್ಕೆ ತಳ್ಳಿದ್ದರು. ಇದೀಗ ಯೋಜನೆಗಳನ್ನು ಘೋಷಣೆ ಮಾಡಿದ್ದೇವೆ. ವಿಪಕ್ಷಗಳ ಟೀಕೆಗಳಿಗೆ ನೀವೇ ಉತ್ತರ ನೀಡಿ ಎಂದರು.

2018ರ ಸೋಲು ನಮ್ಮನ್ನು ತಲೆ ತಗ್ಗಿಸುವಂತೆ ಮಾಡಿತ್ತು ನಮ್ಮ ಕಾರ್ಯಕರ್ತರಿಗೂ ಆತ್ಮಸ್ಥೈರ್ಯ ತುಂಬುವ ಸ್ಥಿತಿಯಲ್ಲಿ ನಾವಿರಲಿಲ್ಲ. ಗೆದ್ದವರು ನಗು, ಟೀಕೆಗಳಿಂದ ನಮ್ಮನ್ನು ಯಾವ ರೀತಿ ನಡೆಸಿಕೊಂಡರು ಎಂಬುದು ಎಲ್ಲರಿಗೂ ತಿಳಿದ ವಿಚಾರ. ನೀವು ಕೈ ಬಿಟ್ಟಿದ್ದರೆ ನಾವು ಪಾತಾಳಕ್ಕೆ ಇಳಿಯುತ್ತಿದ್ದೇವು. ಆದರೆ ನೀವು ನಮ್ಮ ಕೈಬಿಡಲಿಲ್ಲ. ಇಂತಹ ಫಲಿತಾಂಶ ನೀಡುತ್ತೀರಾ ಎಂಬ ನಂಬಿಕೆಯೂ ನನಗಿರಲಿಲ್ಲ. ನಮ್ಮ ಮೇಲೆ ನಂಬಿಕೆ ಇಟ್ಟು ಗೆಲ್ಲಿಸಿದ್ದೀರಾ. ಅದನ್ನು ಉಳಿಸಿಕೊಳ್ಳುತ್ತೇವೆ. ನಮ್ಮ ವಿರೋಧಿಗಳನ್ನು ಶತ್ರುಗಳಂತೆ ನೋಡಲ್ಲ. ಜಿಲ್ಲೆಯ ಅಭಿವೃದ್ಧಿಗೆ ಅವರ ಸಹಕಾರ, ಸಲಹೆ ಪಡೆಯುತ್ತೇವೆ ಎಂದರು.

ಮಂಡ್ಯ ನಗರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು. 6 ಮಂದಿ ಶಾಸಕರ ಜೊತೆಗೂಡಿ ಅಭಿವೃದ್ಧಿಪಡಿಸಲಾಗುವುದು. ಕೃಷಿ ಪ್ರಧಾನ ಜಿಲ್ಲೆಯಲ್ಲಿ ನೀರಾವರಿ, ಕೃಷಿ ಕ್ಷೇತ್ರ, ಮಹಿಳೆಯರಿಗಾಗಿ ಗಾರ್ಮೆಂಟ್ಸ್‌ಗಳ ಸ್ಥಾಪನೆ, ಯುವಕರಿಗೆ ಉದ್ಯೋಗ ಹಾಗೂ ಸ್ಕೀಂ, ವಿವಿಧ ಯೋಜನೆಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡಲಾಗುವುದು. ಕೃಷಿ ತಜ್ಞರು, ನಿವೃತ್ತ ಹಿರಿಯ ಅಧಿಕಾರಿಗಳು ಸೇರಿದಂತೆ ಕಮಿಟಿ ರಚಿಸಿ ಕೃಷಿ ಅಭಿವೃದ್ಧಿಗೆ ಬೇಕಾದ ಅನುದಾನ ತಂದು ಅಭಿವೃದ್ಧಿಪಡಿಸುತ್ತೇವೆ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಸಚಿವ ಚಲುವರಾಯಸ್ವಾಮಿ ಅವರನ್ನು ತಾಲೂಕಿನ ಹನಕೆರೆ ಗ್ರಾಮದಿಂದ ಅದ್ಧೂರಿ ಮೆರವಣಿಗೆ ಹಾಗೂ ರೋಡ್ ಶೋ ಮೂಲಕ ವೇದಿಕೆಗೆ ಕರೆತರಲಾಯಿತು.

ವೇದಿಕೆಯಲ್ಲಿ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್ ಗಣಿಗ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಹೆಚ್.ಬಿ. ರಾಮು, ಎಂ.ಎಸ್.ಆತ್ಮಾನಂದ, ಮುಖಂಡ ರಾದ ಡಾ.ಕೃಷ್ಣ, ವಿಜಯ್‌ರಾಮೇಗೌಡ, ಡಾ. ಮೂರ್ತಿ, ದಡದಪುರ ಶಿವಣ್ಣ, ಸಿ.ಡಿ.ಗಂಗಾಧರ್, ರವಿಬೋಜೇಗೌಡ, ಉಮ್ಮಡಹಳ್ಳಿ ಶಿವಪ್ಪ, ಎಂ.ಎಸ್. ಚಿದಂಬರ್, ಪ್ರಸನ್ನ, ತ್ಯಾಗರಾಜು ಇತರರಿದ್ದರು.

ನಿಡಘಟ್ಟ ಗಡಿಯಲ್ಲಿ ಚೆಲುವರಾಯಸ್ವಾಮಿಗೆ ಅದ್ಧೂರಿ ಸ್ವಾಗತ

ಮದ್ದೂರು, ಜೂ.3– ಕೃಷಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಿದ ಎನ್.ಚಲುವರಾಯಸ್ವಾಮಿ ಅವರನ್ನು ತಾಲೂಕಿನ ಗಡಿಭಾಗ ನಿಡಘಟ್ಟ ಗ್ರಾಮದ ಬಳಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಆತ್ಮೀಯವಾಗಿ ಸ್ವಾಗತಿಸಿದರು.

ತಾಲೂಕಿನ ನೀಡಘಟ್ಟ ಗ್ರಾಮಕ್ಕೆ ಆಗಮಿಸಿದ ನೂತನ ಸಚಿವರನ್ನು ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಹಾಗೂ ಮಾಜಿ ಶಾಸಕ ಬಿ.ರಾಮಕೃಷ್ಣ ಬರಮಾಡಿಕೊಂಡರು.

ತಾಲೂಕಿನ ನಿಡಘಟ್ಟ, ರುದ್ರಾಕ್ಷಿಪುರ, ಸೋಮನಹಳ್ಳಿ, ಗೆಜ್ಜಲಗೆರೆ ಹಾಗೂ ಪಟ್ಟಣದ ಕೊಪ್ಪ ವೃತ್ತ, ಕೊಲ್ಲಿ ವೃತ್ತ, ಸಾರಿಗೆ ಬಸ್ ನಿಲ್ದಾಣ ಹಾಗೂ ಪಟ್ಟಣದ ಪ್ರವಾಸಿ ಮಂದಿರದ ಬಳಿ ಶಾಸಕ ಮಧು ಜಿ.ಮಾದೇಗೌಡ ಪುತ್ರ ಅಶಯ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಸಚಿವ ಎನ್.ಚಲುವರಾಯಸ್ವಾಮಿ ಬೃಹತ್ ಹಾರ ಹಾಕಿ ಸ್ವಾಗತಿಸಿದರು.

ಬಳಿಕ ಮಾತನಾಡಿದ ಕೃಷಿ ಸಚಿವ ಚಲುವರಾಯಸ್ವಾಮಿ, ಜಿಲ್ಲೆಯಲ್ಲಿರುವ ಸಮಸ್ಯೆ ಹಾಗೂ ಇಲಾಖೆಗೆ ಸಂಬಂಧಿಸಿದ ಹಲವು ವಿಚಾರಗಳನ್ನು ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕರೊಟ್ಟಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಜೊತೆಗೆ ಇಲಾಖೆ ಹಾಗೂ ಸರ್ಕಾರದಿಂದ ಸಿಗುವ ಅನುದಾನ ಬಳಕೆ ಮಾಡಿಕೊಳ್ಳಲು ಕ್ರಮವಹಿಸುವುದಾಗಿ ಹೇಳಿದರು.

ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕಾರ್ಯ ಯೋಜನೆ ರೂಪಿಸುವ ಜೊತೆಗೆ ರೈತರಿಗೆ ಯಾವುದೇ ಸಮಸ್ಯೆಗಳು ಆಗದಂತೆ ಕ್ರಮ ವಹಿಸಲಾಗುವುದು. ತಾಲೂಕು ಕೇಂದ್ರಗಳ ಸಮಸ್ಯೆಗಳ ನಿವಾರಣೆಗೆ ಹೆಚ್ಚು ಒತ್ತು ನೀಡುವುದಾಗಿ ಹೇಳಿದರು.

ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಬಗ್ಗೆ ವಿಪಕ್ಷ ನಾಯಕರು ಸಂಪನ್ಮೂಲ ಕ್ರೋಢೀಕರಣ ಹೇಗೆ ಎಂದು ಜನರ ದಿಕ್ಕು ತಪ್ಪಿಸುತ್ತಿದ್ದು, ಅವರಂತಹ ದಡ್ಡರು ಮತ್ತೊಬ್ಬರಿಲ್ಲ. ಸಂಪನ್ಮೂಲ ಕ್ರೋಢೀಕರಿಸಿ ವಿತರಣೆ ಮಾಡುವುದು ನಮ್ಮ ಸರ್ಕಾರಕ್ಕೆ ಬಿಟ್ಟಿದ್ದು 59 ಸಾವಿರ ಕೋಟಿ ಕಾರ್ಯಕ್ರಮವನ್ನು ಸ್ವಾತಂತ್ರ್ಯ ಪೂರ್ವದ ನಂತರ ಏಕಕಾಲದಲ್ಲಿ ನಮ್ಮ ಸರ್ಕಾರ ಬಿಡುಗಡೆಗೊಳಿಸಿ ರಾಜ್ಯದ ಜನರಿಗೆ ನೀಡಿದ ಭರವಸೆ ಈಡೇರಿಸಿರುವುದಾಗಿ ಹೇಳಿದರು.

ಈ ವೇಳೆ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ರಮೇಶ್ ಬಂಡಿಸಿದ್ದೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕ ಬಿ.ರಾಮಕೃಷ್ಣ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಜಿಪಂ ಮಾಜಿ ಅಧ್ಯಕ್ಷ ಸುರೇಶ್ ಕಂಠಿ, ಮಾಜಿ ಸದಸ್ಯ ಪಿ.ರಾಜೀವ್, ತಾಪಂ ಮಾಜಿ ಸದಸ್ಯ ಮಹೇಶ್, ಮುಖಂಡರಾದ ಬಿ.ಎಂ.ರಘು ಕಬ್ಬಾಳಯ್ಯ, ಎಂ.ಹೊಂಬಯ್ಯ, ಗ್ರಾಮಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿವಾಕರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಜೋಗಿಗೌಡ, ಯಶವಂತ್, ಮಾಚಳ್ಳಿ ಕುಮಾರ್, ಅಭಿಷೇಕ್ ಸೇರಿದಂತೆ ಇತರರಿದ್ದರು.

ಜೂ.6ಕ್ಕೆ ಶ್ರೀ ಮಾಯಮ್ಮದೇವಿ ದೇವಾಲಯ ಲೋಕಾರ್ಪಣೆ

ಕೆ.ಆರ್.ಪೇಟೆ, ಜೂ.3– ತಾಲೂಕಿನ ಚಿಲ್ಲದಹಳ್ಳಿಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಗ್ರಾಮದೇವತೆ ಶ್ರೀ ಮಾಯಮ್ಮ ದೇವಿ ಅಮ್ಮನವರ ದೇವಾಲಯ ಲೋಕಾರ್ಪಣೆ ಸಮಾರಂಭ ಜೂ.4ರಿಂದ 6ರವರೆಗೆ ನಡೆಯಲಿದೆ.

ಜೂ.4ರಂದು ಗಣಪತಿ ಆರಾಧನೆ, ಗಂಗಾ ಪೂಜೆ, ವಾಸ್ತು ರಾಘೋಘ್ನ ಪೂಜೆ, ಕಳಶಾರಾಧನೆ ಇತರ ಕಾರ್ಯಕ್ರಮ ನಡೆಯಲಿದೆ. ಜೂ.5ರಂದು ವೇದ ಪಾರಾಯಣ, ದ್ವಾರತೋರಣಾ ಪೂಜೆ, ಪಂಚಗವ್ಯ ಶುದ್ಧಿ, ಸಹಸ್ರಶೋಡಷ ಕಳಶಾರಾಧನೆ, ಬಿಂಬ ಕ್ಷೀರಾದಿ, ಔಷಧಿವಾಸ, ಪೀಠಾ ಪರಿವಾರಾದಿ, ಹೋಮ ಹವನ ನಡೆಯಲಿದೆ. ಜೂ.6ರಂದು ದೇವಾಲಯದ ಉದ್ಘಾಟನೆ, ಇದಕ್ಕೂ ಮುನ್ನ ದೇವರ ಪ್ರಾಣ ಪ್ರತಿಷ್ಠಾಪನೆ, ಜೀವಕಳಾ ಹೋಮ, ಕುಂಭಾಭಿಷೇಕ, ದಿವ್ಯಾಲಂಕಾರ, ಮಹಾಮಂಗಳಾರತಿ, ವಿಶೇಷ ಹೋಮ ಹವನ ನಡೆಯಲಿದ್ದು, ಮೂರು ದಿನವೂ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿದೆ.

ಸಾರ್ವಜನಿಕರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿಕೊಡಬೇಕು ಎಂದು ಶ್ರೀ ಮಾಯಮ್ಮ ದೇವಿ ದೇವಾಲಯ ಜೀರ್ಣೋದ್ಧಾರ ಸಮಿತಿ ಟ್ರಸ್ಟ್ ಅಧ್ಯಕ್ಷ ಪಟೇಲ್ ನಾಗೇಗೌಡ ಮನವಿ ಮಾಡಿದ್ದಾರೆ.

ಬಿ.ಸಿ.ವೀರಪ್ಪ ನಿಧನ



ಶ್ರೀರಂಗಪಟ್ಟಣ, ಜೂ.3– ತಾಲೂಕಿನ ಬೆಳಗೊಳ ಗ್ರಾಮದ ನಿವಾಸಿ, ಸ್ವಾತಂತ್ರ್ಯ ಹೋರಾಟಗಾರ ಬಿ.ಸಿ. ವೀರಪ್ಪ ಅಲಿಯಾಸ್ ವೀರಯ್ಯ (98) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಪುಟ್ಟನರಸಮ್ಮ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುಂಡ್ಲುಪೇಟೆ ಮಾದರಿ ಕ್ಷೇತ್ರ ಮಾಡುವೆ

ಸಂವಾದದಲ್ಲಿ ಶಾಸಕ ಗಣೇಶಪ್ರಸಾದ್ ಭರವಸೆ



ಚಾಮರಾಜನಗರ, ಜೂ.3– ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜೊತೆಗೆ, ಗುಂಡ್ಲುಪೇಟೆಯನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವ ಗುರಿ ಹೊಂದಿದ್ದೇನೆ ಎಂದು ಶಾಸಕ ಎಚ್.ಎಂ.ಗಣೇಶಪ್ರಸಾದ್ ಭರವಸೆ ನೀಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಶನಿವಾರ ಸಂವಾದ ನಡೆಸಿದರು. ಪ್ರತಿವಾರ ಜನ ಸಂಪರ್ಕ ಸಭೆ ನಡೆಸುವುದು ಅಥವಾ ಗ್ರಾಮ ವಾಸ್ತವ್ಯ ಮಾಡುವುದರಿಂದ ಅಭಿವೃದ್ಧಿಯಾಗಲಿ ಅಥವಾ ಜನರ ಸಮಸ್ಯೆ ನಿವಾರಣೆ ಮಾಡಲು ಸಾಧ್ಯವಿಲ್ಲ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ತಿಳಿದು ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಇದಕ್ಕೆ ನಾನು ಹೆಚ್ಚಿನ ಒತ್ತು ನೀಡುತ್ತೇನೆ. ಕ್ಷೇತ್ರದ ಜನರ ಸಮಸ್ಯೆಗೆ ಸದಾ ಸ್ಪಂದಿಸುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಭ್ರಷ್ಟಾಚಾರ ಮುಕ್ತ ಆಡಳಿತ: ಹಿಂದಿನ ಶಾಸಕರ ಆಡಳಿತದಲ್ಲಿ ಕ್ಷೇತ್ರದಲ್ಲಿ ಮಿತಿ ಮೀರಿದ ಭ್ರಷ್ಟಾಚಾರ ನಡೆದಿದೆ. ಲಂಚ ನೀಡದೆ ಯಾವುದೇ ಕೆಲಸಗಳು ನಡೆಯುದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸಲು ಕ್ರಮ ವಹಿಸಲಾಗುವುದು. ಈ ನಿಟ್ಟಿನಲ್ಲಿ ನಾನು ಮೊದಲ ಆದ್ಯತೆ ನೀಡಿ ಕೆಲಸ ಮಾಡುತ್ತೇನೆ. ಈಗಾಗಲೇ ತಾಲೂಕು ಅಧಿಕಾರಿಗಳ ಸಭೆ ನಡೆಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸೂಚಿಸಲಾಗಿದೆ. ಯಾರನ್ನೂ ಪದೇ–ಪದೇ ಕಚೇರಿ ಅಲೆದಾಡಿಸದೆ ಕಾನೂನುತ್ಮಾಕವಾಗಿ ಕೆಲಸಗಳನ್ನು ಮಾಡಿಕೊಡಬೇಕು ಎಂದು ತಾಕೀತು ಮಾಡಲಾಗಿದೆ ಎಂದರು.

ಮೂಲ ಸೌಲಭ್ಯಕ್ಕೆ ಆದ್ಯತೆ: ಕ್ಷೇತ್ರದಲ್ಲಿ ಪ್ರಮುಖವಾಗಿ ರಸ್ತೆ ನೀರು ಸೇರಿದಂತೆ ಮೂಲ ಸೌಲಭ್ಯಗಳ ಕೊರತೆ ಹೆಚ್ಚಾಗಿದೆ. ಬಡವರಿಗೆ ಮನೆ ನಿರ್ಮಾಣ ಮಾಡಿಕೊಡಬೇಕಿದೆ. ಕ್ಷೇತ್ರದಲ್ಲಿ ಪ್ರಮುಖವಾಗಿ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಜನರಿಗೆ ಅಗತ್ಯವಾಗಿರುವ ಮೂಲ ಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಗುಂಡ್ಲುಪೇಟೆ ಪಟ್ಟಣದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದೆ. ಪಟ್ಟಣದ ಹಲವು ಕಡೆಗಳಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಿ ವಾಹನ ದಟ್ಟಣೆ ನಿಯಂತ್ರಿಸಲು ಕ್ರಮ ವಹಿಸಲಾಗುವುದು. ಅಲ್ಲದೇ ಪಟ್ಟಣದ ಆಸ್ಪತ್ರೆಯಲ್ಲಿ ಪೊಲೀಸ್ ಚೌಕಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯೊಂದಿಗೆ ಚರ್ಚಿಸಲಾಗಿದೆ ಎಂದರು.

ಗುಂಡ್ಲುಪೇಟೆ ಕ್ಷೇತ್ರದಲ್ಲಿರುವ ಶೇ.50ರಷ್ಟು ಶಾಲೆಗಳಲ್ಲಿ ಕಟ್ಟಡಗಳು ಹಾನಿಯಾಗಿದ್ದು, ಇವುಗಳನ್ನು ದುರಸ್ತಿಪಡಿಸಲು ಕ್ರಮವಹಿಸಲಾಗುವುದು. ಜೊತೆಗೆ ಶಿಕ್ಷಕರ ಕೊರತೆ ಸಾಕಷ್ಟು ಇದೆ. ಈ ಬಗ್ಗೆ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು. ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

> **ನಾನು ಯಾವುದೇ ದೊಡ್ಡ ಹುದ್ದೆಯ ಆಕಾಂಕ್ಷಿಯಲ್ಲ. ಕ್ಷೇತ್ರದ ಜನರು ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿದ ಗೆಲುವು ತಂದುಕೊಟ್ಟಿದ್ದಾರೆ. ಹೀಗಾಗಿ, ಶಾಸಕನಾಗಿದ್ದುಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅವರ ನಂಬಿಕೆ, ವಿಶ್ವಾಸ ಉಳಿಸಿಕೊಳ್ಳುವ ಕೆಲಸ ಮಾಡುತ್ತೇನೆ.**
> –**ಗಣೇಶಪ್ರಸಾದ್, ಶಾಸಕರು.**

ಟ್ರಾಮ ಕೇರ್ ಸೆಂಟರ್ ಪ್ರಾರಂಭ: ಗುಂಡ್ಲುಪೇಟೆ–ಬೇಗೂರು–ನಂಜನಗೂಡು ರಸ್ತೆಯಲ್ಲಿ ಅಪಘಾತಗಳು ಹೆಚ್ಚು ಸಂಭವಿಸುತ್ತಿವೆ. ಈ ಸಂದರ್ಭದಲ್ಲಿ ಗಾಯಾಳುಗಳಿಗೆ ತತ್‌ಕ್ಷಣದಲ್ಲಿ ಚಿಕಿತ್ಸೆ ಸೌಲಭ್ಯ ಕಲ್ಪಿಸಲು ಟ್ರಾಮ ಕೇರ್ ಸೆಂಟರ್ ಅನ್ನು ಪ್ರಾರಂಭಿಸಲಾಗುವುದು. ಜೊತೆಗೆ ರಸ್ತೆ ಅಪಘಾತ ತಡೆಗೆ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜ್ ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಇದ್ದರು.

ಗೌಡಿಕೆ ಶಿವರುದ್ರಪ್ಪ ನಿಧನ



ಗುಂಡ್ಲುಪೇಟೆ, ಜೂ.3– ತಾಲೂಕಿನ ಚಿಕ್ಕತುಪ್ಪೂರು ವಾಸಿ ಗೌಡಿಕೆ ಶಿವರುದ್ರಪ್ಪ (80) ಶನಿವಾರ ನಿಧನರಾದರು. ಮೃತರಿಗೆ ಓರ್ವ ಪುತ್ರಇದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಸ್ವಗ್ರಾಮ ಚಿಕ್ಕತುಪ್ಪೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.3– ಜೂ.4 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಕಾಮಗಾರಿ ನಿಮಿತ್ತ ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವೇಶ್ವರರು, ಅಂಬೇಡ್ಕರ್ ಅವರ ಆದರ್ಶ ತತ್ವ ಪಾಲಿಸಿ: ಕಾತ್ಯಾಯಿನಿದೇವಿ

ಬಸವೇಶ್ವರರು, ಡಾ.ಬಿ.ಆರ್.ಅಂಬೇಡ್ಕರ್‌ರವರ ನಮನ ಕಾರ್ಯಕ್ರಮ



ಚಾಮರಾಜನಗರ, ಜೂ.3– ವಿಶ್ವಗುರು ಜಗಜ್ಯೋತಿ ಶ್ರೀ ಬಸವೇಶ್ವರರು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತು ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ಮಹಾನ್ ಮಾನವತಾವಾದಿ, ವಿಶ್ವಗುರು ಜಗಜ್ಯೋತಿ ಶ್ರೀಬಸವೇಶ್ವರರರು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ ನಮನ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ಬಸವೇಶ್ವರರು, ಅಂಬೇಡ್ಕರ್ ಅವರು ಸರ್ವಜನಾಂಗದವರು ಒಪ್ಪಿಕೊಳ್ಳುವ ಮಹಾನ್ ವ್ಯಕ್ತಿಗಳಾಗಿದ್ದಾರೆ. ಬಸವಣ್ಣನವರು ಕಾಯಕವೇ ಕೈಲಾಸ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಒಗ್ಗಟ್ಟಿನ ಹೋರಾಟ ಎಂಬ ಸಂದೇಶವನ್ನ ಸಮಾಜಕ್ಕೆ ಸಾರಿದ್ದಾರೆ. ಜೀವನದ ಸಾರವನ್ನು ತಿಳಿಸುವ ಈ ಸಂದೇಶಗಳು ಮಾದರಿಯಾಗಿವೆ ಎಂದರು.

ಬಸವಣ್ಣ, ಅಂಬೇಡ್ಕರ್ ರವರು ಸಮಾನತೆ ಹರಿಕಾರರು: ಕಾರ್ಯಕ್ರಮ ಉದ್ಘಾಟಿಸಿದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಕೆಂಪರಾಜು ಮಾತನಾಡಿ, ಜಗಜ್ಯೋತಿ ಬಸವೇಶ್ವರರು, ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರು ಸಮಾನತೆಗಾಗಿ ಶ್ರಮಿಸುವ ಮೂಲಕ ಸಮಾನತೆಯ ಹರಿಕಾರರಾಗಿದ್ದಾರೆ. 12ನೇ ಶತಮಾನದಲ್ಲೇ ಜಗಜ್ಯೋತಿ ಬಸವೇಶ್ವರರು ಅಸಮಾನತೆ ವಿರುದ್ಧ ಹೋರಾಡಿದ್ದರು. ಅನುಭವ ಮಂಟಪ ಸ್ಥಾಪಿಸಿ ಸರ್ವರಿಗೂ ಸಮಾನತೆ ಕಲ್ಪಿಸಿಕೊಟ್ಟಿದ್ದರು. ಅದೇ ರೀತಿಯಲ್ಲಿ ದೇಶಕ್ಕೆ ಸಂವಿಧಾನ ನೀಡಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರು ಸರ್ವರಿಗೂ ಸಮಾನತೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಅಖಿಲ ಕರ್ನಾಟಕ ಮಹಾಸಭಾ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಮಹಾಸಭಾ ವತಿಯಿಂದ ಎಲ್ಲ ನಾಯಕರ ಜಯಂತಿಯನ್ನು ಆಚರಣೆ ಮಾಡಿಕೊಂಡು ಬರಲಾಗಿದೆ, ನಾಡಿನ ಜಲ, ಭಾಷೆ, ನುಡಿ ಉಳಿಸುವ ಕೆಲಸ ಮಾಡಿಕೊಂಡು ಬರಲಾಗಿದೆ. ದೇಶದ ಯಾವುದೇ ಮೂಲೆಯಲ್ಲಿ ಕನ್ನಡಕ್ಕೆ ಧಕ್ಕೆಯಾದಾಗ ಮೊದಲು ಹೋರಾಟ ಆರಂಭವಾಗುವುದು ಚಾಮರಾಜನಗರದಲ್ಲಿ. ನಮ್ಮ ಸಂಸ್ಥೆಯು ಎಲ್ಲಾ ರಾಷ್ಟ್ರನಾಯಕರ ಜಯಂತಿಯನ್ನು ನಿರಂತರವಾಗಿ ಆಚರಣೆ ಮಾಡಿಕೊಂಡು ಬರಲಾಗಿದ್ದು, ಸಂಸ್ಥೆ ವತಿಯಿಂದ ಇಲ್ಲಿಯವರೆಗೆ 5 ಸಾವಿರ ಸಾಧಕರು, ವಿದ್ಯಾರ್ಥಿಗಳನ್ನು ಸನ್ಮಾನಿಸಿಕೊಂಡು ಬರಲಾಗಿದೆ ಎಂದರು.

12ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಅನುಭವ ಮಂಟಪ ಸ್ಥಾಪಿಸಿ ಎಲ್ಲ ವರ್ಗದವರಿಗೂ ಸಮಾನ ಅವಕಾಶ ಕೊಟ್ಟಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸರ್ವರಿಗೂ ಸಮಾನತೆ ಅವಕಾಶ ಮಾಡಿಕೊಟ್ಟಿದ್ದಾರೆ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಪ್ರತಿಭಾ ಪುರಸ್ಕಾರ: ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಹರ್ಷಿತಾ, ಆರ್.ಇಂಚರ, ಚಂದನಾ, ಶಶಿಕಿರಣ್, ಶ್ರೇಯಸ್ ಭಾರದ್ವಜ್, ಶ್ವೇತಾ, ಯೋಗಿ ತಾರಾವತ್, ಸಿ.ಎ.ಲೋಹಿತ ಕುಮಾರ್, ಭೂಮಿಕಾ ಎಸ್.ಗೌಡ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಶೈಲಕುಮಾರ್, ಸರ್ಕಾರಿ ಐಟಿಐ ಕಾಲೇಜು ಪ್ರಾಂಶುಪಾಲ ಟಿ.ಎಂ.ರಂಗಸ್ವಾಮಿ, ನಗರಸಭಾ ಮಾಜಿ ಸದಸ್ಯ ಮಹಮ್ಮದ್ ಅಸ್ಗರ್ ಮಾತನಾಡಿದರು. ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಗೌರವಾಧ್ಯಕ್ಷ ಶಾ.ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ.ರಾಜ್‌ಗೋಪಾಲ್ ಇನ್ನಿತರರು ಹಾಜರಿದ್ದರು.

ಮೈಸೂರು ಮಿತ್ರ

ರೈಲು ಅಪಘಾತದ ಗಾಯಾಳುಗಳ ಸಾಗಿಸುತ್ತಿದ್ದ ಬಸ್ ಅಪಘಾತ: ಹಲವರಿಗೆ ಗಾಯ

ಬಾಲಸೋರ್ (ಒಡಿಶಾ), ಜೂ.3–ಭೀಕರ ರೈಲು ಅಪಘಾತದಲ್ಲಿ ಪಾರಾದ ಕೆಲವರು ಬಸ್ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆ ಸೇರಿದ ಘಟನೆ ಇಲ್ಲಿಗೆ ಸಮೀಪದ ಮೇದಿನಿಪುರ ಬಳಿ ಸಂಭವಿಸಿದೆ. ಶುಕ್ರವಾರ ಸಂಜೆ ನಡೆದ ರೈಲು ಅಪಘಾತದ ವೇಳೆ ಯಾವುದೇ ಅಪಾಯವಿಲ್ಲದೇ ಪಾರಾದವರನ್ನು ಬಸ್‌ಗಳ ಮೂಲಕ ಸಮೀಪದ ನಗರಗಳಿಗೆ ಕರೆದೊಯ್ದು ಅಲ್ಲಿಂದ ಅವರು ತಲುಪಬೇಕಾದ ಸ್ಥಳಗಳಿಗೆ ವಾಹನ ವ್ಯವಸ್ಥೆ ಮಾಡಲಾಗಿತ್ತು. ಹೀಗೆ ಕೆಲ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಮೇದಿನಿಪುರದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವ್ಯಾನ್‌ವೊಂದಕ್ಕೆ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಬಸ್‌ನಲ್ಲಿದ್ದ ಕೆಲವರಿಗೆ ಗಂಭೀರ ಗಾಯಗಳಾಗಿದ್ದು, ಮತ್ತೆ ಕೆಲವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಇವರನ್ನು ಬೇರೊಂದು ವಾಹನದ ಮೂಲಕ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜ್ಯದವರ ಸುರಕ್ಷತೆ ದೃಷ್ಟಿಯಿಂದ ಸಚಿವ ಸಂತೋಷ್ ಲಾಡ್‌ಗೆ ಉಸ್ತುವಾರಿ

ಒಡಿಶಾದ ಬಾಲಸೋರ್‌ನಲ್ಲಿ ಸಂಭವಿಸಿದ ರೈಲು ದುರಂತದ ಹಿನ್ನೆಲೆಯಲ್ಲಿ



ಕನ್ನಡಿಗರ ಸುರಕ್ಷತೆ ಬಗ್ಗೆ ಗಮನ ಹರಿಸಲು ಸಚಿವ ಸಂತೋಷ್ ಲಾಡ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಿಯೋಜಿಸಿದ್ದಾರೆ. ಘಟನೆ ಕುರಿತಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಂದ ವರದಿ ಕೇಳಿದ ಬಳಿಕ ಸಂಬಂಧಪಟ್ಟ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಬಳಿಕ ತಕ್ಷಣ ಸ್ಥಳಕ್ಕೆ ತೆರಳಿ ಕನ್ನಡಿಗರ ಸುರಕ್ಷತೆ ಬಗ್ಗೆ ಗಮನ ಹರಿಸಲು ಹಾಗೂ ಅಗತ್ಯ ನೆರವನ್ನು ಒದಗಿಸಲು ಸೂಚನೆ ನೀಡಿದ್ದಾರೆ.

ಸಂತೋಷ್ ಲಾಡ್ ಅವರ ಜತೆಗೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಸೇರಿ ಇತರೆ ಅಧಿಕಾರಿಗಳ ತಂಡ ಘಟನಾ ಸ್ಥಳಕ್ಕೆ ಹೊರಟಿದೆ.

ರಾಜ್ಯ ತುರ್ತು ನಿರ್ವಹಣಾ ಕೇಂದ್ರ (SEOC)ದಲ್ಲಿ ನಾಗರಿಕರ ಅನುಕೂಲಕ್ಕಾಗಿ ಸಹಾಯವಾಣಿ ಸಂಖ್ಯೆ 1070, 080–22253707, 080–22340676 ತೆರೆಯಲಾಗಿದೆ.

ಉನ್ನತ ಮಟ್ಟದ ತನಿಖೆ ಆರಂಭ

ರೈಲು ಡಿಕ್ಕಿ ತಡೆ ವ್ಯವಸ್ಥೆ ಅಳವಡಿಸಿರಲಿಲ್ಲ

ನವದೆಹಲಿ: ಒಡಿಶಾದಲ್ಲಿ ಸಂಭವಿಸಿದ ಭೀಕರ ರೈಲು ಅಪಘಾತದ ಕುರಿತು ರೈಲ್ವೆ ಇಲಾಖೆ ಉನ್ನತ ಮಟ್ಟದ ತನಿಖೆ ಆರಂಭಿಸಿದ್ದು, ಆಗ್ನೇಯ ವೃತ್ತದ ರೈಲ್ವೆ ಸುರಕ್ಷತಾ ಆಯುಕ್ತರ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ರೈಲ್ವೆ ಸುರಕ್ಷತಾ ಆಯುಕ್ತರು ನಾಗರಿಕ ವಿಮಾನಯಾನ ಸಚಿವಾಲಯದ ಅಡಿಯಲ್ಲಿ ಕೆಲಸ ಮಾಡುತ್ತಾರೆ ಮತ್ತು ಇಂತಹ ಎಲ್ಲಾ ಅಪಘಾತಗಳನ್ನು ತನಿಖೆ ನಡೆಸುತ್ತಾರೆ. SE ಸರ್ಕಲ್ ಸಿಆರ್‌ಎಸ್, ಎ.ಎಂ. ಚೌಧರಿ ಅವರು ಅಪಘಾತದ ಬಗ್ಗೆ ತನಿಖೆ ನಡೆಸುತ್ತಾರೆ ಎಂದು ಭಾರತೀಯ ರೈಲ್ವೆಯ ವಕ್ತಾರರು ತಿಳಿಸಿದ್ದಾರೆ. ರೈಲ್ವೆ ಇಲಾಖೆ ಈ ಮಾರ್ಗದಲ್ಲಿ ರೈಲು ಡಿಕ್ಕಿ ತಡೆ ವ್ಯವಸ್ಥೆ "ಕವಾಚ್" ಅಳವಡಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ.

ಶುಕ್ರವಾರ ಸಂಭವಿಸಿದ ಬೆಂಗಳೂರು–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಶಾಲಿಮಾರ್–ಚೆನ್ನೈ ಸೆಂಟ್ರಲ್ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು ಗೂಡ್ಸ್ ರೈಲು ಒಳಗೊಂಡ ಭೀಕರ ಅಪಘಾತದಲ್ಲಿ ಕನಿಷ್ಠ 300 ಜನ ಸಾವನ್ನಪ್ಪಿದ್ದಾರೆ ಮತ್ತು 900ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಅಪಘಾತಕ್ಕೆ ಕಾರಣವೇನು ಎಂಬುದು ಸ್ಪಷ್ಟವಾಗಿಲ್ಲವಾದರೂ, ಸಿಗ್ನಲಿಂಗ್ ವೈಫಲ್ಯವೇ ಈ ಅಪಘಾತಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ. "ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ. ಈ ಮಾರ್ಗದಲ್ಲಿ ಕವಚ ಲಭ್ಯವಿಲ್ಲ" ಎಂದು ಭಾರತೀಯ ರೈಲ್ವೆ ವಕ್ತಾರ ಅಮಿತಾಭ್ ಶರ್ಮಾ ಅವರು ತಿಳಿಸಿದ್ದಾರೆ.

ಐದನೇ ಪುಟದಿಂದ

ಸತ್ತವರ ಸಂಖ್ಯೆ 300ಕ್ಕೂ ಅಧಿಕ

ಬೋಗಿಗಳನ್ನು ಕಟ್ ಮಾಡಲಾಯಿತು. ನಂತರ ಜೆಸಿಬಿಗಳಿಂದ ಬೋಗಿಗಳನ್ನು ತೆರವುಗೊಳಿಸಲಾಯಿತು. ಮೃತದೇಹಗಳು ಹಾಗೂ ಗಾಯಾಳುಗಳನ್ನು ಸಾಗಿಸಲು 200ಕ್ಕೂ ಹೆಚ್ಚು ಆಂಬುಲೆನ್ಸ್‌ಗಳು ಹಾಗೂ 500ಕ್ಕೂ ಹೆಚ್ಚು ಬಸ್‌ಗಳನ್ನು ಬಳಸಲಾಯಿತು.

ಅಪಘಾತ ಸಂಭವಿಸಿದ್ದು ಹೀಗೆ: ಶುಕ್ರವಾರ ಸಂಜೆ ಶಾಲಿಮಾರ್‌ನಿಂದ ಚೆನ್ನೈಗೆ ತೆರಳುತ್ತಿದ್ದ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಬಹನಾಗ ರೈಲು ನಿಲ್ದಾಣದಿಂದ 100 ಮೀ. ಅಂತರದಲ್ಲಿ ಲೂಪ್‌ಲೈನ್‌ನಲ್ಲಿ ನಿಂತಿದ್ದ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕೋರಮಂಡಲ್ ಎಕ್ಸ್‌ಪ್ರೆಸ್‌ನ 15 ಬೋಗಿಗಳು ಸಂಪರ್ಕ ಕಳೆದುಕೊಂಡು ಪಕ್ಕದ ಹಳಿ ಮೇಲೆ ಬೆಂಗಳೂರಿನ ಯಶವಂತಪುರದಿಂದ ಹೌರಾಗೆ ತೆರಳುತ್ತಿದ್ದ ಯಶವಂತಪುರ–ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಬಿದ್ದ ಪರಿಣಾಮ ಆ ರೈಲಿನ ಬೋಗಿಗಳೂ ಕೂಡ ಹಳಿ ತಪ್ಪಿ ಉರುಳಿ ಬಿದ್ದಿದೆ. ಅಪಘಾತ ಸಂಭವಿಸಿದ ವೇಳೆ ಕೋರಮಂಡಲ್ ಎಕ್ಸ್‌ಪ್ರೆಸ್ 128 ಕಿ.ಮೀ. ವೇಗದಲ್ಲಿದ್ದು, ಯಶವಂತಪುರ–ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ 116 ಕಿ.ಮೀ. ವೇಗದಲ್ಲಿತ್ತು ಎಂದು ರೈಲ್ವೆ ಮಂಡಳಿಯ ಪ್ರಾಥಮಿಕ ವರದಿಗಳು ತಿಳಿಸಿವೆ.

ಖರಗ್‌ಪುರ್ ರೈಲ್ವೆ ವಿಭಾಗದ ಅಧಿಕಾರಿಗಳ ಪ್ರಾಥಮಿಕ ಜಂಟಿ ತಪಾಸಣಾ ವರದಿಯಂತೆ ಟ್ರ್ಯಾಕ್ ಜಾಯಿಂಟ್‌ಗಳನ್ನು ತಪ್ಪಾಗಿ ಇರಿಸಲಾಗಿತ್ತು. ಹಾಗೂ ಸ್ಟೇಷನ್ ಮಾಸ್ಟರ್ ಕೊಠಡಿಯಲ್ಲಿದ್ದವರು ಕೋರಮಂಡಲ್ ಎಕ್ಸ್‌ಪ್ರೆಸ್‌ಗೆ ಸರಿಯಾದ ಸಿಗ್ನಲ್ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ತಿಳಿದು ಬಂದಿದೆ. ಈ ಅಪಘಾತದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಕೇಂದ್ರ ಸರ್ಕಾರ ಆದೇಶಿಸಿದೆ. ದುರ್ಘಟನೆ ಸಂಭವಿಸಿದ ಸ್ಥಳಕ್ಕೆ ಇಂದೂ ಕೂಡ ಭೇಟಿ ನೀಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಸ್ಥಳ ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಇದೊಂದು ದೊಡ್ಡ ದುರಂತ. ರೈಲ್ವೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ರಾಜ್ಯ ಸರ್ಕಾರದ ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸಿವೆ. ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದ್ದು, ತನಿಖೆಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ ಎಂದರು. ಪ್ರಸ್ತುತ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ನಡೆಸುವುದು ನಮ್ಮ ಆದ್ಯತೆಯಾಗಿದೆ. ಜಿಲ್ಲಾಡಳಿತದ ಅನುಮೋದನೆ ನಂತರ ಪುನಸ್ಥಾಪನೆ ಕಾರ್ಯಾಚರಣೆಯನ್ನು ಆರಂಭಿಸಲಾಗುತ್ತದೆ. ರೈಲ್ವೆ ಸುರಕ್ಷಿತಾ ಆಯುಕ್ತರಿಂದಲೂ ಸ್ವತಂತ್ರ ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

ಪ್ರಧಾನಿ ಮೋದಿ ಭೇಟಿ; ಪರಿಶೀಲನೆ

ಪುನಶ್ಚೇತನಕ್ಕಾಗಿ ಶ್ರಮಿಸುತ್ತಿದೆ. ಈ ದುರಂತ ನಮಗೆ ಪಾಠ ಕಲಿಸಿದೆ. ಇನ್ನು ಮುಂದೆ ಹೀಗೆ ಆಗದಂತೆ ಎಚ್ಚರ ವಹಿಸುತ್ತೇವೆ. ಮೃತರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು. ಇದಕ್ಕೂ ಮುನ್ನ ಇಂದು ಮಧ್ಯಾಹ್ನ ವಾಯುಪಡೆ ಹೆಲಿಕಾಪ್ಟರ್‌ನಲ್ಲಿ ಬಹಗಾನಕ್ಕೆ ಬಂದಿಳಿದ ಪ್ರಧಾನಿ ಮೋದಿ, ರೈಲು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಸ್ಥಳದಲ್ಲಿದ್ದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಅಪಘಾತ ಕುರಿತು ಮೋದಿಯವರಿಗೆ ಮಾಹಿತಿ ನೀಡಿದರು. ಈ ವೇಳೆ ಕೇಂದ್ರ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಧರ್ಮೇಂದ್ರ ಪ್ರಧಾನ್ ಉಪಸ್ಥಿತರಿದ್ದರು.

ಶುಕ್ರವಾರ ಸಂಜೆ ನಡೆದ ಭೀಕರ ರೈಲು ದುರಂತದಲ್ಲಿ ಈವರೆಗಿನ ಮಾಹಿತಿಗಳ ಪ್ರಕಾರ 300 ಮಂದಿ ಸಾವಿಗೀಡಾಗಿದ್ದು, 900ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಆದರೆ ರಕ್ಷಣೆ ಹಾಗೂ ಪರಿಹಾರ ಕಾರ್ಯಾಚರಣೆಗೆ ಹೆಚ್ಚು ಒತ್ತು ನೀಡಿದ ಕಾರಣದಿಂದಾಗಿ ಈವರೆವಿಗೂ ಮೃತರ ಗುರುತು ಪತ್ತೆ ಕಾರ್ಯ ಆರಂಭವಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಗಾಯಗೊಂಡವರ ವಿವರಗಳನ್ನು ಸಂಗ್ರಹಿಸುವ ಕಾರ್ಯ ಭರದಿಂದ ಸಾಗಿದೆ. ಅಪಘಾತಕ್ಕೀಡಾದ ರೈಲುಗಳಲ್ಲಿ ಪ್ರಯಾಣಿಸಿದವರಲ್ಲಿ ಸುರಕ್ಷಿತವಾಗಿರುವವರು ತಮ್ಮ ಸಂಬಂಧಿಕರಿಗೆ ಕರೆ ಮಾಡಿ ತಮ್ಮ ಸುರಕ್ಷತೆ ಬಗ್ಗೆ ಖಚಿತಪಡಿಸಿದ್ದಾರೆ. ಆದರೆ ತೀವ್ರವಾಗಿ ಗಾಯಗೊಂಡವರು ತಮ್ಮ ಸಂಬಂಧಿಕರನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ ಎಂದು ಹೇಳಲಾಗಿದೆ. ಈ ರೈಲುಗಳಲ್ಲಿ ಪ್ರಯಾಣಿಸಿ ಸುರಕ್ಷತೆ ಬಗ್ಗೆ ಯಾವುದೇ ಮಾಹಿತಿ ಪಡೆಯದ ಸಂಬಂಧಿಕರು ಘಟನಾ ಸ್ಥಳ ಹಾಗೂ ಆಸ್ಪತ್ರೆ ಮತ್ತು ಶವಾಗಾರಕ್ಕೆ ತೆರಳಿ ತಮ್ಮ ಸಂಬಂಧಿಕರನ್ನು ಪತ್ತೆ ಮಾಡಲು ಸಾಧ್ಯವಾಗುತ್ತಿಲ್ಲ. ಮೃತರು ಮತ್ತು ಗಾಯಾಳುಗಳಲ್ಲಿ ಒಡಿಶಾದವರಿಗಿಂತ ಹೊರ ರಾಜ್ಯದವರೇ ಹೆಚ್ಚಾಗಿದ್ದು, ಅಪಘಾತದಿಂದ ಈ ಭಾಗಕ್ಕೆ ರೈಲು ಸಂಚಾರ ರದ್ದಾಗಿರುವ ಕಾರಣದಿಂದ ಸಂಬಂಧಿಕರು ಧಾವಿಸಲು ಸಾಧ್ಯವಾಗುತ್ತಿಲ್ಲ. ಅದೇ ವೇಳೆ ಹೆಲ್ಪ್‌ಲೈನ್‌ಗಳನ್ನು ಸಂಬಂಧಿಕರು ಸಂಪರ್ಕಿಸುತ್ತಿದ್ದಾರೆಯಾದರೂ, ಹೆಲ್ಪ್‌ಲೈನ್‌ನಲ್ಲಿ ಇರುವವರಿಗೂ ಕೂಡ ಮೃತರ ಬಗ್ಗೆ ಹಾಗೂ ಹೆಚ್ಚಿನ ಸಂಖ್ಯೆಯ ಗಾಯಾಳುಗಳ ಬಗ್ಗೆ ಸಮಗ್ರವಾದ ವಿವರಗಳು ಲಭ್ಯವಿಲ್ಲದ ಕಾರಣ ಅವರಿಂದ ಸರಿಯಾದ ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲ. ಮತ್ತೊಂದೆಡೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳಿಂದ ಅವರ ಸಂಬಂಧಿಕರ ಮೊಬೈಲ್ ಸಂಖ್ಯೆಗಳನ್ನು ಪಡೆದು ಮಾಹಿತಿ ರವಾನಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಾ ಸಂಘಟನೆಗಳ ಕಾರ್ಯಕರ್ತರು ತೊಡಗಿಸಿಕೊಂಡಿದ್ದಾರೆ.

ಅಕ್ರಮಕ್ಕೆ ತಡೆ ಹಿನ್ನೆಲೆ ; ಪಾಲಿಕೆ ನೀರಿನ ಕರ ಸಂಗ್ರಹ ಹೆಚ್ಚಳ

● 48 ಕೋಟಿಯಿಂದ 93 ಕೋಟಿಗೆ ಜಿಗಿದ ನೀರಿನ ಶುಲ್ಕದ ಮೊತ್ತ ; ಆಯುಕ್ತರ ಮಾಹಿತಿ

● ಚಾಮುಂಡೇಶ್ವರಿ ಕ್ಷೇತ್ರಕ್ಕೆ ನೀರು ಪೂರೈಸಬೇಕು ; ಸಂಸದ ಪ್ರತಾಪ್ ಸಿಂಹ

ಮೈಸೂರು,ಜೂ.3(ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಕ್ರಮ ನೀರಿನ ಸಂಪರ್ಕ ಕಡಿತಗೊಳಿಸಿದ ಹಿನ್ನೆಲೆಯಲ್ಲಿ ಪ್ರತಿವರ್ಷ 45ರಿಂದ 48 ಕೋಟಿವರೆಗೆ ಸಂಗ್ರಹವಾಗುತ್ತಿದ್ದ ನೀರಿನ ಶುಲ್ಕದ ಮೊತ್ತವು ಕಳೆದ ವರ್ಷ 93 ಕೋಟಿಗೆ ಹೆಚ್ಚಳವಾಗಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಶನಿವಾರ ನಡೆದ ದಿಶಾ ಸಮಿತಿ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಅವರಿಗೆ ಮಾಹಿತಿ ನೀಡಿದ ಅವರು, ಮೀಟರ್ ಇಲ್ಲದ 50 ಸಾವಿರ ಟ್ಯಾಪ್‌ಗಳಿದ್ದವು. ಈ ಸಂಬಂಧ ಕ್ರಮ ವಹಿಸಿ ಅಂತಹವುಗಳನ್ನು 5 ಸಾವಿರಕ್ಕಿಂತಲೂ ಕಡಿಮೆಗೊಳಿಸಿದ್ದೇವೆ. ಇದರಿಂದ ನೀರಿನ ತೆರಿಗೆಯು ಕಳೆದ ವರ್ಷ 93 ಕೋಟಿಗೆ ಏರಿಕೆಯಾಗಿದೆ ಎಂದರು.



ಇದಕ್ಕೂ ಮುನ್ನ ಮಾತನಾಡಿದ ಸಂಸದರು, ಚಾಮುಂಡೇಶ್ವರಿ ಕ್ಷೇತ್ರಕ್ಕೂ ಸಮರ್ಪಕವಾಗಿ ನೀರು ಪೂರೈಸಬೇಕಿದೆ. ಎಲ್ಲಿಂದ ನೀರು ತರುತ್ತೇವೆಯೋ ಅಲ್ಲಿನ ಅಕ್ಕಪಕ್ಕದ ಗ್ರಾಮಗಳಿಗೆ ನೀಡಬೇಕು. ಆದರೆ ಮೈಸೂರು ನಗರಕ್ಕೆ ಪೂರೈಸಿ, ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅನ್ಯಾಯ ಮಾಡುತ್ತಿದ್ದೇವೆ. ಇದಕ್ಕೊಂದು ಪರಿಹಾರ ಕಂಡುಹಿಡಿದು ಈ ಕ್ಷೇತ್ರದ ಜನತೆಗೆ ನೀರು ಸರಬರಾಜು ಮಾಡಬೇಕು ಎಂದು ಪಾಲಿಕೆ ಆಯುಕ್ತರ ಗಮನಕ್ಕೆ ತಂದರು.

ಮೈಸೂರು ನಗರಕ್ಕೆ 250 ಎಂಎಲ್‌ಡಿ ನೀರು ಅಗತ್ಯವಿದೆ. ಪ್ರಸ್ತುತ ಎಷ್ಟು ಪೂರೈಕೆಯಾಗುತ್ತಿದೆ ಎಂದು ಸಂಸದರು ಮಾಹಿತಿ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ನಿಗಮದ ಅಧಿಕಾರಿ, 306ರಿಂದ 310 ಎಂಎಲ್‌ಡಿವರಗೆ ಪೂರೈಕೆಯಾಗುತ್ತಿದೆ. ಅಮೃತ್ ಯೋಜನೆಯಡಿ ನಡೆದ ಕಾಮಗಾರಿಯಿಂದ ಇದು ಸಾಧ್ಯವಾಗಿದೆ ಎಂದು ಹೇಳಿದರು.

ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಡಿಸಿ ತರಾಟೆ: 'ನಿಮ್ಮನ್ನು ಚುನಾವಣೆ ಕರ್ತವ್ಯಕ್ಕೂ ನಿಯೋಜಿಸಿಲ್ಲ, ಸರಿಯಾದ ಮಾಹಿತಿ ತರವುದಕ್ಕೇನು ಕಷ್ಟ' ಎಂದು ಸಮರ್ಪಕ ಮಾಹಿತಿ ನೀಡದ ಸ್ಲಂ ಬೋರ್ಡ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತರಾಟೆಗೆ ತೆಗೆದುಕೊಂಡರು.

ಜಿಲ್ಲೆಯಲ್ಲಿ ಒಟ್ಟು 22,076 ಮನೆಗಳಿಗೆ ಬೇಡಿಕೆ ಇದೆ. ಈ ಪೈಕಿ 5,504 ಮನೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಸ್ಲಂ ಬೋರ್ಡ್ ಅಧಿಕಾರಿಗಳು ಮಾಹಿತಿ ನೀಡಿದರು. ಮೈಸೂರು ಪಾಲಿಕೆ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾಹಿತಿ ಕೇಳಿದಾಗ ಅಸ್ಪಷ್ಟವಾಗಿ ಉತ್ತರಿಸಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಅಸಮಾಧಾನ ವ್ಯಕ್ತಪಡಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಮಾತನಾಡಿ, ನಮ್ಮ ಕ್ಷೇತ್ರದಲ್ಲಿ 4,800 ಮಂದಿ 25 ವರ್ಷಗಳ ಹಿಂದೆ ಆಶ್ರಯ ಮನೆಗಳಿಗಾಗಿ ಸ್ಲಂ ಬೋರ್ಡ್‌ಗೆ ತಲಾ 40 ಸಾವಿರ ರೂ. ಹಣ ಪಾವತಿ ಮಾಡಿದ್ದಾರೆ. ಈ ಎಲ್ಲರೂ ಬಡ ಜನರು. 25 ವರ್ಷಗಳಿಂದ ಅವರಿಗೆ ಆಶ್ರಮ ಮನೆ ಹಂಚಿಕೆ ಮಾಡಿಲ್ಲ. ಚುನಾವಣೆ ಪ್ರಚಾರದ ಸಂದರ್ಭದಲ್ಲಿ ನಾನೂ ಸರ್ವೇ ಮಾಡಿದ್ದೇನೆ. ಆ ಪ್ರಕಾರ ಕ್ಷೇತ್ರದಲ್ಲಿ ಕನಿಷ್ಠ 25 ಸಾವಿರದಿಂದ 30 ಸಾವಿರ ಜನಕ್ಕೆ ಮನೆ ಅಗತ್ಯವಿದೆ. ಇದು ವಾಸ್ತವಾಂಶ ಎಂದರು.

ಮಂಜುನಾಥಪುರದಲ್ಲಿ ಖಾಲಿ ಜಾಗದಲ್ಲಿ 120 ಕುಟುಂಬಗಳು ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿವೆ. ಅವರನ್ನು ಒಕ್ಕಲೆಬ್ಬಿಸಲು ಸಾಧ್ಯವಿಲ್ಲ. ಅವರಿಗೆ ಅವಕಾಶ ಕಲ್ಪಿಸುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹರೀಶ್‌ಗೌಡ ಅವರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಇಲ್ಲಿನ ಸ್ಥಿತಿಗತಿ ಬಗ್ಗೆ ಸಮರ್ಪಕ ಮಾಹಿತಿ ನೀಡದ ಸ್ಲಂ ಬೋರ್ಡ್ ಅಧಿಕಾರಿಗಳನ್ನು ಇದೇ ವೇಳೆ ಡಿಸಿಯವರು ತರಾಟೆಗೆ ತೆಗೆದುಕೊಂಡರು. ಕೇಳಿದ್ದಕ್ಕೆ ಸೂಕ್ತ ಉತ್ತರ ಕೊಡುತ್ತಿಲ್ಲ. ಎಲ್ಲವೂ ಅಸ್ಪಷ್ಟ ಮಾಹಿತಿ ನೀಡುತ್ತಿದ್ದೀರಿ. ನೀವು ಬಂದಿಲ್ಲವೆಂದರೇ ನೋಟಿಸ್ ಆದರೂ ಕೊಡಬಹುದು. ಚುನಾವಣೆಯಲ್ಲಿ ಯಾವುದೇ ಕರ್ತವ್ಯಕ್ಕೆ ಹಾಕದಿದ್ದರೂ ಏನು ಕೆಲಸ ಮಾಡಿದ್ದೀರಿ ಎಂದು ಕಿಡಿಕಾರಿದರು. ಜನವರಿ ನಂತರ ಪ್ರಗತಿ ಪರಿಶೀಲನೆ ಸಾಧ್ಯವಾಗಿಲ್ಲ. ಸ್ಲಂ ಬೋರ್ಡ್ ಕಾರ್ಯನಿರ್ವಾಹಕ ಇಂಜಿನಿಯರ್ ಅವರೊಂದಿಗೆ ಸಭೆ ನಡೆಸುತ್ತೇನೆ ಎಂದು ಡಿಸಿಯವರು ಶಾಸಕರು, ಸಂಸದರಿಗೆ ತಿಳಿಸಿದರು.

ಮೈಸೂರಲ್ಲಿ ಎರಡು ದಿನಗಳ ಬೀಜ ಮೇಳ ಆರಂಭ



ಮೈಸೂರು,ಜೂ.3(ಎಂಟಿವೈ)– ಮೈಸೂರಿನ ಸಹಜ ಸಮೃದ್ಧ ಸಂಸ್ಥೆ ನಂಜರಾಜ ಬಹದ್ದೂರು ಕಲ್ಯಾಣಮಂಟಪದಲ್ಲಿ ಆಯೋಜಿಸಿರುವ ಎರಡು ದಿನಗಳ 'ಬೀಜ ಮೇಳ' ಆರಂಭವಾಗಿದೆ.

ವಿವಿಧ ಹಣ್ಣು–ತರಕಾರಿ ಹಾಗೂ ದವಸ–ಧಾನ್ಯಗಳ ಬೀಜಗಳ ಪ್ರದರ್ಶನದೊಂದಿಗೆ ವಿವಿಧ ಗಿಡಗಳ ಮಾರಾಟ ಭರ್ಜರಿಯಾಗಿ ನಡೆಯುತ್ತಿದೆ.

ಪ್ರತಿವರ್ಷದಂತೆ ಈ ಬಾರಿಯೂ ಸಹಜ ಸಮೃದ್ಧ ಸಂಸ್ಥೆಯ ಆಯೋಜಿಸಿರುವ ಬೀಜ ಮೇಳಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 40ಕ್ಕೂ ಹೆಚ್ಚು ಮಳಿಗೆಯನ್ನು ತೆರೆಯಲಾಗಿದ್ದು, ಅದರಲ್ಲಿ ಸಾವಯುವ ಪದ್ಧತಿಯಲ್ಲಿ ಬೆಳೆದಿರುವ ಹಣ್ಣು, ತರಕಾರಿ, ಧವಸ, ಧಾನ್ಯ, ಸಿರಿದಾನ್ಯ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ. ಇದರೊಂದಿಗೆ ಗೆಡ್ಡೆ–ಗೆಣಸು, ಸಾವಯವ ಪದಾರ್ಥ ಬಳಸಿ ತಯಾರಿಸಿದ ತಿನಿಸು, ಸಿದ್ಧ ಪದಾರ್ಥಗಳನ್ನು ಮಾರಾಟಕ್ಕಿಡಲಾಗಿದೆ.

ಗ್ರಾಮೀಣ ಪ್ರದೇಶದ ಜನ ಆಹಾರ ಪದ್ಧತಿಯಲ್ಲಿ ಅಳವಡಿಸಿಕೊಂಡಿರುವ ವಿವಿಧ ಸೊಪ್ಪುಗಳನ್ನು ಪ್ರದರ್ಶನ ಹಾಗೂ ಮಾರಾಟ ಮಾಡಲಾಗುತ್ತಿದೆ. ಇದಲ್ಲದೆ, ತಮಿಳುನಾಡು, ಕೇರಳ, ಆಂಧ್ರಪ್ರದೇಶದಿಂದ ಆಗಮಿಸಿದ್ದವರು ತಮ್ಮ ಬಳಿ ಸಂಗ್ರಹಿಸಿರುವ ಭತ್ತ ರಾಗಿ, ಸಿರಿಧಾನ್ಯಗಳ ಬೀಜಗಳನ್ನು ಪ್ರದರ್ಶಿಸಿ ಜನರಿಗೆ ಮಾಹಿತಿ ನೀಡಿದರು.

ಮೇಳದಲ್ಲಿ ಎಲ್ಲಾ ಕಾಲದಲ್ಲೂ ಹಣ್ಣು ಬಿಡುವ ಹಲಸಿನ ಗಿಡ, ಸೀಮೆ, ನಿಂಬೆಹಣ್ಣಿನ ಗಿಡ ಸೇರಿದಂತೆ ವಿವಿಧ ಬಗೆಯ ಗಿಡಗಳನ್ನು ಮಾರಾಟಕ್ಕಿಡಲಾಗಿದೆ. ಜನರಲ್ಲಿ ಸಿರಿಧಾನ್ಯದ ಬಗ್ಗೆ ಅರಿವು ಮೂಡಿಸಲು ವಿಶೇಷ ಮಾದರಿಯನ್ನು ಮಾಡಿ ಪ್ರದರ್ಶನಕ್ಕಿಡಲಾಗಿದೆ. ಇದರಿಂದ ಆರೋಗ್ಯ ಕಾಪಾಡಿಕೊಳ್ಳಲು ಸಿರಿಧಾನ್ಯ ಬಳಸುವಂತೆ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ.

ಬೀಜ ಮೇಳವನ್ನು ಕುಂದಗೋಳದ ಸಮೃದ್ಧ ಬೀಜ ಬ್ಯಾಂಕ್‌ನ ಬೇಬಿ ಜಾನ್ ಅವರು ಧವಸ ಧಾನ್ಯಗಳ ರಾಶಿಗೆ ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸಾಕಷ್ಟು ತಳಿಗಳ ಬೀಜಗಳು ನಶಿಸಿ ಹೋಗುತ್ತಿವೆ ಅವುಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಸ್ಥಳೀಯ ತಳಿಗಳನ್ನು ಉಳಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಬೀಜಮೇಳ ಜಾಗೃತಿ ಮೂಡಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ.ಕೃಷ್ಣಪ್ರಸಾದ್, ತೋಟಗಾರಿಕಾ ಮಹಾವಿದ್ಯಾಲಯ ಡೀನ್ ಡಾ.ವಿಷ್ಣುವರ್ಧನ್, ಬೀಜ ಸಂರಕ್ಷಕ ಸೈಯದ್ ಘನಿ ಖಾನ್, ಸೀಮಾ ಪ್ರಸಾದ್, ವಿಶ್ವನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗ್ಯಾರಂಟಿಗೆ ಲಂಚ ಕೇಳಿದರೆ ಹೇಳಿ ಒದ್ದು ಒಳಗೆ ಹಾಕಿಸುತ್ತೇನೆ...

ಜನರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಯ

ರಾಮನಗರ, ಜೂ.3– ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳ ಫಲಾನುಭವಿಗಳಿಂದ ಯಾರಾದರೂ ಲಂಚ ಕೇಳಿದರೆ ನೇರವಾಗಿ ನನಗೆ ಪತ್ರ ಬರೆಯಿರಿ, ಒದ್ದು ಒಳಗೆ ಹಾಕಿಸುತ್ತೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.



ಕನಕಪುರದ ಕಬ್ಬಾಳು ಗ್ರಾಮದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಐದೂ ಗ್ಯಾರಂಟಿಗಳನ್ನು ಈಡೇರಿಸಿದ್ದೇವೆ. ಮುಂದಿನ ತಿಂಗಳಿನಿಂದ ಗೃಹಜ್ಯೋತಿ ಯೋಜನೆ ಆರಂಭವಾಗಲಿದೆ. ಗೃಹಲಕ್ಷ್ಮಿ ಯೋಜನೆ ಮೂಲಕ ಮನೆಯೊಡತಿಗೆ ಮಾಸಿಕ 2 ಸಾವಿರ ರೂ. ಕೊಡುತ್ತೇವೆ. ಯಾರು ಯಜಮಾನಿ ಎಂದು ಮನೆಯವರು ತೀರ್ಮಾನ ಮಾಡಿಕೊಳ್ಳಬೇಕು. ಅಲ್ಲದೆ ಈ ಯೋಜನೆಗೆ ಹೆಣ್ಣು ಮಕ್ಕಳ ಬ್ಯಾಂಕ್ ಖಾತೆಯ ವಿವರವನ್ನೇ ಕೊಡಬೇಕು. ಈ ಯೋಜನೆಗಳಿಗೆ ಜೂ.15ರಿಂದ ಜು.15ರವರೆಗೆ ಅರ್ಜಿ ಹಾಕಬೇಕು. ಯಾರಿಗೂ ಯಾವ ಕಾರಣಕ್ಕೂ ಲಂಚ ಕೊಡಬೇಡಿ ಎಂದು ತಿಳಿಸಿದ್ದಾರೆ.

ಇದೇ ತಿಂಗಳು 11ರಿಂದ ಮಹಿಳೆಯರಿಗೆ ಉಚಿತ ಬಸ್ ಪಾಸ್ ಸಿಗಲಿದೆ. ರಾಜ್ಯದಲ್ಲಿ ಎಲ್ಲಿಗೆ ಬೇಕಾದರೂ ಓಡಾಡಬಹುದು. ಆದರೆ ಪುರುಷರು ಟಿಕೆಟ್ ತೆಗೆದುಕೊಂಡು ಓಡಾಡಬೇಕು. ಯಾಕೆಂದರೆ ಕೆಎಸ್‌ಆರ್‌ಟಿಸಿ ಸಂಸ್ಥೆ ನಡೀಬೇಕಲ್ವ ಎಂದು ಹಾಸ್ಯ ಚಟಾಕಿಯೊಂದಿಗೆ ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಅಧಿಕಾರಕ್ಕೆ ತಂದಿರುವುದರಿಂದ ನಿಮಗೆ ಈ ಯೋಜನೆಗಳ ಲಾಭ ಸಿಗುತ್ತಿದೆ ಎಂದರು.

ಬಾಲಾಸೋರ್ ಮೃತರಿಗೆ ಮೈಸೂರಿನಲ್ಲಿ ಶ್ರದ್ಧಾಂಜಲಿ

ಮೈಸೂರು, ಜೂ.3 (ಎಸ್‌ಬಿಎನ್)– ಒಡಿಶಾದ ಬಾಲಾಸೋರ್‌ನಲ್ಲಿ ಸಂಭವಿಸಿದ ಭೀಕರ ರೈಲು ಅಪಘಾತದಲ್ಲಿ ಮೃತಪಟ್ಟ 280ಕ್ಕೂ ಹೆಚ್ಚು ಮಂದಿಗೆ ಯುವ ಭಾರತ್ ಸಂಘಟನೆ ಹಾಗೂ ಪ್ರಜ್ಞಾವಂತ ನಾಗರಿಕ ವೇದಿಕೆಯ ಕಾರ್ಯಕರ್ತರು ಮೊಂಬತ್ತಿ ಹಚ್ಚಿ ಶ್ರದ್ಧಾಂಜಲಿ ಅರ್ಪಿಸಿದರು. ನೂರಾರು ಗಾಯಾಳುಗಳು ಆದಷ್ಟು ಬೇಗ ಗುಣಮುಖರಾಗಲಿ ಎಂದು ಇದೇ ಸಂದರ್ಭದಲ್ಲಿ ಪ್ರಾರ್ಥಿಸಿದರು.

ಮೈಸೂರು ಟಿ.ಕೆ.ಬಡಾವಣೆಯ ಮಾರುತಿ ವೃತ್ತದಲ್ಲಿ ಯುವ ಭಾರತ್ ಸಂಘಟನೆ ಹಾಗೂ ಪ್ರಜ್ಞಾವಂತ ನಾಗರಿಕ ವೇದಿಕೆಯ ಅಧ್ಯಕ್ಷ ಜೋಗಿ ಮಂಜು ನೇತೃತ್ವದಲ್ಲಿ ಮೇಣದಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಅರ್ಪಿಸಿದರು. ನಂತರ ಮಾತನಾಡಿ, ಒಡಿಶಾದ ಬಾಲಾಸೋರ್‌ದಲ್ಲಿ ಸಂಭವಿಸಿದ ಭೀಕರ ರೈಲು ಅಪಘಾತದಲ್ಲಿ 280ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 900ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಇವೆಲ್ಲರು ಬೇಗ ಗುಣರಾಗಲಿ ಎಂದು ಆಶಿಸಿದರು.

ಈ ವೇಳೆ ಬಿಜೆಪಿ ಮಾಧ್ಯಮ ಸಹ ಸಂಚಾಲಕ ಪ್ರದೀಪ್ ಕುಮಾರ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್ ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್, ಎಂ.ಎಸ್.ಸತ್ಯಾನಂದ್ ವಿಟ್ಟು, ಕಿಶೋರ್, ಪಚ್ಚು ಸಂದೀಪ್, ಕಿಶೋರ್, ಟಿ.ಎಸ್.ಅರುಣ್, ರಂಗನಾಥ್, ಚಂದ್ರಪ್ಪ, ಹಾಗೂ ಇನ್ನಿತರರು ಸಂತಾಪ ಸಭೆಯಲ್ಲಿ ಉಪಸ್ಥಿತರಿದ್ದರು.




ತೆಂಗಿನ ಸಸಿ ಮಾರಾಟ

ಮೈಸೂರು, ಜೂ.3– ಮೈಸೂರು ತಾಲೂಕು ಹೆಬ್ಬಾಳ ತೋಟಗಾರಿಕೆ ಕ್ಷೇತ್ರದಲ್ಲಿ ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯವಿದ್ದು, ಪ್ರತಿ ಗಿಡಕ್ಕೆ 75 ರೂ. ದರ ನಿಗದಿಯಾಗಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಜಾಬ್ ಕಾರ್ಡ್ ಹೊಂದಿರುವ ರೈತರಿಗೆ ಒಂದು ಎಕರೆಗೆ ತೋಟ ಪ್ರದೇಶ ಅಭಿವೃದ್ಧಿಪಡಿಸಲು ಕೂಲಿ ವೆಚ್ಚ 17243 ರೂ.ನೀಡಲು ಅವಕಾಶವಿದ್ದು, ಆಸಕ್ತ ರೈತರು ಇದರ ಸದುಪಯೋಗಪಡಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಹೆಬ್ಬಾಳು ತೋಟಗಾರಿಕೆ ಸಹಾಯಕರ ಮೊ.ಸಂ.8747085225, ಕಸಬಾ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಯ ಮೊ.ಸಂ.9901387284, ವರುಣ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ಸಂ.8197392697, ಜಯಪುರ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಯ ಮೊ.ಸಂ.9686766291 ಹಾಗೂ ಇಲವಾಲ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಯ ಮೊ.ಸಂ.8904673607 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ರಾಹ್ಮಣ ಮಹಾಸಭೆಗೆ ನೇಮಕ



ಮೈಸೂರು, ಜೂ.3– ಮೈಸೂರಿನ ಬ್ರಹ್ಮೀಭೂತ ವಾಸುದೇವ ಮಹಾರಾಜ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಹಾಗೂ ಖ್ಯಾತ ವ್ಯಂಗ್ಯ ಚಿತ್ರಕಾರ, ಫುಲ್ ಬ್ರೈಟರ್ ಎಂ.ವಿ.ನಾಗೇಂದ್ರ ಬಾಬು ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ 2023–24ನೇ ಸಾಲಿಗೆ ನೇಮಕ ಮಾಡಲಾಗಿದೆ ಎಂದು ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವಡಿ 139ನೇ ಜಯಂತಿ: ಮೈಸೂರು ಪಾಕ್ ಹಂಚುವ ಮೂಲಕ ಸ್ಮರಣೆ

ಮೈಸೂರು, ಜೂ.3(ಎಸ್‌ಬಿಡಿ)– ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ ಹಿನ್ನೆಲೆಯಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಮೈಸೂರು ಅರಮನೆ ದಕ್ಷಿಣ ದ್ವಾರದಲ್ಲಿ ಪ್ರವಾಸಿಗರಿಗೆ ಮೈಸೂರು ಪಾಕ್ ವಿತರಿಸಲಾಯಿತು.

ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಈ ವೇಳೆ ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಇಡೀ ದೇಶವೇ ಮೈಸೂರು ರಾಜ್ಯದತ್ತ ತಿರುಗಿ ನೋಡುವಂತೆ ಆಡಳಿತ ನಡೆಸಿದ ಮಹಾನ್ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು. ಅವರ ಹೆಜ್ಜೆ ಗುರುತಿಲ್ಲದ ಕ್ಷೇತ್ರವೇ ಇಲ್ಲ. ಕೃಷಿ, ಕೈಗಾರಿಕೆ, ನೀರಾವರಿ, ಜಲ ವಿದ್ಯುತ್, ಶಿಕ್ಷಣ, ಆರೋಗ್ಯ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಸಾಮಾಜಿಕ ಸಮಾನತೆಗೆ ಆದ್ಯತೆ ನೀಡಿದ್ದಾರೆಂದು ಬಣ್ಣಿಸಿದರು.

ಬಾಲ್ಯದಲ್ಲೇ ಸಿಂಹಾಸನವೇರಿದ ನಾಲ್ವಡಿಯವರು, ಪ್ರಜಾಪ್ರತಿನಿಧಿ ಸಭೆಯನ್ನು ಜಾರಿ ತರುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುನ್ನುಡಿ ಬರೆದಿದ್ದರು. ಶಿಕ್ಷಣದಿಂದಲೇ ಸಮಾಜ ಸುಧಾರಣೆ ಸಾಧ್ಯ ಎಂದು ಅರಿತಿದ್ದ ಅವರು 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿ, ಲಕ್ಷಾಂತರ ಕುಟುಂಬಗಳನ್ನು ಶಿಕ್ಷಣದ ಜ್ಯೋತಿ ಮೂಲಕ ಬೆಳಗಿಸಿದರು ಎಂದು ಸ್ಮರಿಸಿಕೊಂಡರು.

'ಭಾರತ ರತ್ನ'ಕ್ಕೆ ಆಗ್ರಹ: ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಮಾತನಾಡಿ, ನಾಲ್ವಡಿಯವರು ರಾಜ್ಯದ ನಾನಾ ಭಾಗಗಳಲ್ಲಿ 270ಕ್ಕೂ ಹೆಚ್ಚು ಉಚಿತ ಸೇವಾ ಆಸ್ಪತ್ರೆಗಳನ್ನು ಪ್ರಾರಂಭಿಸಿದ್ದು ಜನರ ಆರೋಗ್ಯದ ಮೇಲಿದ್ದ ಕಾಳಜಿಗೆ ಸಾಕ್ಷಿಯಾಗಿದೆ. ಮೈಸೂರು, ಬೆಂಗಳೂರು ನಗರಗಳಲ್ಲಿ ವಿಶಾಲವಾದ ರಸ್ತೆಗಳು, ವಿದ್ಯುತ್ ದೀಪಗಳು, ಉದ್ಯಾನಗಳು, ಶ್ರೇಷ್ಠ ವಿದ್ಯಾಸಂಸ್ಥೆಗಳು, ಅನಾಥಾಲಯಗಳನ್ನು ನಿರ್ಮಾಣ ಮಾಡಿದರು. ನಾಲ್ವಡಿ ಅವರ ಆಡಳಿತ ಅವಧಿಯ ವರ್ಷಗಳನ್ನು ಮೈಸೂರಿನ ಸುವರ್ಣ ಯುಗ ಎಂದರೆ ತಪ್ಪಾಗಲಾರದು. ಕೇಂದ್ರ ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ 'ಭಾರತ ರತ್ನ' ಪ್ರಶಸ್ತಿಯೊಂದಿಗೆ ಗೌರವಿಸಬೇಕು. ರಾಜ್ಯ ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯಂದು ಸರ್ಕಾರಿ ರಜೆ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಜೂನಿಯರ್ ವಿಷ್ಣುವರ್ಧನ್, ಸುರೇಶ್ ಗೋಲ್ಡ್, ಡಾ.ಶಾಂತರಾಜೇ ಅರಸ್, ಪ್ರಭುಶಂಕರ, ಸಿ.ಹೆಚ್.ಕೃಷ್ಣಯ್ಯ, ಪ್ರಭಾಕರ, ಅಂಬಾ ಅರಸ್, ವಿಜಯೇಂದ್ರ, ಜ್ಯೋತಿ, ಕುಮಾರ್ ಗೌಡ, ಇಂದಿರಾ, ಸುಚ್ಚೇಗೌಡ, ಎಳನೀರು ರಾಮಣ್ಣ, ರಾಧಾಕೃಷ್ಣ, ದರ್ಶನ್‌ಗೌಡ, ದೊರೆಸ್ವಾಮಿ, ಡಾ.ಸಿ.ಜಿ. ರಾಮಚಂದ್ರ, ಸಿದ್ದರಾಜು, ಪ್ರದೀಪ್, ದಿಲೀಪ್ ಮತ್ತಿತರರು ಉಪಸ್ಥಿತರಿದ್ದರು.

'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವದ ಕಥಾಸ್ಪರ್ಧೆಯ ಮೂರನೇ ಬಹುಮಾನಿತ ಕಥೆ

ನಿನಗೆ ನೀನೇ...

ತೃತೀಯ ಬಹುಮಾನ



ಚಂಚಲವೇಣು
179, 4ನೇ ಕ್ರಾಸ್,
ಕಂದಾಯನಗರ, 1ನೇ ಹಂತ,
ಶ್ರೀರಾಮಪುರ 2ನೇ ಹಂತ,
ಮೈಸೂರು-570034

ಶಿವಮೊಗ್ಗದೆಡೆ ಬಸ್ಸು ವೇಗವಾಗಿ ಚಲಿಸುತ್ತಿತ್ತು, ಕಿಟಕಿಯಾಚೆ ಮರೆಯಾಗುತ್ತಿದ್ದ ಹಸಿರು ಗಿಡಮರಗಳನ್ನು ನೋಡುತ್ತಾ ಕುಳಿತಿದ್ದೆ, ಶಿವಮೊಗ್ಗದಿಂದಾಚೆ ಇಪ್ಪತ್ತು ಕಿಲೋಮೀಟರ್ ದೂರದಲ್ಲಿದ್ದ ಹಳ್ಳಿಯಲ್ಲಿ ಅಕ್ಕನ ಮನೆಯಿತ್ತು ಆಗಾಗ್ಗೆ ಅಕ್ಕನ ಮನೆಗೆ ಮಗ ಸಾಕೇತ್ ಜೊತೆ ಹೋಗುತ್ತಿದ್ದೆ, ಒಂದೆರಡು ವಾರ ಹಳ್ಳಿಯಲ್ಲಿ ಅಕ್ಕನ ಕೈ ಅಡುಗೆಯ ವೈವಿಧ್ಯತೆಯ ರುಚಿ ಸವಿಯುತ್ತಾ ಕಳೆದೇ ಹೋಗುತ್ತಿತ್ತು. ಭಾವ ಅಂಗಡಿ ಇಟ್ಟುಕೊಂಡಿದ್ದು ಅದರೊಳಗೆ ಅವರು ಮುಳುಗಿಬಿಟ್ಟಿದ್ದರು. ಅಕ್ಕನಿಗೆ ಇಬ್ಬರು ಮಕ್ಕಳು ದೊಡ್ಡವಳೆ ನನ್ನ ಪ್ರೀತಿಯ ಅರುಷಿ, ಚಿಕ್ಕವನು ಅಭಿ.ಅರುಷಿಗೆ ನಾನೆಂದರೆ ತುಂಬಾ ಪ್ರೀತಿ, ಸಲಿಗೆ, ಆತ್ಮೀಯತೆ, ನನಗೂ ಅಷ್ಟೇ ನಾನು ಎತ್ತಾಡಿಸಿದ ಮಗು ಅವಳೆಂದರೆ ನನಗೆ ಜೀವ. ನಾನು ಹಳ್ಳಿಗೆ ಬಂದಾಗಲೆಲ್ಲಾ

"ಚಿಕ್ಕಿ ನೀನು ಇನ್ನೂ ನಾಲ್ಕು ದಿನ. ಇರು..." ಎಂದು ಒತ್ತಾಯಿಸುತ್ತ ಕೈಕಾಲಿಗೆ ಸುತ್ತಿಕೊಳ್ಳುತ್ತಾ ಇರುತ್ತಿದ್ದಳು.

ಇನ್ನು ಅಕ್ಕ ತಾಯಿಯ ಪ್ರತಿರೂಪ, ವಾತ್ಸಲ್ಯ ಮುಗ್ಧತೆ ತುಂಬಿಕೊಂಡಿದ್ದಳು, ಹೆಚ್ಚು ಯೋಚಿಸುವುದು ಅವಳ ಸ್ವಭಾವದಲ್ಲಿಲ್ಲ, ಭಾವ ನಿರ್ಲಿಪ್ತರು.

ಬಸ್ಸು ಚಲಿಸುತ್ತಲೇ ಇತ್ತು ಇನ್ನೊಂದು ನಾಲ್ಕೈದು ಕಿಲೋಮೀಟರ್ ಇರುವಾಗ ಮುಂದಿನೆರಡು ಸೀಟಿನಾಚೆ ಕುಳಿತಿದ್ದ ಹುಡುಗಿ ಇದ್ದಕ್ಕಿದ್ದಂತೆ ಎದ್ದುನಿಂತು ಸೀದಾ ತನ್ನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಹುಡುಗನ ಕೆನ್ನೆಗೆ ರಪ್ಪನೆ ಬಾರಿಸಿದಳು, ಸಣ್ಣ ಗಲಾಟೆ ಶುರುವಾಯಿತು, ಹುಡುಗ ನಾಚಿಕೆಯಿಂದ ತಲೆ ತಗ್ಗಿಸಿ ಕುಳಿತುಬಿಟ್ಟ, ರೋಷದಿಂದ ಕುದಿಯುತ್ತಿದ್ದ ಆ ಹುಡುಗಿ

"ರ್‍ಯಾಸ್ಕಲ್... ಇನ್ನೊಮ್ಮೆ ಮೈಮೇಲೆ ಕೈ ಹಾಕಿದರೆ ಮತ್ತೆ ಚಪ್ಪಲೀಲೆ ಹೊಡೀತೀನಿ.... ಹುಷಾರ್..." ಎಂದು ಹೇಳಿ ಕೆಕ್ಕರಿಸಿ ನೋಡಿದಳು. ಇನ್ನೂ ಹೈಸ್ಕೂಲು ಓದುತ್ತಿದ್ದ ಆ ಹುಡುಗಿಯ ಧೈರ್ಯ ನೋಡಿ ನನಗೆ ತುಂಬಾ ಖುಷಿಯಾಯಿತು, ಆಗಿದ್ದಿಷ್ಟು ಆ ಹುಡುಗಿಗೆ ಅವನು ಮುಂದಿನ ಸೀಟಿನಡಿ ಕೈ ಹಾಕಿ ಕಿರುಕುಳ ಕೊಡುತ್ತಿದ್ದ.. ಎರಡು ಬಾರಿ ತಿರುಗಿನೋಡಿ ಸುಮ್ಮನಾಗಿದ್ದ ಆ ಹುಡುಗಿ ಮೂರನೇ ಬಾರಿಗೆ ಸಿಡಿದೆದ್ದಳು... ನಂತರ ಆ ಹುಡುಗನಿಗೆ ಎಲ್ಲರೂ ಬೈದಾಗ ಅವನು ತಗ್ಗಿಸಿದ ತಲೆ ಮೇಲೆತ್ತದೆ ಮುಂದಿನ ಸ್ಟಾಪಿನಲ್ಲಿ ಮುಖ ಮುಚ್ಚಿ ಇಳಿದುಹೋದ...

"ಒಳ್ಳೆಯ ಕೆಲಸ ಮಾಡಿದ್ದೀ... ಇಂತಹವರಿಗೆ ಹೀಗೇ ಬುದ್ದಿ ಕಲಿಸಬೇಕು..." ಎಂದು ನಾನು ಆ ಹುಡುಗಿಗೆ ಶಹಭಾಸ್ ಹೇಳಿದೆ. ಅವಳನ್ನು ನೋಡಿದರೆ ಅರುಷಿಯನ್ನು ನೋಡಿದಂತಾಗುತ್ತಿತ್ತು.

* * * *

ನಾನು ಅಕ್ಕನ ಮನೆ ತಲುಪಿದಾಗ ಮಧ್ಯಾಹ್ನದ ಸಮೀಪ, ಅಕ್ಕನ ಅಡಿಗೆಯ ಪರಿಮಳ ಹೊಸಿಲಾಚೆ ಹರಡಿತ್ತು, ಸಾಕೇತ್ ಆಗಲೇ ಅಭಿಯನ್ನು ಅರಸಿ ಒಳಗೆ ಓಡಿದ್ದ, ಅಕ್ಕ

"ಬಾ.. ಬಾ.. ನಂದಿನಿ.. ಹೇಗಿದ್ದೀಯೆ?" ಎಂದು ಆತ್ಮೀಯವಾಗಿ ಅಹ್ವಾನಿಸಿದಳು,

" ನೀನು ಹೇಗಿದ್ದೀ ಅಕ್ಕಾ... ಅರುಷಿ ಎಲ್ಲಿ..." ಎಂದು ಕೇಳುತ್ತಲೇ ಸೋಫಾದಲ್ಲಿ ಕುಳಿತೆ. ನನ್ನ ನೋಡುತ್ತಲೇ ಜಿಂಕೆಯಂತೆ ಹಾರಿ ಬರಬೇಕಿದ್ದ ಅರುಷಿ ಯಾಕೋ.. ನಿಧಾನವಾಗಿ ರೂಮಿನಿಂದ ಹೊರಬಂದಳು, ನನ್ನ ನೋಡಿ ಅರಳಬೇಕಿದ್ದ ಮುಖದಲ್ಲಿ ಚಿಂತೆಯ ರೇಖೆಯೊಂದು ಸುಳಿದು ಮಾಯವಾಯಿತು

"ಬಾ ಅರುಷಿ... ಹೇಗಿದ್ದೀ...?" ಎಂದೆ, ಮೌನವಾಗಿ ತಲೆಯಾಡಿಸುತ್ತಾ ಬಂದು ನನ್ನ ಪಕ್ಕ ಕುಳಿತಳು.

"ಈ ಬಾರಿ ನೀನು ಹೈಸ್ಕೂಲು ಸೇರಿದ್ದೀ ಅಲ್ಲವಾ..." ಎಂದು ಕೇಳಿದಾಗ

"ಅಂ... ಹೂಂ..." ಎನ್ನುತ್ತಾ ಅರುಷಿ ಮೌನದ ಮೊರೆ ಹೊಕ್ಕಳು. ನಾನು ಅವಳನ್ನೇ ದಿಟ್ಟಿಸಿದೆ.. ಹರೆಯಕ್ಕೆ ಕಾಲಿಡುತ್ತಿದ್ದ ಹುಡುಗಿ ಅರಳುತ್ತಿದ್ದ ಕೆಂಗುಲಾಬಿ ಮೊಗ್ಗಿನಂತೆ ಕಂಡಳು, ದುಂಡು ಕೆಂಪು ಮಿಶ್ರಿತ ಬಿಳುಪು ಕೆನ್ನೆ, ನೀಟಾದ ಉದ್ದನೆಯ ಮೂಗು, ಚೆಂದದ ಕೆಂದುಟಿ, ನಸುಕಂದು ಗುಂಗುರು ಕೂದಲನ್ನು ಎತ್ತಿ ರಬ್ಬರ್ ಬ್ಯಾಂಡ್‌ನಿಂದ ಬಂಧಿಸಿದ್ದಳು, ವಿಶಾಲವಾದ ನೀಲಿಕಣ್ಣು ಅವಳದು, ಅದನ್ನು ನೋಡಿದರೆ ನನಗೆ ಸಮುದ್ರ ನೋಡಿದಂತಾಗುತ್ತಿತ್ತು. ಅಪರೂಪದ ಆ ನೀಲಿಕಂಗಳು ಅವಳ ಬಿಳುಪಿನ ಮುಖಕ್ಕೆ ತುಂಬಾ ಚೆನ್ನಾಗಿ ಕಾಣುತ್ತಿತ್ತು, ಅರುಷಿ ತುಂಬಾ ಮುದ್ದಾದ ಹುಡುಗಿ. ನನ್ನ ಕಣ್ಣ ದೃಷ್ಟಿಯೇ ತಾಗುವಂತಿತ್ತು, ಯಾವಾಗಲೂ ಆ ನೀಲಿ ಕಂಗಳಲ್ಲಿ ಕಾಂತಿ ಇರುತ್ತಿತ್ತು... ಈ ಬಾರಿ ಅದು ಅಷ್ಟಾಗಿ ಕಾಣಲಿಲ್ಲ, ಲವಲವಿಕೆ ಉತ್ಸಾಹ ಚುರುಕುತನವೂ ಹೆಚ್ಚು ಕಾಣಲಿಲ್ಲ, ಅರುಷಿ ಕಳೆದ ವರ್ಷ ದೊಡ್ಡವಳಾಗಿದ್ದಳು. ಅಕ್ಕ ಅತೀ ಮುಚ್ಚಟೆಯಿಂದ ಅವಳ ಆರೈಕೆ ಉಪಚಾರ ಮಾಡಿದ್ದರಿಂದ ಅರುಷಿ ದುಂಡುದುಂಡಗೆ ಮೈಕೈ ತುಂಬಿಕೊಂಡು ಎಲ್ಲರನ್ನೂ ಆಕರ್ಷಿಸುತ್ತಿದ್ದಳು.

* * * *

ಮುಂಚೆಲ್ಲಾ ಚಿಕ್ಕಿ....ಚಿಕ್ಕಿ ಎನ್ನುತ್ತಾ ಎಲ್ಲಾ ವಿಷಯಗಳನ್ನು ಪಟಪಟನೆ ಅರಳುಹುರಿದಂತೆ ಮಾತಾಡುತ್ತಾ ನನ್ನೊಡನೆ ಹಂಚಿಕೊಳ್ಳುತ್ತಿದ್ದ ಹುಡುಗಿ ಈಗ ಏಕದಂ ಮೌನ ಗೌರಿಯಾಗಿ ಎದುರು ನಿಂತಿದ್ದಳು, ಅವಳಿಗೆಂದು ನಾನು ನಸುಗುಲಾಬಿ ಬಣ್ಣದ ಡ್ರೆಸ್ ತಂದಿದ್ದೆ, ಅದನ್ನು ಅವಳ ಕೈಗೆ ಕೊಡುತ್ತಾ "ಹೇಗಿದೆ ಡ್ರೆಸ್ ಅರುಷಿ, ನಿಂಗೆ ಇಷ್ಟ ಆಯ್ತಾ?..." ಎಂದೆ, ಅರುಷಿ ನಗು ತಂದುಕೊಳ್ಳುತ್ತಾ

"ಚೆನ್ನಾಗಿದೆ ಚಿಕ್ಕೀ ಥ್ಯಾಂಕ್ಸ್... " ಎಂದು ಒಂದೆರಡು ಮಾತಾಡಿ ರೂಮಿಗೆ ಹೋಗಿಬಿಟ್ಟಳು, ನಾನು ಅವಳನ್ನು ಸೂಕ್ಷ್ಮವಾಗಿ ಗಮನಿಸಿದೆ, ಹರೆಯದ ಹುಡುಗಿಯಲ್ಲಿರಬೇಕಾದ ಲವಲವಿಕೆ ಚುರುಕುತನ ಉತ್ಸಾಹ ತುಂಟತನ ಕಾಣಲಿಲ್ಲ, ನಾನು ಆಡಿಸಿ ಬೆಳೆಸಿದ ಮಗು ಈಗ ಹೀಗೆ ಮುಖ ಬಾಡಿಸಿಕೊಂಡು ಇದ್ದರೆ ನೋಡಲು ನನಗಾಗಲಿಲ್ಲ, ಆ ನೀಲ ಕಣ್ಣುಗಳಲ್ಲಿ ಯಾವುದೋ ನೋವಿನ ಸೆಲೆ ಇರುವುದು ನನ್ನ ಸೂಕ್ಷ್ಮ ಕಣ್ಣಿಗೆ ಕಂಡಿತ್ತು.

* * * *

ಮರುದಿನವೂ ಅರುಷಿಯದು ಅದೇ ನಿಸ್ತೇಜ ಮುಖಭಾವ, ನಿರಾಸಕ್ತ ನಡವಳಿಕೆ, ಮನಸ್ಸು ತಡೆಯಲಾಗದೆ ಅಕ್ಕನಲ್ಲಿ ಕೇಳಿದೆ

"ಏನಾಗಿದೆ ಅಕ್ಕ ಅರುಷಿಗೆ ಯಾಕೋ ಮಂಕಾಗಿದ್ದಾಳೆ..." ಎಂದರೆ ಅಕ್ಕ ತಣ್ಣಗೆ

"ಏನೋಮ್ಮ ಈಗಿನ ಹೆಣ್ಣು ಮಕ್ಕಳನ್ನು ಅರ್ಥ ಮಾಡಿಕೊಳ್ಳೋದೇ ಕಷ್ಟ.. ಈಚೀಚೆಗೆ ಹೀಗೆ... ಹೆಚ್ಚು ಮಾತೇ ಆಡಲ್ಲ.. ಯಾವುದೋ ಲೋಕದಲ್ಲಿರ್ತಾಳೆ... ರೂಮಿಂದಾಚೆ ಬರೋದೇ ಇಲ್ಲ.. ಊಟ ತಿಂಡಿಯತ್ತ ಗಮನವೇ ಇಲ್ಲ..." ಎಂದಳು.. ಅಷ್ಟೇ ಅವಳಿಗೆ ಗೊತ್ತಿದ್ದುದು..ಅದು ಯಾಕೆಂದು ತಿಳಿಯುವ ಪ್ರಯತ್ನ ಅವಳು ಮಾಡಿದಂತಿಲ್ಲ..ಇನ್ನು ಭಾವ ಸಂಸಾರದಲ್ಲಿ ಇದ್ದೂ ಇಲ್ಲದಂತೆ ನೀರೊಳಗಿನ ಕಮಲದೆಲೆಯಂತೆ ಇದ್ದರು, ಮಗಳು ಮಗ ಏನು ಓದುತ್ತಿದ್ದಾರೆ ಎಂದೂ ಕೂಡಾ ಅವರಿಗೆ ಗೊತ್ತೋ ಇಲ್ಲವೋ...?

ರಾತ್ರಿ ಅವಳನ್ನು ನನ್ನ ಬಳಿಯೇ ಮಲಗಿಸಿಕೊಂಡು ಮಾತಾಡಿಸುತ್ತಾ ಇದ್ದೆ.. ಆಗಲೂ ಅವಳು ಅಂ... ಹೂಂ... ಇಷ್ಟೇ ಉತ್ತರ ಕೊಡುತ್ತಿದ್ದುದು, ನಿಜಕ್ಕೂ ನನಗೆ ಈಗ ಯೋಚನೆ ಶುರುವಾಯಿತು, ಯಾವುದೋ ಸಮಸ್ಯೆ ಅವಳಿಗೆ ಕಾಡುತ್ತಿದ್ದುದು ಸ್ಪಷ್ಟವಾಗಿ ಗೊತ್ತಾಗಿತ್ತು.. ಆದರೆ ಅದನ್ನು ಅವಳು ಬಾಯಿ ಬಿಡುತ್ತಿರಲಿಲ್ಲ.

* * * *

ನಾನು ಊರಿಗೆ ಹಿಂತಿರುಗುವುದರೊಳಗೆ ಅವಳ ಸಮಸ್ಯೆಯನ್ನು ಅರಿತು ಅದನ್ನು ಬಗೆಹರಿಸುವ ತೀರ್ಮಾನ ಮಾಡಿದ್ದೆ, ಅಂದು ಬೆಳಿಗ್ಗೆಯೇ ಅಕ್ಕ ಮಕ್ಕಳನ್ನು ದೇವಸ್ಥಾನದ ವಿಶೇಷ ಪೂಜೆ ಅಭಿಷೇಕಕ್ಕೆ ಎಂದು ಹೊರಡಿಸಿದ್ದಳು, ಅರುಷಿ ಎಂದಿನಂತೆ

"ನಾನು ಬರುವುದಿಲ್ಲ." ಎಂದು ಬಿಟ್ಟಳು. ಅಕ್ಕ ಅವಳಿಗೆ ಒತ್ತಾಯಿಸಿದಾಗ

"ಇರಲಿಬಿಡು ಅಕ್ಕ.. ಅರುಷಿಯೊಂದಿಗೆ ನಾನು ಇರುತ್ತೇನೆ.. ನೀವೆಲ್ಲಾ ಹೋಗಿಬನ್ನಿ...' ಎಂದಾಗ ಅಕ್ಕ ಒಪ್ಪಿ ಹೊರಟಳು. ಭಾವನೂ ಅಂಗಡಿಯಲ್ಲಿ ಇದ್ದರು, ಮನೆಯಿಡೀ ಖಾಲಿಯಾಗಿತ್ತು, ಅರುಷಿ ರೂಮಿನಲ್ಲಿ ಪುಸ್ತಕ ಹಿಡಿದು ಕುಳಿತಳು, ನಾನು ಅವಳೆದುರು ಹೋಗಿ ನಿಂತು

"ಏನಾಗಿದೆ ನಿಂಗೆ ಬಂಗಾರ... ಯಾಕೆ ಹೀಗಿದ್ದೀ... ಏನು ತೊಂದರೆ ಇದೆ ಅಂತ ನನ್ನ ಕೂಡ ಹೇಳಬಾರದಾ..." ಎಂದಾಗ ಅರುಷಿ ಕತ್ತೆತ್ತಿ ನನ್ನೆಡೆಗೆ ನೋಡಿದಳು.. ಆ ನೀಲಿ ಕಣ್ಣುಗಳು ತುಂಬಿ ಬಂದಿದ್ದವು, ಯಾವುದೋ ಹೆದರಿಕೆಯಿಂದ ತುಟಿಗಳು ಅದುರುತ್ತಿದ್ದವು, ನಾನು ಅವಳ ಪಕ್ಕದಲ್ಲೇ ಕುಳಿತು ಅವಳ ತಲೆ ನೇವರಿಸಿದೆ ಇದ್ದಕ್ಕಿದ್ದಂತೆ ಅವಳ ದು:ಖದ ಕಟ್ಟೆ ಒಡೆಯಿತು, ಮುಖಮುಚ್ಚಿ ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದಳು, ನನಗೆ ನಿಜಕ್ಕೂ ಗಾಬರಿಯಾಯಿತು.



ಅಕ್ಕಳಿಗೆ ಇಂತಹ ವಿಷಯದಲ್ಲಿ ಲೋಕಜ್ಞಾನ ತುಂಬಾ ಕಡಿಮೆಯಿತ್ತು, ತನ್ನ ಕೆಲಸದ ಒತ್ತಡದಲ್ಲಿ ಅವಳು ಮಗಳತ್ತ ಗಮನ ಹರಿಸುತ್ತಲೇ ಇರಲಿಲ್ಲ, ಹೂವಾಗಿ ಅರಳುತ್ತಿದ್ದ ಹದಿಹರೆಯದ ಹುಡುಗಿ ಅವಳ ರೂಪ ನಡವಳಿಕೆಗಳ ಮೇಲೆ ಚೂರು ನಿಗಾ ವಹಿಸಿದ್ದರೂ ಸಾಕಿತ್ತು, ಆದರೆ ಅಕ್ಕ ತನ್ನ ಅಡಿಗೆ ಮನೆಯ ಪರಿಧಿಯೊಳಗೆ ಇದ್ದುಬಿಟ್ಟು ಮಗಳ ಚಟುವಟಿಕೆ ಮನಸ್ಥಿತಿ ಬಗ್ಗೆ ತನ್ನ ರಿವಿಲ್ಲದೆಯೇ ನಿರ್ಲಕ್ಷ್ಯ ತೋರಿದ್ದಳು, ಎಲ್ಲವನ್ನೂ ಸ್ಪಷ್ಟವಾಗಿ ಬಿಡಿಸಿ ಹೇಳಿದರೆ ಗಾಬರಿಯಾಗುತ್ತಿದ್ದಳೇ ವಿನಹ ಒತ್ತಾಸೆಯಾಗಿ ನಿಂತು ಧೈರ್ಯ ತುಂಬುವ ಕೆಲಸ ಅವಳಿಂದಾಗುತ್ತಿರಲಿಲ್ಲ, ತಂದೆಯಂತೂ ತನ್ನ ವ್ಯಾಪಾರದ ಲೋಕದೊಳಗೆ ಮುಳುಗಿ ಹೋಗಿದ್ದರು, ಮಕ್ಕಳ ಅವಶ್ಯಕತೆ ಪೂರೈಕೆ ಬಿಟ್ಟರೆ ಅವರು ಎಂದೂ ಯಾವ ಜವಾಬ್ದಾರಿಯನ್ನೂ ಹೊತ್ತವರಲ್ಲ, ಅಲ್ಲದೆ ಅವರಿಗೆ ಹೀಗಾಯಿತೆಂದು ಹೇಳುವಷ್ಟು ಸಲಿಗೆಯಿರಲಿಲ್ಲ. ಹೀಗಾಗಿ ಅರುಷಿ ಭಯ ನೋವನ್ನು ಎದೆಯೊಳಗೆ ತುಂಬಿಕೊಂಡು ನಲುಗಿದ್ದಳು.

"ಯಾಕೆ ... ಯಾಕೆ... ಅರುಷಿ ಪುಟ್ಟ... ನೋಡಿಲ್ಲಿ.. ಅಳೋದು ಯಾಕೆ... ನಿನ್ನ ಪ್ರಾಬ್ಲಂ ಹೇಳು.. ಮೊದಲು..." ಎಂದು ಅವಳ ಬೆನ್ನು ಸವರಿದೆ, ಹುಡುಗಿ ಮಿತಿ ಮೀರಿದ ಒತ್ತಡದಿಂದ ಕಂಗೆಟ್ಟಂತಿತ್ತು, ಐದು ನಿಮಿಷ ಅಳು ನಿಲ್ಲಿಸಲೇ ಇಲ್ಲ , ಅಳಲಿ ಅವಳ ದು:ಖ ಕಡಿಮೆಯಾಗಲಿ ಎಂದು ನಾನು ಅವಳ ಬೆನ್ನು ತಲೆ ಸವರುತ್ತಲೇ ಇದ್ದೆ, ನನ್ನ ಸ್ಪರ್ಶ ನೇವರಿಕೆಗೆ ಅರುಷಿ ಅಳು ಹೆಚ್ಚಾಗುತ್ತಲೇ ಹೋಯಿತು.

"ಯಾಕೋ... ಬಂಗಾರಾ.... ಇಷ್ಟು ನೋವು ನಿನಗೆ...ಏನಾಯಿತು ಹೇಳು...." ಎಂದೆ

"ನಾನು ಸಾಯಬೇಕು ಚಿಕ್ಕೀ... ಬದುಕಲಿಕ್ಕೆ ಅವನು ಬಿಡುವುದಿಲ್ಲ.. ನಾ ಸತ್ತರೆ ಎಲ್ಲಾ ಮುಗಿಯತ್ತೆ..." ಅವಳ ಆವೇಶಭರಿತ ಮಾತು ಕೇಳಿ ನನ್ನ ತಲೆ ತಿರುಗಿದಂತಾಯಿತು, ಇಷ್ಟು ಪುಟ್ಟ ಹುಡುಗಿ ಬಾಯಲ್ಲಿ ಸಾಯುವ ಮಾತು, ಕರುಳು ಹಿಂಡಿತು, ಅವಳನ್ನು ನನ್ನ ಎದೆಗೆ ಒತ್ತಿಕೊಂಡು ನುಡಿದೆ.

"ಛೀ.. ಬಿಡ್ತು ಅನ್ನು ಅರುಷಿ... ಹಾಗೆಲ್ಲಾ ಮಾತಾಡಬೇಡ.. ನನಗೆ ನೋವಾಗುತ್ತೆ..." ಎಂದೆ ನನ್ನ ಕಣ್ಣಲ್ಲೂ ಹನಿಗಳು ತುಂಬಿ ನಿಂತವು. "ನಂಗೆ ಸಾಯಬೇಕೂ ಅಂತ ಅನ್ನಿಸ್ತಿದೆ ಚಿಕ್ಕಿ...." ಮತ್ತೆ ಮತ್ತೆ ಅವಳ ಬಾಯಲ್ಲಿ ಸಾಯುವ ಮಾತು

"ಹಾಗೆಲ್ಲಾ ಮಾತಾಡಬೇಡ ಬಂಗಾರ.... ಅಂತಹಾ ತೊಂದರೆ ಏನಿದೆ ಅಂತ ಹೇಳು.... ಎಲ್ಲಾ ಸಮಸ್ಯೆಗೂ ಪರಿಹಾರ ಇದ್ದೇ ಇರುತ್ತೆ.. ನಾನು ನಿನ್ನ ಜೊತೆ ಇರ್ತೀನಿ... ನಿನ್ನ ಸಮಸ್ಯೆ ಏನೇ ಇದ್ದರೂ ಈ ಚಿಕ್ಕಿ ಪರಿಹರಿಸ್ತಾಳೆ....ಪ್ರಾಮಿಸ್...." ಎಂದು ಮೃದುವಾಗಿ ಕೇಳಿದಾಗ ತನ್ನ ದು:ಖ ಆಚೆ ಹಾಕಿದ್ದಕ್ಕೋ , ನನ್ನ ಭರವಸೆಯ ಮಾತುಗಳಿಗೋ, ಪ್ರೀತಿಯ ಸ್ಪರ್ಶಕ್ಕೋ ಅಥವಾ ತನ್ನ ದು:ಖ ಹಂಚಿಕೊಳ್ಳಲು ಮತ್ತೊಬ್ಬರು ಸಿಕ್ಕಿದ್ದಕ್ಕೋ ಅರುಷಿ ಕೊಂಚ ಮೆತ್ತಗಾದಳು, ಮನೆಯೊಳಗಿನ ಏಕಾಂತ ಅವಳ ದು:ಖವನ್ನು ಹೊರಹಾಕಲು ಅನುವು ಮಾಡಿಕೊಟ್ಟಿತು.... ಮೆಲ್ಲಗೆ ತನ್ನ ಕಷ್ಟ ಹೇಳಿಕೊಂಡಳು......

* * * *

ಅವಳು ಇದೇ ವರ್ಷ ಹೈಸ್ಕೂಲಿಗೆ ಸೇರಿದ್ದಳು, ಇಂಗ್ಲೀಷ್ ಕ್ಲಾಸ್ ತೆಗೆದುಕೊಳ್ಳುತ್ತಿದ್ದ ಮನೀಶ್ ಎಂಬ ಮಾಸ್ತರ್‌ನಿಂದ ಅವಳಿಗೆ ಲೈಂಗಿಕ ಕಿರುಕುಳ ಶುರುವಾಗಿತ್ತು. ಅತೀ ಹತ್ತಿರ ಬಂದು ನಿಲ್ಲುವುದು, ಕೆನ್ನೆ ಗಿಂಡುವುದು, ಕೈ ಗಟ್ಟಿಯಾಗಿ ಹಿಡಿಯುವುದು, ಬೆನ್ನು ಸವರುವುದು.. ಇನ್ನೂ ಕೆಲವಾರು ವಕ್ರ ಚೇಷ್ಟೆಗಳಿಂದ ಅರುಷಿ ಬೇಸತ್ತಿದ್ದಳು. ಅವನಿಗೆ ಮದುವೆಯಾಗಿ ಮಗುವಿತ್ತು. ಆದರೂ, ಅವನು ಹುಡುಗಿಯರೊಂದಿಗೆ ಅನುಚಿತ ವರ್ತನೆ ತೋರುತ್ತಾ ಇದ್ದ. ಅದರಲ್ಲೂ ಗುಂಡುಗುಂಡಗೆ ಮುದ್ದಾಗಿದ್ದ ಅರುಷಿ ಸೌಂದರ್ಯ ಅವನಿಗೆ ಹುಚ್ಚು ಹಿಡಿಸಿತ್ತು. ಆದರೆ ಅರುಷಿಗೆ ಅವನ ಸ್ಪರ್ಶ ನೋಟ ಮಾತು ಎಲ್ಲವೂ ಅಸಹ್ಯ ತರಿಸುತ್ತಿತ್ತು.

"ಛೀ..." ಎಂದವಳು ಕೊಸರಿ ದೂರ ಹೋಗಿ ನಿಂತರೂ ಅವನು ಮತ್ತೆ ಮತ್ತೆ ಹತ್ತಿರ ಬಂದೇ ಬರುತ್ತಿದ್ದ.

* * * *

ಅಂದು ಶಾಲಾ ವಾರ್ಷಿಕೋತ್ಸವ ನಡೆಯುತ್ತಿತ್ತು, ಇಡೀ ಶಾಲೆ ವರ್ಣಮಯವಾಗಿ ಅಲಂಕೃತವಾಗಿತ್ತು, ಜೋರಾದ ಮೈಕಿನಲ್ಲಿ ಕಾರ್ಯಕ್ರಮದ ಧ್ವನಿಗಳು ಕಿವಿ ತೂತಾಗುವಂತೆ ಕೇಳಿ ಬರುತ್ತಿದ್ದವು, ಅರುಷಿ ಕೂಡಾ ಗೆಳತಿಯರ ಜೊತೆ ಸಂಭ್ರಮದಿಂದ ಓಡಾಡಿಕೊಂಡಿದ್ದಳು. ಸ್ಟೇಜಿನ ಮೇಲೆ ಯಾವುದೋ ಹಾಸ್ಯನಾಟಕ ಶುರುವಾಗಿತ್ತು. ಗೆಳತಿಯರೊಂದಿಗೆ ಅರುಷಿ ಮುಂದೆಯೇ ಕುಳಿತು ನಾಟಕವನ್ನು ನೋಡುತ್ತಿದ್ದಳು, ಆಗಲೇ ಪುಟ್ಟ ಹುಡುಗನೊಬ್ಬ ಬಂದು ಅವಳಿಗೆ

"ನಿನ್ನ ಅಮ್ಮ ತಮ್ಮ ಹಿಂದುಗಡೆ ಇರುವ ಹಳೇ ರೂಮಿನ ಬಳಿ ಕಾಯುತ್ತಿದ್ದಾರಂತೆ ಈಗಲೇ ಬರಬೇಕಂತೆ..." ಎಂದು ಹೇಳಿ ಓಡಿಹೋಗಿದ್ದ, "ಅರೆ... ಅಮ್ಮ ಅಭಿ ಬಂದಿದ್ದಾರಾ.. ಅಲ್ಲೇಕೆ ಬಂದರು..." ಎಂದುಕೊಳ್ಳುತ್ತಲೇ ಅರುಷಿ ಹಿಂದೆ ಮುಂದೆ ಯೋಚಿಸದೆ ತಕ್ಷಣ ಎದ್ದು ಶಾಲೆಗೆ ಹಿಂಭಾಗದ ಗೇಟಿನ ಬಳಿ ಇದ್ದ ಹಳೆಯ ಸಾಮಾನುಗಳನ್ನಿಡುವ ರೂಮಿನ ಬಳಿ ಹೊರಟಳು, ಸರಿಯಾದ ಬೆಳಕೂ ಕೂಡ ಇರಲಿಲ್ಲ, ಬಾಗಿಲು ತೆರೆದಿತ್ತು

"ಅಮ್ಮಾ... ಇಲ್ಲೇಕೆ ಬಂದಿ..." ಎನ್ನುತ್ತಲೇ ಅರುಷಿ ಆ ರೂಮಿನೊಳಗೆ ನುಗ್ಗಿದಳು, ಅಲ್ಲಿ ಕುಳಿತಿತ್ತು ಮನೀಶ ನೆಂಬ ಗೋಮುಖ ವ್ಯಾಘ್ರ ಜಿಂಕೆ ಬೇಟೆಯಾಡಲು ಹೊಂಚುಹಾಕುತ್ತಾ... ಆ ನಸುಕತ್ತಲಲ್ಲಿ ಯಾರೂ ಕಾಣದೆ ಅರುಷಿ ಗೊಂದಲದಿಂದ ಅರೆಗಳಿಗೆ ನಿಂತಳು, ಕೂಡಲೇ ಮನೀಶ್ ರೂಮಿನ ಚಿಲಕ ಭದ್ರವಾಗಿ ಹಾಕಿಬಿಟ್ಟ, ಬೆಚ್ಚಿದ ಅರುಷಿ ಅಪಾಯದ ವಾಸನೆ ಹಿಡಿದು ನಡುಗಿದಳು ತಪ್ಪಿಸಿಕೊಳ್ಳಲು ಬಾಗಿಲ ಬಳಿ ಹೋಗುವಷ್ಟರಲ್ಲಿ ಮನೀಶ್ ಅವಳನ್ನು ಬಿಗಿಯಾಗಿ ಹಿಡಿದಿದ್ದ.ಕೂಗಿಕೊಳ್ಳಲು ಆಗದಂತೆ ಬಾಯಿ ಅದುಮಿದ್ದ, ಅರುಷಿ ಕೈಕಾಲು ಕೊಸರಿ ಪ್ರತಿಭಟಿಸಿದಳು, ಅವನು ಜೋರಾಗಿ ಕಿರುಚಿದ

'ನಾನು ಹೇಳಿದಂತೆ ಕೇಳಲಿಲ್ಲಾ ಅಂದರೆ ಫೇಲ್ ಮಾಡಿಸ್ತೀನಿ.. ನಿನ್ನ ಮುಖಕ್ಕೆ ಆಸಿಡ್ ಎರಚ್ತೀನಿ.. ಸುಮ್ಮನೆ ಒಪ್ಪಿಕೋ... ನೀನಿಲ್ಲಿ ಎಷ್ಟೇ ಕಿರುಚಿದರೂ ಯಾರಿಗೂ ಕೇಳಲ್ಲ..." ಎಂದೆಲ್ಲಾ ಕರ್ಕಶವಾಗಿ ಕೂಗಿ ಹೆದರಿಸಿದ್ದ, ಅರುಷಿ ಒಂದೆರಡು ಬಾರಿ ಜೋರಾಗಿ ಕೂಗಿದ್ದಳಾದರೂ ಶಾಲಾ ವಾರ್ಷಿಕೋತ್ಸವದ ಜೋರಾದ ಧ್ವನಿವರ್ಧಕದ ಸದ್ದು ಇವಳ ಕೂಗನ್ನು ನುಂಗಿಹಾಕಿತ್ತು.

* * * *

ಸೋಲಬಾರದು ಅರುಷಿ ಅವುಡುಗಚ್ಚಿ ತನ್ನಲ್ಲಿದ್ದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಅವನ ಬಲಿಷ್ಠ ಕೈಯನ್ನೂ ಜೋರಾಗಿ ಕಚ್ಚಿ ಉಗುರಿಂದ ಮುಖವನ್ನು ಪರಚುತ್ತಾ ಅವನ ಹಿಡಿತದಿಂದ ಬಿಡಿಸಿಕೊಂಡಳು. ನಂತರ ಕೈಗೆ ಸಿಕ್ಕ ವಸ್ತುಗಳಿಂದ ಅವನನ್ನು ಹೊಡೆದು ಹೇಗೋ ಚಿಲಕ ತೆಗೆದು ಅವನ ರಾಕ್ಷಸ ಹಿಡಿತದಿಂದ ತಪ್ಪಿಸಿಕೊಂಡು ಜಿಂಕೆಯಂತೆ ಹೊರಗೆ ಓಡಿಬಂದಳು, ಕತ್ತಲಲ್ಲಿ ಎಡವುತ್ತಾ ಅತ್ತಿತ್ತ ನೋಡದೆ ಸೀದಾ ಮನೆಯತ್ತ ಒಂದೇ ಸಮನೆ ಓಡೋಡಿ ಬಂದಳು. ನಂತರ ಸೀದಾ ತನ್ನ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು, ಅವಳಿಡೀ ದೇಹ ಭಯದಿಂದ ನಡುಗುತ್ತಿತ್ತು, ರಾತ್ರಿಯಿಡೀ ಹೆದರಿದ್ದ ಅವಳಿಗೆ ಮೂರು ದಿನ ಜೋರು ಜ್ವರ ಕಾಡಿತು. ತಾಯಿ ಅವಳ ದೇಹಕ್ಕೇನೋ ಆರೈಕೆ ಮಾಡಿದಳು. ಆದರೆ ಆಘಾತದಿಂದ ತತ್ತರಿಸಿದ ಮನಸ್ಸಿನ ಭಯ ಹೋಗಲಾಡಿಸಲು ಅವಳಿಂದಾಗಲಿಲ್ಲ, ತಾಯಿಗದು ಗೊತ್ತೂ ಆಗಲಿಲ್ಲ, ಅರುಷಿ ಅದನ್ನು ತಾಯಿಯೊಡನೆ ಹೇಳಿಕೊಳ್ಳಲು ಧೈರ್ಯ ಸಾಲದೆ ಸುಮ್ಮನಾದಳು. ಈ ವಿಷಯ ಯಾರಲ್ಲಿ ಹೇಳಿಕೊಂಡು ಸಮಾಧಾನ ಮಾಡಿಕೊಳ್ಳುವುದೋ ಅವಳಿಗೆ ತೋಚಲಿಲ್ಲ, ಗೆಳತಿಯರ ಮುಂದೆ ಹೇಳಲು ಮನಸ್ಸೇಕೋ ಒಪ್ಪಲಿಲ್ಲ ಎಲ್ಲರೂ ಅವಳಂತೆಯೇ ಅಂಜುಕುಳಿಗಳೇ ಆಗಿದ್ದರು ಅವರಿಂದ ಈ ಸುದ್ದಿ ಹೊರಗಡೆ ಹಬ್ಬಿ ಬಿಡುವ ಭಯದಿಂದಾಗಿ ಅದನ್ನು ಒಳಗೊಳಗೇ ನುಂಗಿಕೊಂಡು ಸುಮ್ಮನಾದಳು.

ಅಕ್ಕಳಿಗೆ ಇಂತಹ ವಿಷಯದಲ್ಲಿ ಲೋಕಜ್ಞಾನ ತುಂಬಾ ಕಡಿಮೆಯಿತ್ತು, ತನ್ನ ಕೆಲಸದ ಒತ್ತಡದಲ್ಲಿ ಅವಳು ಮಗಳತ್ತ ಗಮನ ಹರಿಸುತ್ತಲೇ ಇರಲಿಲ್ಲ, ಹೂವಾಗಿ ಅರಳುತ್ತಿದ್ದ ಹದಿಹರೆಯದ ಹುಡುಗಿ ಅವಳ ರೂಪ ನಡವಳಿಕೆಗಳ ಮೇಲೆ ಚೂರು ನಿಗಾ ವಹಿಸಿದ್ದರೂ ಸಾಕಿತ್ತು, ಆದರೆ ಅಕ್ಕ ತನ್ನ ಅಡಿಗೆ ಮನೆಯ ಪರಿಧಿಯೊಳಗೆ ಇದ್ದುಬಿಟ್ಟು ಮಗಳ ಚಟುವಟಿಕೆ ಮನಸ್ಥಿತಿ ಬಗ್ಗೆ ತನ್ನರಿವಿಲ್ಲದೆಯೇ ನಿರ್ಲಕ್ಷ್ಯ ತೋರಿದ್ದಳು, ಎಲ್ಲವನ್ನೂ ಸ್ಪಷ್ಟವಾಗಿ ಬಿಡಿಸಿ ಹೇಳಿದರೆ ಗಾಬರಿಯಾಗುತ್ತಿದ್ದಳೇ ವಿನಹ ಒತ್ತಾಸೆಯಾಗಿ ನಿಂತು ಧೈರ್ಯ ತುಂಬುವ ಕೆಲಸ ಅವಳಿಂದಾಗುತ್ತಿರಲಿಲ್ಲ, ತಂದೆಯಂತೂ ತನ್ನ ವ್ಯಾಪಾರದ ಲೋಕದೊಳಗೆ ಮುಳುಗಿ ಹೋಗಿದ್ದರು, ಮಕ್ಕಳ ಅವಶ್ಯಕತೆ ಪೂರೈಕೆ ಬಿಟ್ಟರೆ ಅವರು ಎಂದೂ ಯಾವ ಜವಾಬ್ದಾರಿಯನ್ನೂ ಹೊತ್ತವರಲ್ಲ, ಅಲ್ಲದೆ ಅವರಿಗೆ ಹೀಗಾಯಿತೆಂದು ಹೇಳುವಷ್ಟು ಸಲಿಗೆಯಿರಲಿಲ್ಲ. ಹೀಗಾಗಿ ಅರುಷಿ ಭಯ ನೋವನ್ನು ಎದೆಯೊಳಗೆ ತುಂಬಿಕೊಂಡು ನಲುಗಿದ್ದಳು.

* * * *

ಅವನು ಹೇಳಿದಂತೆ ಆಸಿಡ್ ಎರಚಿಬಿಟ್ಟರೆ ಎಂಬ ಭಯದ ಭೂತಕ್ಕೆ ಸಿಕ್ಕಿ ಮನಸ್ಸು ಬುದ್ಧಿ ಸ್ಥಿಮಿತ ಕಳೆದುಕೊಳ್ಳುತ್ತಿತ್ತು, ಹೇಗೆ ಪರೀಕ್ಷೆಗೆ ಓದಿದಳೋ ಏನು ಬರೆದಳೋ ಅವಳಿಗೆ ನೆನಪೇ ಇಲ್ಲ, ನಾಲ್ಕೈದು ಗೆಳತಿಯರೊಂದಿಗೆ ಪರೀಕ್ಷೆಗೆ ಹೋಗುವಾಗಲೂ ಮನೀಶ್ ಎದುರಾಗಿದ್ದ, ಅವಳನ್ನು ಕೆಕ್ಕರಿಸಿಕೊಂಡು ನೋಡುತ್ತಾ ಅವಳಿಗೆ ತೀರ ಸಮೀಪ ಬಂದು ಅವಳಿಗಷ್ಟೇ ಕೇಳುವಂತೆ

"ಅವತ್ತು ತಪ್ಪಿಸಿಕೊಂಡೆ... ಮುಂದೆ ಸಿಗದೆ ಎಲ್ಲಿ ಹೋಗ್ತೀಯಾ.. ನಿನ್ನ ಬದುಕು ಚಿಂದಿ ಮಾಡ್ತೀನಿ ನೋಡ್ತಿರು..." ಎಂದಾಗ ಚಳಿ ಬಂದಂತೆ ಅರುಷಿ ಭಯದಿಂದ ನಡುಗಿಬಿಟ್ಟಳು, ಹೇಗೋ ಎಲ್ಲಾ ಪರೀಕ್ಷೆ ಮುಗಿಸಿ ಮನೆಯೊಳಗೆ ಉಳಿದುಬಿಟ್ಟಳು, ಗೇಟಿಂದಾಚೆ ಕೂಡ ಕಾಲಿಡಲಿಲ್ಲ, ಗೆಳತಿಯರು ಅಲ್ಲಿ ಎಲ್ಲೆಂದು ಕರೆದರೂ ಹೋಗಲಿಲ್ಲ. ಅವನ ಮಾತನ್ನು ನೆನೆದಷ್ಟೂ ಅವಳಿಗೆ ಬುದ್ಧಿ ಸ್ಥಿಮಿತ ತಪ್ಪುತ್ತಿತ್ತು, ಮತ್ತೆ ಅವಳು ಜ್ವರದಿಂದ ಮಲಗಿಬಿಟ್ಟಳು, ಮತ್ತೆ ತಾಯಿ ಉಪಚಾರ ಮಾಡಿದರು ಅವರಿಗೆ ಮಗಳ ಮನದ ಹೊಯ್ದಾಟದ ಅರಿವಿಲ್ಲ, ಭಯದ ಮೂಲ ತಿಳಿದಿಲ್ಲ, ಸೂಕ್ಷ್ಮವಾಗಿ ತಿಳಿಯುವಷ್ಟು ತಿಳುವಳಿಕೆಯೂ ಅವಳಿಗಿಲ್ಲ, ಪರೀಕ್ಷೆಯ ಭಯಕ್ಕೆ ಜ್ವರ ಬಂದಿರಬಹುದು ಎಂದು ಭಾವಿಸಿದಳಷ್ಟೇ.....

"ಇಷ್ಟು ಚಿಕ್ಕಿ ವಿಷಯ . ನನಗೆ ಅವನ ಕಾಟ ಸಾಕಾಗಿದೆ... ದಿನಾಗಲೂ ನಮ್ಮನೆ ಮುಂದೆ ಅವನು ಬೇಕೆಂದೇ ಓಡಾಡ್ತಾನೆ...ನಾನು ರೂಮಿನ ಕಿಟಕಿ ಬಾಗಿಲು ಕೂಡಾ ತೆಗೀತಿಲ್ಲ. ರೂಮೊಳಗೆ ಕೂರ್ತೀನಿ... ತುಂಬಾ ಭಯ ಆಗ್ತಿದೆ ಚಿಕ್ಕಿ...." ಅರುಷಿ ಮತ್ತೆ ಅತ್ತಳು, ಅತ್ತೂ ಅತ್ತೂ ಅವಳ ನೀಲಿ ಕಣ್ಣುಗಳು ಕೆಂಪಗಾಗಿ ಊದಿಕೊಂಡವು.

* * * *

ನನಗೆ ತುಂಬಾ ಆಘಾತವಾಯಿತು ವಿಷಯ ತಿಳಿದು, ಎಷ್ಟು ಭಯಪಟ್ಟಿದೆ ಈ ಪುಟ್ಟ ಹುಡುಗಿ.. ಇಷ್ಟು ದಿನ ಹೇಗೆ ತಡೆದಿದೆ ಇಂತಹ ಒತ್ತಡವನ್ನು ಎಂದು ತುಂಬಾ ಸಂಕಟಪಟ್ಟೆ, ಆ ಕೆಟ್ಟ ಹುಳುವಿನ ಮೇಲೆ ಕೋಪವೂ ಬಂತು, ಅಲ್ಲಾ ವಿದ್ಯಾದಾನದಂತಹ ಪವಿತ್ರವಾದ ವೃತ್ತಿಯಲ್ಲಿದ್ದುಕೊಂಡು ಇಂತಹ ಕೀಳು ಬುದ್ಧಿ ಕಾಮನೆಗಳಿಂದ ವಿದ್ಯಾರ್ಥಿಗಳ ಬಾಳನ್ನೇ ಬಲಿ ತೆಗೆದುಕೊಳ್ಳುವ ಇಂತಹ ವ್ಯಕ್ತಿಗಳಿಗೆ ಕಠಿಣ ಶಿಕ್ಷೆಯನ್ನೇ ಕೊಡಬೇಕು.. ಥೂ... ಅವನಿಗೆ ಮನಸ್ಸಲ್ಲೇ ಛೀಮಾರಿ ಹಾಕಿದೆ.

ಈಗ ಮೊದಲು ಅರುಷಿಯತ್ತ ಗಮನ ಹರಿಸಬೇಕಿತ್ತು, ಭಯದ ಭೂತದಿಂದ ಬಿಡಿಸಬೇಕಿತ್ತು, ಆತ್ಮಹತ್ಯೆ ಎಂಬ ಕೆಟ್ಟ ವಿಚಾರಗಳಿಂದ ಹೊರತರಬೇಕಿತ್ತು, ಹೆದರಿದ ಮನಸ್ಸಿನ ಗಾಯಕ್ಕೆ ಧೈರ್ಯದ ಮುಲಾಮು ಸವರಬೇಕಿತ್ತು, ಆದ್ದರಿಂದ ಅರುಷಿಯನ್ನು ಸಮಾಧಾನಿಸಿ ಧೈರ್ಯ ತುಂಬುವ ಕೆಲಸ ಮಾಡಿದೆ.

"ಛೀ.. ಬಂಗಾರಾ... ಇಷ್ಟಕ್ಕೆಲ್ಲಾ ಸಾಯುತ್ತಾರೇನು.. ನೀನು ಮೊದಲು ಮನಸ್ಸಿಗೆ ಧೈರ್ಯ ತಂದುಕೋ.. ಯೋಚನೆ ಮಾಡು... ಧೈರ್ಯದಿಂದ ಎದುರಿಸೋಣ...ಪೊಲೀಸ್ ಕಂಪ್ಲೇಂಟ್ ಕೊಡೋಣ... ನಿನಗೇನು ತೊಂದರೆಯಾಗಲ್ಲ..." ಎಂದಾಗ ಅರುಷಿ ಕಣ್ಣುಗಳು ಭಯದಿಂದ ಅಗಲವಾಯಿತು.

"ಅಯ್ಯೋ ಹಾಗೆಲ್ಲಾ ಮಾಡಿದರೆ ಇನ್ನೂ ತೊಂದರೆ ಕೊಡಬಹುದು... ನಾನು ಒಬ್ಬಳೇ ಹೊರಹೋಗುವ ಹಾಗೇ ಇಲ್ಲ..." ಅವಳು ಭಯದಿಂದ ಬಡಬಡಿಸಿದಳು, ಅವಳ ಕೈಯನ್ನು ನನ್ನ ಕೈಯೊಳಗೆ ಇಟ್ಟುಕೊಳ್ಳುತ್ತಾ

"ಇಲ್ಲಾ.. ಹಾಗೇನು ಆಗಲ್ಲ.. ನಾನು ಇರ್ತೀನಿ.. ನನ್ನ ಫ್ರೆಂಡ್ ಒಬ್ಬಳು ಇನ್ಸ್‌ಪೆಕ್ಟರ್ ಆಗಿದ್ದಾಳೆ.. ಅವಳ ಹೆಲ್ಪ ತೊಗೊಳ್ಳೋಣ... ನಾವು ಹೆದರಿದರೆ ಹೆದರಿಸುವವರು ಇದ್ದೇ ಇರ್ತಾರೆ... ಧೈರ್ಯವಾಗಿ ನುಗ್ಗಿದರೆ ಹೆದರಿ ಓಡಿ ಹೋಗ್ತಾರೆ.....ನೀನು ನಂಗೆ ಪ್ರಾಮಿಸ್ ಮಾಡಬೇಕು ಜೀವಕ್ಕೆ ಏನೂ ತೊಂದರೆ ಮಾಡ್ಕೊಳ್ಳಲ್ಲಾ ಅಂತ...." ಎಂದೆಲ್ಲಾ ಭರವಸೆ ಕೊಟ್ಟ ಮೇಲೆ ಹುಡುಗಿ ಗೆಲುವಾದಳು...

"ಸದ್ಯಕ್ಕೆ ಮಲಗಿ ರೆಸ್ಟ್ ಮಾಡು.. ಧೈರ್ಯದಿಂದ ಬಂದ ಸಮಸ್ಯೆ ಎದುರಿಸಿದಾಯಿತು... ನಾಳೆ ಮಾತಾಡೋಣ..." ಎಂದು ಅವಳನ್ನು ಮಲಗಿಸಿದೆ, ತುಸು ನಿರಾಳವಾಗಿ ಮಲಗಿದಳು.

* * * *

ಎರಡು ದಿನ ಕಳೆಯಿತು, ಯೋಚನೆಗಳಿಂದ ನನ್ನ ತಲೆ ಬಿಸಿ ಏರಿತ್ತು, ಮರುದಿನ ಅವಳನ್ನು ಮನೆಯ ಹಿತ್ತಲಲ್ಲಿ ಕೂರಿಸಿಕೊಂಡು ಹೇಳಿದೆ

"ನೋಡು ಅರುಷಿ ನೀನೀಗ ಧೈರ್ಯದ ಹುಡುಗಿಯಾಗಿ ನಿಲ್ಲಬೇಕು, ನಾನು ಊರಿಗೆ ಬರುವ ದಿನ ಬಸ್ಸಲ್ಲಿ ನಿನ್ನಂತಹುದೇ ಒಂದು ಹುಡುಗಿ ತನಗೆ ತೊಂದರೆ ಕೊಡುತ್ತಿದ್ದ ಎಂದು ಒಬ್ಬ ಹುಡುಗನ ಕೆನ್ನೆಗೆ ಸರಿಗೆ ಬಾರಿಸಿದಳು ನೋಡು... ಅವನು ಹೆದರಿ ನಡುಗಿ ಮುದುರಿಕೊಂಡು ಹೋದ... ಹಾಗೆ ನೀನು ಮಾಡಬೇಕು...." ಎಂದಾಗ ಅರುಷಿ ಅಳುಕಿನಿಂದ

"ಅವನನ್ನು ಹೇಗೆ ಎದುರಿಸಲಿ ಚಿಕ್ಕಿ.." ಎಂದಳು.'

"ನೋಡು ಬಂಗಾರ ಅವನನ್ನು ಎದುರಿಸಲು ಬೇಕಾದ ಶಕ್ತಿ ಧೈರ್ಯ ನಿನ್ನೊಳಗೇ ಇದೆ, ನಿನ್ನನ್ನು ನೀನೇ ರಕ್ಷಿಸಿಕೋ, ಸಮಯ ಬಂದರೆ ಕಾಲಿನದನ್ನು ಕೈಗೆತ್ತಿಕೊಂಡು ನಾಲ್ಕು ಬಾರಿಸು, ಜೋರಾಗಿ ಗಲಾಟೆ ಮಾಡು, ಜನರನ್ನು ಸೇರಿಸು, ಹೆಡಮಾಸ್ತರಿಗೆ ಹೇಳು, ಒಟ್ಟಿನಲ್ಲಿ ಅವನ ವಿರುದ್ಧ ನಿಂತು ಹೋರಾಡಲು ಮಾನಸಿಕವಾಗಿ ಸಿದ್ಧಳಾಗು..."

"ನಂಗೆ ಭಯಾ ಆಗತ್ತೆ ಚಿಕ್ಕಿ...." ಎಂದಳು ಮತ್ತದೇ ಹಿಂಜರಿಕೆಯಿಂದ

"ನೋ...ನೋ.. ಅರುಷಿ.. ಹಾಗೆ ಹೇಳಬೇಡಾ... ಹೆದರಬೇಡ, ನೀನು ಧೈರ್ಯವಾಗಿರಬೇಕು, ಮೈಯೆಲ್ಲಾ ಕಣ್ಣಾಗಿರಬೇಕು, ನಮಗೆ ಅನ್ಯಾಯವಾದಾಗ ಸುಮ್ಮನಿರಬಾರದು, ಅದರ ವಿರುದ್ಧ ಹೋರಾಡಬೇಕು, ನಾಯಿ ಬೆಕ್ಕುಗಳು ಕೂಡಾ ಅಪಾಯಬಂದಾಗ ಗುರ್ ಎಂದು ಹೆದರಿಸುತ್ತವೆ. ಇನ್ನು ನೀನು ಯಾಕೆ ಸುಮ್ಮನಿರುತ್ತೀಯಾ... ನಿನ್ನ ಜೀವನ ಇದು ಪ್ರತಿಭಟಿಸು.. ಖಂಡಿತಾ ಗೆಲುವು ನಿನ್ನದೇ...."

ಜೊತೆಗೆ ನನ್ನ ಪೊಲೀಸ್ ಗೆಳತಿಯ ಫೋನ್ ನಂಬರ್ ಕೊಟ್ಟು

"ಇದು ನನ್ನ ಫ್ರೆಂಡ್ ನಂಬರ್ ಅವಳಿಗೆ ಎಲ್ಲಾ ಹೇಳಿದ್ದೀನಿ.. ತೊಂದರೆ ಆದರೆ ಅವಳಿಗೆ ಕೂಡಲೇ ಫೋನ್ ಮಾಡು.. ಒದ್ದು ಎಳೆದುಕೊಂಡು ಹೋಗಿ ಜೈಲಿಗೆ ಹಾಕ್ತಾರೆ...ಒಟ್ಟಿನಲ್ಲಿ ನೀನು ಮನಸ್ಸಿನೊಳಗಿಂದ ಧೈರ್ಯ ಹುಟ್ಟು ಹಾಕಿಕೋಬೇಕು.. ಎಂದಾಗ ಅರುಷಿಯ ನೀಲಿ ಕಣ್ಣಲ್ಲಿ ಸ್ವಲ್ಪ ಕಾಂತಿ ಮೂಡಿತು, ಮಂಕುತನ ಕಡಿಮೆಯಾಯಾಯಿತು , ಧೈರ್ಯ ತುಂಬಿಕೊಂಡ ನಂತರ ಹೋರಾಡುವ ಕಿಚ್ಚು ಹಚ್ಚಿಕೊಂಡ ನಂತರ ಹುಡುಗಿ ಗೆಲುವಾದಳು, ಕಣ್ಣಲ್ಲಿ ಆತ್ಮವಿಶ್ವಾಸದ ಬೆಳಕು ಹರಡಿಕೊಂಡಿತು.

* * * *

ಈ ಮಧ್ಯೆ ಅವಳ ಶಾಲಾ ಪರೀಕ್ಷೆಯಲ್ಲಿ ರಿಸಲ್ಟ್ ಬಂದಾಗ ಅವಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಳು ಇದು ಅವಳಿಗೆ ಖುಷಿ ಕೊಟ್ಟಿತು

"ಇಷ್ಟು ನಂಬರ್ ಬಂದದ್ದೇ ಹೆಚ್ಚು ಚಿಕ್ಕಿ.. ಆ ಟೈಂನಲ್ಲಿ ನಾನು ಹೆದರಿಕೊಂಡೆ ಪರೀಕ್ಷೆಗೆ ಹೋಗುತ್ತಿದ್ದೆ..ಓದಿದ್ದೆಲ್ಲಾ ಮರೆತುಹೋಗುತ್ತಿತ್ತು ಭಯಕ್ಕೆ..." ಎಂದಳು. ಈಗ ನನ್ನೊಡನೆ ಮನಬಿಚ್ಚಿ ಮಾತಾಡುತ್ತಿದ್ದಳು, ನಗುತ್ತಿದ್ದಳು, ಹೆದರಿಕೆಯನ್ನು ಮೆಟ್ಟಿ ನಿಲ್ಲುವ ಸಂಕಲ್ಪ ಅವಳದು.

"ಚಿಕ್ಕಿ... ನಾಳೆಯಿಂದ ಸ್ಕೂಲ್ ಓಪನ್ ಆಗ್ತಿದೆ... ಇನ್ನೊಂದು ನಾಲ್ಕುದಿನ ಇಲ್ಲಿರಿ.. ನಿಮ್ಮ ಮಾತು ಧೈರ್ಯ ಕೊಡತ್ತೆ... ಖಂಡಿತಾ ಅವನನ್ನ ಎದುರಿಸ್ತೀನಿ...." ಎಂದಾಗ ಒಪ್ಪಿಕೊಂಡು ಪ್ರಯಾಣವನ್ನು ಮುಂದೂಡಿದೆ. ಮರುದಿನ ಅವಳು ಸ್ಕೂಲಿಗೆ ಹೊರಟಳು, ಆತ್ಮವಿಶ್ವಾಸದಿಂದ ತಲೆ ಎತ್ತಿ ಧೈರ್ಯ ತುಂಬಿಕೊಂಡು ಹೊರಟ ಅರುಷಿ ನೋಡಿ ಖುಷಿಯಾಯಿತು, ಅವಳ ಕೈ ಅದುಮುತ್ತಾ

"ನಾನು ನಿನ್ನ ಹಿಂದೆಯೇ ಇರುತ್ತೀನಿ ತೊಂದರೆ ಆದಾಗ ಕಾಣಿಸಿಕೊಳ್ತೀನಿ... ಎಳ್ಳಷ್ಟೂ ಹೆದರಿಕೆಬೇಡ...." ಎಂದಾಗ ಆ ನೀಲಿಕಣ್ಣಲ್ಲಿ ಮತ್ತಷ್ಟು ಹೊಳಪು ತುಂಬಿತು.

* * * *

ಮೊದಲ ದಿನ ಆ ಶಿಕ್ಷಕ ಬಂದಿರಲಿಲ್ಲ, ಮರುದಿನ ಬಂದಿದ್ದ, ನಾನು ದೂರದಿಂದಲೇ ಅವನನ್ನು ಗಮನಿಸು ತ್ತಿದ್ದೆ, ಶಾಲಾ ಗೇಟಿನಲ್ಲಿ ಅವನು ಅವಳಿಗಾಗಿ ಕಾಯುತ್ತಿದ್ದಂತೆ ನಿಂತಿದ್ದ, ಅರುಷಿ ಹತ್ತಿರ ಬರುತ್ತಿದ್ದಂತೆ ಮೆಲ್ಲನೆ

"ಏನೇ ಕಣ್ಣು ತಪ್ಪಿಸಿ ಓಡಾಡ್ತೀಯಾ.. ನಿಂಗಿದೆ ಮುಂದೆ.. ನೋಡ್ತಾ ಇರು ಹೇಗೆ ಕಾಡ್ತೀನಿ.. ಅಂತಾ... ಆಸಿಡ್ ಎರಚಿ ಮುಖ ಕುರೂಪ ಮಾಡ್ತೀನಿ..." ಎಂದಾಗ ಅರುಷಿ ಚಂಡಿಯಾದಳು, ಭದ್ರಕಾಳಿಯಾದಳು, ಹಿಂದೆ ಅನುಭವಿಸಿದ್ದ ನೋವು ಸಿಟ್ಟು ಎಲ್ಲಾ ಒಟ್ಟಿಗೆ ಮೇಳೈಸಿ ರೋಷದಿಂದ ಸಿಡಿದು ನಿಂತಳು, ಸೀದಾ ಚಪ್ಪಲಿ ಕಳಚಿ ಅವನ ಮುಖಮೂತಿ ನೋಡದೆ ಬಾರಿಸುತ್ತಾ

"ನಂಗೆ ಅವತ್ತಿಂದ ಹೆದರಿಸ್ತಾ ಇದ್ದೀಯಾ... ಆಸಿಡ್ ಹಾಕ್ತೀಯಾ, ನಿನ್ನ ಮಗಳು ಸಮಾನ ನಾನು.. ನನ್ನ ಹತ್ತಿರ ಕೆಟ್ಟದಾಗಿ ಬಿಹೇವ್ ಮಾಡ್ತೀಯಾ.. .ಥೂ... ನಿನ್ನ ಜನ್ಮಕ್ಕೆ.." ಎಂದು ಜೋರಾಗಿ ಒದರುತ್ತಾ ಅವನಿಗೆ ಹೊಡೆಯುತ್ತಿದ್ದಾಗ ಅವನು ಅವಳ ಏಟಿನಿಂದ ತಪ್ಪಿಸಿಕೊಳ್ಳಲಾಗದೆ ನೆಲಕ್ಕೆ ಬಿದ್ದ, ಜನ ಸೇರಿದರು ಎಲ್ಲರಿಗೂ ವಿಷಯ ಗೊತ್ತಾಗಿ ಅರುಷಿಯ ಪರ ನಿಂತು

"ಇನ್ನೂ ನಾಲ್ಕು ಹಾಕಮ್ಮಾ... ಬುದ್ದಿ ಬರಲಿ..." ಎಂದು ಅವಳೊಂದಿಗೆ ತಾವೂ ಅವನನ್ನು ಹೊಡೆಯಲು ಶುರು ಮಾಡಿದರು, ಅದೇ ಶಾಲೆಯ ಇನ್ನೂ ಕೆಲ ಹುಡುಗಿಯರು ಕೂಡ ತಮಗೂ ಅವನಿಂದ ತೊಂದರೆ ಆಗುತ್ತಿದ್ದುದನ್ನು ಹೇಳುತ್ತಾ ತಾವೂ ಅವನಿಗೆ ಕೈಗೆ ಸಿಕ್ಕಿದ್ದರಲ್ಲಿ ಬಾರಿಸುತ್ತಿದ್ದಾಗ ವಿಷಯ ಗೊತ್ತಾಗುತ್ತಿದ್ದಂತೆ ಹೆಡಮಾಸ್ತರ್ ಓಡೋಡಿ ಬಂದರು, ಅವರೇ ಪೊಲೀಸರಿಗೆ ಫೋನ್ ಮಾಡಿ ಕರೆಸಿ ಅವನನ್ನು ವಶಕ್ಕೆ ಒಪ್ಪಿಸಿಬಿಟ್ಟರು, ತಮ್ಮ ಶಾಲೆಯಲ್ಲಿ ಇಂತಹ ಘಟನೆ ನಡೆದಿದ್ದಕ್ಕೆ ಅವರು ತುಂಬಾ ನೊಂದು ಕೊಂಡರು. ಒಟ್ಟಿನಲ್ಲಿ ಅರುಷಿ ಅಂದು ಧೈರ್ಯವಾಗಿ ಅವನನ್ನು ಎದುರಿಸಿ ಎಲ್ಲರ ಕಣ್ಣಲ್ಲಿ ದಿಟ್ಟ ಬಾಲಕಿ ಎನಿಸಿ ಕೊಂಡಳು. ಅಲ್ಲಿ ನಿಂತಿದ್ದ ನನ್ನೆಡೆಗೆ ನೋಡುತ್ತಾ ಹೆಬ್ಬೆರಳು ಮೇಲೆತ್ತಿ ವಿಜ ಯದ ಸಂಕೇತ ತೋರಿದಳು.

ಸಂಜೆ ಮನೆಗೆ ಬಂದ ಅರುಷಿ ಕೂಡಲೇ ನನ್ನನ್ನು ತಬ್ಬಿಕೊಂಡು ಕೆನ್ನೆಗೆ ಮುತ್ತಿಟ್ಟಳು,

"ಥ್ಯಾಂಕ್ಸ್ ಚಿಕ್ಕಿ ... ನಿಮ್ಮ ಮಾತು ಸತ್ಯ.. ಇಂದು ನನ್ನನ್ನು ನಾನೇ ಕಾಪಾಡಿಕೊಂಡೆ.. ಧೈರ್ಯದಿಂದ ಹೋರಾಡಿದೆ... ನಂಗೆ ನೆಮ್ಮದಿ ಸಂತೋಷ ಆಯಿತು... ಇದು ನಿಮ್ಮಿಂದಾಗಿ..." ಎನ್ನುತ್ತಾ ನನ್ನನ್ನು ತಬ್ಬಿಕೊಂಡಾಗ ಅವಳ ಮುಖದಲ್ಲಿ ಎಂದಿನ ಉಲ್ಲಾಸ ಲವಲವಿಕೆ ತುಂಬಿಕೊಂಡಿತ್ತು, ನೀಲಿ ಕಣ್ಣುಗಳು ಫಳಫಳನೆ ಹೊಳೆಯುತ್ತಿದ್ದವು...

* * * *

ರುಚಿಕರವಾದ ಅವಲಕ್ಕಿ ಕಟ್ಲೆಟ್



ಬೇಕಾಗುವ ಪದಾರ್ಥಗಳು...

- ತೆಳುವಾದ ಅವಲಕ್ಕಿ- 1 ಬಟ್ಟಲು
- ಆಲೂಗಡ್ಡೆ (ಬೇಯಿಸಿದ್ದು)- 2
- ಅರಿಶಿನದ ಪುಡಿ- ಕಾಲು ಚಮಚ
- ಖಾರದ ಪುಡಿ- ಕಾಲು ಚಮಚ
- ಗರಂ ಮಸಾಲ- ಕಾಲು ಚಮಚ
- ಆಮ್ ಚೂರ್ ಪುಡಿ- ಕಾಲು ಚಮಚ
- ಚಾಟ್ ಮಸಾಲ- ಕಾಲು ಚಮಚ
- ಶುಂಠಿ, ಬೆಳ್ಳುಳ್ಳಿ- ಪೇಸ್ಟ್ ಸ್ವಲ್ಪ
- ಕಾಳು ಮೆಣಸಿನ ಪುಡಿ- ಕಾಲು ಚಮಚ
- ಕಾರ್ನ್ ಫ್ಲೋರ್- 3 ಚಮಚ
- ಬ್ರೆಡ್ ಕ್ರಂಬ್ಸ್-3 ಚಮಚ
- ಕೊತ್ತಂಬರಿ ಸೊಪ್ಪು- ಸ್ವಲ್ಪ
- ಮೈದಾ ಹಿಟ್ಟು- ಒಂದು ಚಮಚ
- ಎಣ್ಣೆ- ಕರಿಯಲು ಅಗತ್ಯವಿದ್ದಷ್ಟು
- ಉಪ್ಪು- ರುಚಿಗೆ ತಕ್ಕಷ್ಟು

ಮಾಡುವ ವಿಧಾನ...

ತೆಳು ಅವಲಕ್ಕಿಯನ್ನು ತೆಗೆದುಕೊಂಡು ಅದನ್ನು ನೀರಿನಲ್ಲಿ ತೊಳೆದ ತಕ್ಷಣವೇ ಒಂದು ಅಗಲವಾದ ಪಾತ್ರೆಗೆ ಹಾಕಿಕೊಳ್ಳಬೇಕು.

ಅದೇ ಪಾತ್ರೆಗೆ ಎರಡು ಬೇಯಿಸಿದ ಆಲೂಗಡ್ಡೆ, ಅರಿಶಿನ, ಖಾರದ ಪುಡಿ, ಗರಂ ಮಸಾಲ, ಆಮ್ ಚೂರ್ ಪುಡಿ (ಮಾವಿನಹಣ್ಣಿನ ಪುಡಿ), ಚಾಟ್ ಮಸಾಲ, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ ಸೊಪ್ಪು, ಕಾಳು ಮೆಣಸಿನ ಪುಡಿ ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ನೀರು ಹಾಕದಂತೆ ಚಪಾತಿ ಹಿಟ್ಟಿನ ಹದಕ್ಕಿಂತ ಕಡಿಮೆ ಹದದಲ್ಲಿ ಕಲೆಸಿಕೊಳ್ಳಬೇಕು. ಮತ್ತೊಂದು ಪಾತ್ರೆಗೆ ಕಾರ್ನ್ ಫ್ಲೋರ್, ಮೈದಾಹಿಟ್ಟು, ಮೆಣಸಿನ ಪುಡಿ, ಉಪ್ಪು, ನೀರು ಹಾಕಿ ದೋಸೆ ಹಿಟ್ಟಿನ ಹದಕ್ಕೆ ಮಿಶ್ರಣ ಮಾಡಿಕೊಳ್ಳಬೇಕು. ಇದೇ ಮಿಶ್ರಣಕ್ಕೆ ಈ ಹಿಂದೆ ಮಾಡಿದ್ದ ಮಿಶ್ರಣವನ್ನು ದಪ್ಪವಾಗಿ ಚಪ್ಪಟೆ ಆಕಾರದಲ್ಲಿ ಮಾಡಿ ಹಾಕಬೇಕು. ತಕ್ಷಣವೇ ತೆಗೆದು ಬ್ರೆಡ್ ಪುಡಿಯೊಳಗೆ ಅದ್ದಿ ಸ್ವಲ್ಪವೇ ಎಣ್ಣೆ ಹಾಕಿಕೊಂಡು ಬಂಗಾರದ ಬಣ್ಣ ಬರುವವರೆಗೆ ಕರಿದುಕೊಂಡರೆ ರುಚಿಕರವಾದ ಅವಲಕ್ಕಿ ಕಟ್ಲೆಟ್ ಸವಿಯಲು ಸಿದ್ಧ.

ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ನಂಜನಗೂಡು, ಜೂ.3– ನಿಗದಿತ ವೇಳೆಗೆ ಸರಿಯಾಗಿ ಸಾರಿಗೆ ಬಸ್ ಸೇವೆ ದೊರಕುತ್ತಿಲ್ಲ. ಹೀಗಾಗಿ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ತಾಲೂಕಿನ ಸಿಂಗಾರಿಪುರ ಗ್ರಾಮಸ್ಥರು ಸಾರಿಗೆ ಬಸ್ ತಡೆದು ಶನಿವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಬೆಳಗ್ಗೆ 8 ಗಂಟೆಗೆ ಸಿಂಗಾರಿಪುರಕ್ಕೆ ಬರಬೇಕಾದ ಬಸ್ ನಿಗದಿತ ಸಮಯಕ್ಕೆ ಬರುವುದಿಲ್ಲ. ಬೆಳಗ್ಗೆ ಹಾಗೂ ಸಂಜೆ ಮಾತ್ರ ಬಸ್ ಇದೆ. ಹೀಗಾಗಿ ಈ ಮಧ್ಯೆ ಇನ್ನೂ ಮೂರ್ನಾಲ್ಕು ಬಸ್‌ಗಳು ಸಂಚರಿಸಲು ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ಅಲ್ಲದೇ ಸ್ಥಳಕ್ಕೆ ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಬರುವವರೆಗೂ ಬಸ್ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಯುವ ಮುಖಂಡ ಆರ್.ಸುಂದರೇಶ್ ಮಾತನಾಡಿ, ನಂಜನಗೂಡು, ದೇವರಸನಹಳ್ಳಿ, ಉಪ್ಪಿನಹಳ್ಳಿ, ವಾಡ್ರಹಳ್ಳಿ, ಗೋಣಿಗಾಲ ಮೂಲಕ ಸಿಂಗಾರಿಪುರಕ್ಕೆ ಬೆಳಗ್ಗೆ ಹಾಗೂ ಸಂಜೆ ಮಾತ್ರ ಸಾರಿಗೆ ಬಸ್ ಬರಲಿದೆ. ಬೆಳಗ್ಗೆ 8 ಗಂಟೆಗೆ ಸಿಂಗಾರಿಪುರಕ್ಕೆ ಬರಬೇಕಾದ ಬಸ್ ನಿಗದಿತ ಸಮಯಕ್ಕೆ ಬರುವುದಿಲ್ಲ. ಇದರಿಂದ ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ಕೆಲಸಕ್ಕೆ ತೆರಳುವ ಗ್ರಾಮಸ್ಥರು ಸರಿಯಾದ ಸಮಯಕ್ಕೆ ತಲುಪಲು ಆಗದೇ ಪರಿತಪಿಸುವಂತಾಗಿದೆ. ಈ ಸಂಬಂಧ ಅನೇಕ ಬಾರಿ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಬಸ್ ಸೇವೆ ದಿನಕ್ಕೆ 2 ಬಾರಿ ಮಾತ್ರ ಇರುವುದರಿಂದ ಈ ಭಾಗದ ಜನರು ಆಟೋ ರಿಕ್ಷಾಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಆಟೋದವರು ಹೆಚ್ಚು ಪ್ರಯಾಣಿಕರನ್ನು ತುಂಬಿಕೊಂಡು ಹೋಗುವುದು ಸಾಮಾನ್ಯವಾಗಿದ್ದು, ಇದರಿಂದ ಅನಾಹುತ ಸಂಭವಿಸುವ ಸಾಧ್ಯತೆಗಳಿವೆ. ಹೀಗಾಗಿ ಗ್ರಾಮಕ್ಕೆ ಸಮರ್ಪಕ ಸಾರಿಗೆ ಬಸ್ ಸೌಲಭ್ಯ ಕಲ್ಪಿಸುವ ಮೂಲಕ ಈ ಭಾಗದ ಗ್ರಾಮಗಳ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಎಸ್‌ಆರ್‌ಟಿಸಿ ನಿಯಂತ್ರಣಾಧಿಕಾರಿ ಹರ್ಷ, ಡಿಪೋ ವ್ಯವಸ್ಥಾಪಕರು ಮೇಲಧಿಕಾರಿಗಳ ಸಭೆಯಲ್ಲಿ ಭಾಗವಹಿಸಲು ತೆರಳಿರುವುದರಿಂದ ಅವರು ಇಲ್ಲಿಗೆ ಆಗಮಿಸಲು ಸಾಧ್ಯವಾಗಿಲ್ಲ. ಆದರೂ ನಿಮ್ಮ ಬೇಡಿಕೆಯನ್ನು ಅವರ ಗಮನಕ್ಕೆ ತರಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವ ಜೊತೆಗೆ ನಿಗದಿತ ಸಮಯಕ್ಕೆ ಬಸ್ ಸೇವೆ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಮನವೊಲಿಸಿದ ಬಳಿಕ ಗ್ರಾಮಸ್ಥರು ಬಸ್ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಪ್ರತಿಭಟನೆಯಲ್ಲಿ ಗ್ರಾಮ [illegible] ಗ್ರಾಮಸ್ಥರಾದ ಹರೀಶ್, ಪ್ರಕಾಶ್, ರಂಗಸ್ವಾಮಿ, ಜಯಕುಮಾರ್ ಸೇರಿದಂತೆ ಇತರರಿದ್ದರು.

ತಿ.ನರಸೀಪುರದಲ್ಲಿ ಸಿಐಟಿಯು ಸ್ಥಾಪನಾ ದಿನಾಚರಣೆ



ತಿ.ನರಸೀಪುರ, ಜೂ.3– ಪಟ್ಟಣದಲ್ಲಿ ಸಿಐಟಿಯು ಸ್ಥಾಪನಾ ದಿನಾಚರಣೆ ಪ್ರಯುಕ್ತ ತಾಲೂಕು ಸಮಿತಿಯಿಂದ ಸಂಘಟನೆಯ ಧ್ವಜಾರೋಹಣ ನಡೆಯಿತು.

ಪಟ್ಟಣದ ಭೈರಾಪುರ ಬಳಿ ಇರುವ ಸಂಘದ ಕಚೇರಿ ಮುಂಭಾಗ ಸಿಐಟಿಯು ಸಂಘಟನೆಯ ಧ್ವಜವನ್ನು ಹಾರಿಸುವ ಮೂಲಕ ಸ್ಥಾಪನಾ ದಿನವನ್ನು ಆಚರಿಸಲಾಯಿತು. ಕಟ್ಟಡ ಕಾರ್ಮಿಕ ಸಂಘಟನೆ ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ಸಿ.ಕೃಷ್ಣ ಸ್ವಾಗತಿಸಿದರು. ಕಾರ್ಮಿಕರ ಮುಖಂಡ ಶಿವಲಿಂಗಶೆಟ್ಟಿ ಧ್ವಜಾರೋಹಣ ನೆರವೇರಿಸಿದರು.

ಕಟ್ಟಡ ಕಾರ್ಮಿಕರ ಸಂಘಟನೆ ತಾಲೂಕು ಅಧ್ಯಕ್ಷ ಸಿ.ಬಿ.ನವೀನ್ ಕುಮಾರ್ ಕಾರ್ಮಿಕರ ಸಮಸ್ಯೆಗಳ ಕುರಿತು ಮಾತನಾಡಿದರು. ಈ ವೇಳೆ ಮಲ್ಲೇಶ್, ತಾಲೂಕು ಸಮಿತಿ ತಲಕಾಡು ಮಹೇಶ್, ಚಿಕ್ಕಲಕ್ಷ್ಮಿಪುರ ಕುಮಾರ್ ಸೇರಿದಂತೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಜನಧನ್ ಖಾತೆ ಮೂಲಕ ಕುಟುಂಬದ ಭದ್ರತೆ ಕಾಪಾಡಿ

ಎಸ್‌ಬಿಐನ ಪ್ರಧಾನ ವ್ಯವಸ್ಥಾಪಕ ಅನುರಾಗ್ ಜೋಶಿ



ಹೆಚ್.ಡಿ.ಕೋಟೆ, ಜೂ.3– ಕೇಂದ್ರ ಸರ್ಕಾರ ಜನರ ಅನುಕೂಲಕ್ಕಾಗಿ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಿದ್ದು, ಪ್ರತಿಯೊಬ್ಬರೂ ಜನಧನ್ ಖಾತೆ ಹೊಂದುವ ಮೂಲಕ ಕುಟುಂಬದ ಭದ್ರತೆ ಕಾಪಾಡಿಕೊಳ್ಳಬೇಕು ಎಂದು ಬೆಂಗಳೂರು ಎಸ್‌ಬಿಐನ ಪ್ರಧಾನ ವ್ಯವಸ್ಥಾಪಕ ಅನುರಾಗ್ ಜೋಶಿ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಆಯೋಜಿಸಿದ್ದ ಸಾಮಾಜಿಕ ಭದ್ರತಾ ಯೋಜನೆಯಡಿ ಜನ್ ಸುರಕ್ಷಾ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಯೋಜನೆಯಡಿ ವಾರ್ಷಿಕ 20 ರೂ.ಗಳನ್ನು ಕಟ್ಟಿದರೇ, ಅಕಸ್ಮಾತ್ ಅಪಘಾತದಲ್ಲಿ ಮೃತಪಟ್ಟರೆ 2 ಲಕ್ಷ ರೂ. ಹಾಗೂ ಭಾಗಶಃ ಅಂಗವಿಕಲರಾದರೆ 1 ಲಕ್ಷ ರೂ. ವಿಮೆ ದೊರೆಯಲಿದೆ. ಇದು ಕುಟುಂಬದ ಸಂಕಷ್ಟಕ್ಕೆ ನೆರವಾಗಲಿದೆ ಎಂದರು.

ಸ್ತ್ರೀ ಸಬಲೀಕರಣ ಮತ್ತು ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಹಾಗೂ ವ್ಯಾಪಾರಸ್ಥರಿಗೆ ವಿವಿಧ ಸಾಲ ಸೌಲಭ್ಯಗಳು ದೊರೆಯಲಿದ್ದು, ಇದರ ಸದುಪಯೋಗ ಪಡೆಯುವಂತೆ ತಿಳಿಸಿದರು.

ಸಹಾಯಕ ಪ್ರಧಾನ ವ್ಯವಸ್ಥಾಪಕ ದೊರೆರಾಜ್ ಮಾತನಾಡಿ, ಜನಧನ್ ಖಾತೆ ಹೊಂದಿಲ್ಲದಿದ್ದರೇ ಇಂದೇ ಜನಧನ್ ಖಾತೆ ತೆರೆಯಬೇಕು. ಖಾತೆ ತೆರೆದು ರುಪೇ ಕಾರ್ಡ್ ಪಡೆಯಬೇಕು. ಇದರಿಂದ ಸಾಕಷ್ಟು ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್ ಶತಮಾನಗಳಿಂದ ಸೇವೆ ಸಲ್ಲಿಸುತ್ತಾ ಬಂದಿದೆ. ಈ ಬ್ಯಾಂಕ್ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಗಳನ್ನು ಸಮಾಜದ ಕಟ್ಟ ಕಡೆ ವ್ಯಕ್ತಿಗೂ ತಲುಪಿಸುವ ಕಾರ್ಯದಲ್ಲಿ ತೊಡಗಿದೆ. ಇದಕ್ಕಾಗಿ ಪ್ರತಿಯೊಬ್ಬರೂ ಜನ್‌ಧನ್ ಖಾತೆ ತೆರೆಯಬೇಕಿರುವುದರಿಂದ ನಾವು ಬ್ಯಾಂಕ್ ವತಿಯಿಂದ ಸಿಎಸ್‌ಪಿ ಕೇಂದ್ರವನ್ನು ತೆರೆಯಲಾಗಿದ್ದು, ಇವರು ನಿಮ್ಮ ಮನೆ ಬಾಗಿಲಿಗೆ ಬಂದು ಖಾತೆ ತೆರೆಯಲಿದ್ದಾರೆ ಎಂದು ತಿಳಿಸಿದರು.

ಉಪ ಪ್ರಧಾನ ವ್ಯವಸ್ಥಾಪಕ ರಾಜಶೇಖರ್ ರಾಘವನ್, ಪ್ರಾದೇಶಿಕ ವ್ಯವಸ್ಥಾಪಕ ಜನಾರ್ಧನ್ ಕೋಟ ಸಂಜೀವರಾಯಿಡು, ಪ್ರಭಾಕರ್ ರಮೇಶ್, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ ಸಮಾಜ ಕಲ್ಯಾಣಾಧಿಕಾರಿ ರಾಮಸ್ವಾಮಿ, ಶಾಖಾ ವ್ಯವಸ್ಥಾಪಕ ಭಾನುಪ್ರಕಾಶ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕಿ ಭಾರತಿ, ಬ್ಯಾಂಕ್ ಸಿಬ್ಬಂದಿಗಳಾದ ಆನಂದಕುಮಾರ್, ಪುಟ್ಟಸ್ವಾಮಿ, ಚೆಲುವಯ್ಯ, ಸಿದ್ದರಾಜು, ಶಿವಕುಮಾರ್, ನಿಶಾಂತ್, ಪುಟ್ಟಸ್ವಾಮಿ, ಚಂದ್ರಕುಮಾರ್, ನಂದಿನಿ ಇದ್ದರು.

ನಿಮ್ಮ ಸೇವೆಯನ್ನು ಸಾರ್ವಜನಿಕರಿಗೆ ಮುಡಿಪಾಗಿಡಿ

ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸೋಮಣ್ಣ



ಹೆಚ್.ಡಿ.ಕೋಟೆ, ಜೂ.3– ನಿಮ್ಮ ಸೇವೆಯನ್ನು ಸಾರ್ವಜನಿಕರಿಗೆ ಮುಡಿಪಾಗಿಡಬೇಕು ಎಂದು ಆಸ್ಪತ್ರೆ ಸಿಬ್ಬಂದಿಗೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸೋಮಣ್ಣ ತಿಳಿಸಿದರು.

ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಫ್ಲಾರೆನ್ಸ್ ನೈಟಿಂಗೇಲ್ ಜನ್ಮ ದಿನಾಚರಣೆ ಹಾಗೂ ಶುಶ್ರೂಷಾಧಿಕಾರಿಗಳ ದಿನಾಚರಣೆಯಲ್ಲಿ ಮಾತನಾಡಿದ ಅವರು, ಫ್ಲಾರೆನ್ಸ್ ನೈಟಿಂಗೇಲ್ ತಮ್ಮ ಸೇವೆಯನ್ನು ಜನತೆಗಾಗಿ ಮುಡುಪಾಗಿಟ್ಟು ಹಗಲಿರುಳೆನ್ನದೇ ಶ್ರದ್ಧೆಯಿಂದ ಸೇವೆ ಸಲ್ಲಿಸುತ್ತಿದ್ದರು. ಅದಕ್ಕಾಗಿ ಅವರನ್ನು 'ಲೇಡಿ ವಿತ್ ದಿ ಲ್ಯಾಂಪ್' ಎಂದು ಕರೆಯುತ್ತಿದ್ದರು. ಅವರು ತಮಗಾಗಿ ಏನನ್ನು ಬಯಸದೇ ಬೇರೆಯವರ ಸೇವೆಯಲ್ಲಿ ತೊಡಗಿದ್ದರು. ನಾವೂ ಕೂಡ ಅವರ ತತ್ವಾದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾಗಿದಾಗ ಮಾತ್ರ ಇಂತಹ ಮಹನೀಯರ ಕಾರ್ಯಕ್ರಮಗಳು ಅರ್ಥಪೂರ್ಣವಾಗುತ್ತವೆ ಎಂದರು.

ಇದೇ ವೇಳೆ ಫ್ಲಾರೆನ್ಸ್ ನೈಟಿಂಗೇಲ್ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಅಲ್ಲದೇ ಪರ್ವತಾರೋಹಿಗಳಾದ ಶುಶ್ರೂಷಾಧಿಕಾರಿಗಳಾದ ಅಗತ ಸ್ಮಿತಾ ಡಿಸೋಜಾ, ಸಬಿ ಹಾ, ಸರ್ವಮಂಗಳ, ಗೀತಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಶುಶ್ರೂಷಾ ಜಿಲ್ಲಾ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್ ಗಂಗೊಳ್ಳಿ, ಜಿಲ್ಲಾ ಶುಶ್ರೂಷಾಧಿಕಾರಿ ಹೇಮಲತಾ, ಡಾ.ಪೂರ್ಣಿಮಾ, ಡಾ.ಚಂದ್ರಶೇಖರ್, ಪರಿಮಳ ಗಾಣಂಕಿ, ಪುಷ್ಪವತಿ, ರಾಜಮ್ಮ, ವನಜಾಕ್ಷಿ, ವಿಜಯಲಕ್ಷ್ಮಿ, ಮೀನಾಕ್ಷಿ, ಮಧು, ಜಯಂತಿ, ಅಂಬಿಕಾ, ಶೃತಿ, ಸುನೀತಾ, ಮೀನಾಕ್ಷಿ, ರಘು, ಉಮೇಶ್, ಸಿರಾಜುದ್ದೀನ್, ಸಂತಿಯ ಫರ್ನಾಂಡಿಸ್, ನಾಗೇಶ್, ಪುಟ್ಟರಾಜು, ಪದ್ಮಾವತಿ, ಕವಿತಾ, ನಂದಿನಿ, ರಾಣಿ, ಸರೋಜಿನಿ ಇನ್ನಿತರರಿದ್ದರು.

ಬಸವರಾಜುರನ್ನು ಎಂಎಲ್‌ಸಿ ಮಾಡಲು ಒತ್ತಾಯ




ನಂಜನಗೂಡು, ಜೂ.3– ನೂತನ ಕಾಂಗ್ರೆಸ್ ಸರ್ಕಾರದಲ್ಲಿ ನಾಯಕ ಸಮುದಾಯದ ಪ್ರಭಾವಿ ಮುಖಂಡ ಎಸ್.ಸಿ.ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ವರುಣಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಮತ್ತು ಅವರ ಅಭಿಮಾನಿ ಬಳಗದ ಸದಸ್ಯರು ಒತ್ತಾಯಿಸಿದರು.

ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಎಸ್.ಸಿ.ಬಸವರಾಜು ಅವರು ಮೈಸೂರು ಜಿಪಂ ಅಧ್ಯಕ್ಷರಾಗಿ, ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿ, ಕೆಪಿಸಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ 3 ದಶಕಗಳಿಂದ ಮೈಸೂರು ಭಾಗದಲ್ಲಿ ಉತ್ತಮ ಸಂಘಟಕರಾಗಿ ಸೇವೆ ಸಲ್ಲಿಸಿ ಪಕ್ಷ ಅಧಿಕಾರಕ್ಕೆ ಬರಲು ಶ್ರಮಿಸಿದ್ದಾರೆ. ಜೊತೆಗೆ ಎಲ್ಲಾ ಜಾತಿ, ಜನಾಂಗದವರೊಂದಿಗೂ ಸಹ ಉತ್ತಮ ಬಾಂಧವ್ಯ ಇಟ್ಟುಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ನಿರ್ವಹಿಸಿದ್ದಾರೆ. ಮೈಸೂರು ಭಾಗದ ಎಸ್ಟಿ ಸಮುದಾಯದ ಯಾವ ನಾಯಕರಿಗೂ ಇದುವರೆಗೂ ವಿಧಾನ ಪರಿಷತ್ ಸದಸ್ಯರಾಗುವ ಅವಕಾಶ ದೊರೆತಿಲ್ಲ ಹೀಗಾಗಿ ಈ ಬಾರಿ ಅವರ ಹಿರಿತನ ಮತ್ತು ಸೇವೆ ಪರಿಗಣಿಸಿ ಅವರನ್ನು ಎಂಎಲ್‌ಸಿ ಮಾಡುವಂತೆ ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹ ಎಸ್.ಸಿ.ಬಸವರಾಜು ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕೆಂಬ ಹಂಬಲ ಹೊಂದಿದ್ದಾರೆ. ಜೊತೆಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸಹ ಬಸವರಾಜು ಅವರಿಗೆ ಸ್ಥಾನಮಾನ ನೀಡುವಂತೆ ಕೋರಿದ್ದಾರೆ. ಹೀಗಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಪಕ್ಷದ ಮುಖಂಡರು ಎಸ್.ಸಿ.ಬಸವರಾಜು ಅವರನ್ನು ಎಂಎಲ್‌ಸಿ ಮಾಡುವುದು ಖಚಿತ. ಆ ಮೂಲಕ ಅವರು ವಿಧಾನಸಭೆ ಪ್ರವೇಶಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಹೊಸಕೋಟೆ ಬಸವರಾಜು, ಗೋನಹಳ್ಳಿ ಕುಮಾರ್, ಶ್ರೀನಿವಾಸ್, ಶಿವಕುಮಾರ್, ಬಿ.ಪಿ.ಮಹದೇವು, ನಾಗೇಶ್, ಶಿವಣ್ಣ, ಕಾಳಿಂಗಪ್ಪ, ಲೋಕೇಶ್, ಶಿವಾರಾಮು, ಸ್ವಾಮಿ, ನಾರಾಯಣ್ ಸೇರಿದಂತೆ ನೂರಾರು ಅಭಿಮಾನಿ ಬಳಗದವರು ಇದ್ದರು.



ತಿ.ನರಸೀಪುರ ತಾಲೂಕಿನ ಮಲಿಯೂರು ಗ್ರಾಪಂ ಸದಸ್ಯರು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಸನ್ಮಾನಿಸಿದರು. ಈ ವೇಳೆ ಸದಸ್ಯರಾದ ಮಹದೇವಮ್ಮ, ದೊಳ್ಳಯ್ಯ, ಭಾಗ್ಯ, ಮುಖಂಡರಾದ ಮಹದೇವ, ಪ್ರಕಾಶ, ಪ್ರಸನ್ನ, ಕೆಂಪಯ್ಯ ಇನ್ನಿತರರಿದ್ದರು.

ಪ್ರವೇಶ ಅರ್ಜಿ ಆಹ್ವಾನ

ಮೈಸೂರು, ಜೂನ್ 3– ರವಿವರ್ಮ ಚಿತ್ರಕಲಾ ಶಾಲೆ 2023–2024 ನೇ ಸಾಲಿನ 2 ವರ್ಷದ ಫೌಂಡೇಷನ್ ಹಾಗೂ ಬಿ.ವಿ.ಎ. (ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್) 4 ವರ್ಷದ ಪದವಿ ಶಿಕ್ಷಣದಲ್ಲಿ ರಾಷ್ಟ್ರೀಯ ನೀತಿ ಅಡಿಯಲ್ಲಿ ಚಿತ್ರಕಲೆ ಶಿಲ್ಪಕಲೆ, ಅನ್ವಯಿಕ ಕಲೆ ವಿಭಾಗಗಳಿಗೆ ನೇರ ಪ್ರವೇಶ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್ 25 ಕೊನೆಯ ದಿನಾಂಕವಾಗಿರುತ್ತದೆ. ತಪ್ಪಿದ್ದಲ್ಲಿ ಜೂನ್ 26, ಜುಲೈ 20 ರವರೆಗೆ ದಂಡ ಸಹಿತ ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 97434 41878 ನಂಬರ್‌ಗೆ ಸಂಪರ್ಕಿಸಬಹುದು.

ನಾಳೆ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ 95ನೇ ಗಣರಾಧನೆ



ಬೆಟ್ಟದಪುರ, ಜೂ.3– ಗ್ರಾಮದ ಸ್ವತಂತ್ರ ಸಲಿಲಾಖ್ಯ ಮಠದಲ್ಲಿ ಗಣರಾಧನಾ ಮಹೋತ್ಸವ ಹಾಗೂ ಶಿವಾನುಭವ ಸಂದೇಶ ಜೂ.5ರಂದು ನಡೆಯಲಿದೆ ಎಂದು ಶ್ರೀಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ತಿಳಿಸಿದ್ದಾರೆ.

ಸ್ವತಂತ್ರ ಸಲ್ಲಿಲಾಖ್ಯ ಮಠದ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ 95ನೇ ಗಣರಾಧನೆ ಹಾಗೂ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ 42ನೇ ಗಣರಾಧನೆ, ಕನ್ನಡ ಮಠದ 214ನೇ ಸ್ಥಾಪನಾ ವರ್ಷಾಚರಣೆ ಕಾರ್ಯಕ್ರಮ ಹಾಗೂ ಶಿವಾನುಭವ ಶರಣರ ಹಿತವಚನ ಸಮ್ಮೇಳನ ನಡೆಯಲಿದೆ.

ತುಮಕೂರಿನ ಶ್ರೀಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಶಿವಮೊಗ್ಗ ಜಿಲ್ಲೆ ಕೊಪ್ಪದ ಗೌರಿಗದ್ದೆಯ ಶ್ರೀ ವಿನಯ್ ಗುರೂಜಿ ಅಧ್ಯಕ್ಷತೆ ವಹಿಸುವರು. ಪಶುಸಂಗೋಪನಾ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಇದೇ ವೇಳೆ ತಾಲೂಕಿನ ಮಠದ ಭಕ್ತರ ಪರವಾಗಿ ಹಾಗೂ ಸಾರ್ವಜನಿಕರ ಪರವಾಗಿ ಸಚಿವರನ್ನು ಸನ್ಮಾನಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಚಂದ್ರಶೇಖರ ಸ್ವಾಮೀಜಿ, ಗುಬ್ಬಿ ತಾಲೂಕು ಶ್ರೀ ಮುರುಘರಾಜೇಂದ್ರ ಮಹಾ ಸಂಸ್ಥಾನ ಮಠ ಮರಿಯಾಲ ಗುರುಗಳಾದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ಶ್ರೀ ಚನ್ನಬಸವ ಸ್ವಾಮೀಜಿ, ಚಲನಚಿತ್ರ ನಟ, ಕಾಮಿಡಿ ಕಿಲಾಡಿ, ನಿರೂಪಕ ಮಾಸ್ಟರ್ ಆನಂದ್ ಹಾಗೂ ಪಿರಿಯಾಪಟ್ಟಣದ ವೀರಶೈವ ಲಿಂಗಾಯತ ಯುವ ಘಟಕದ ಅಧ್ಯಕ್ಷ ಕಗ್ಗುಂಡಿ ಮಂಜುನಾಥ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಚಿಕ್ಕವೀರ ದೇಶಿಕೇಂದ್ರ ಮತ್ತು ಚೆನ್ನವೀರ ದೇಶಿಕೇಂದ್ರ ಸ್ವಾಮೀಜಿಗಳ ಭಾವಚಿತ್ರವನ್ನು ಶ್ರೀಮಠದ ಆವರಣದಿಂದ ಬೆಟ್ಟದಪುರದ ಪ್ರಮುಖ ಬೀದಿಗಳಲ್ಲಿ ಕಲಾತಂಡ, ವೀರಗಾಸೆ ವೃಂದದ ನೃತ್ಯದೊಂದಿಗೆ ಮೆರವಣಿಗೆ ಮಾಡಲಾಗುವುದು. ನಂತರ ಮಠದ ಆವರಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಮರಮ್ಮ ನಿಧನ



ಸುತ್ತೂರು, ಜೂ.3– ನಂಜನಗೂಡು ತಾಲೂಕಿನ ಚಿನ್ನಂಬಳ್ಳಿ ಗ್ರಾಮದ ನಿವಾಸಿ ಮರಮ್ಮ(70) ಶನಿವಾರ ನಿಧನರಾದರು. ಮೃತರು ಟಿಎಪಿಸಿಎಂಎಸ್ ಸದಸ್ಯ ರಾಜು ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೂಪ



ಹುಣಸೂರು, ಜೂ.3– ನಗರದ ಗೋಕುಲ ರಸ್ತೆಯಲ್ಲಿರುವ ಮೋನಿಕಾ ಹೋಟೆಲ್ ಮಾಲೀಕ ಮಂಜುನಾಥ್ ಅವರ ಪತ್ನಿ ರೂಪ(37) ಶನಿವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಆರ್.ನಗರ ತಾಲೂಕು ಭೇರ್ಯ ಹೋಬಳಿ ಹರಿಹರಪುರ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಒಡಿಸ್ಸಾ ರೈಲು ದುರಂತದಿಂದ ಅತಂತ್ರರಾದ

ಹುಣಸೂರು ಸೇರಿ ರಾಜ್ಯದ 38 ವಾಲಿಬಾಲ್ ಆಟಗಾರರಿಗೆ ಸರ್ಕಾರ ಸಹಾಯ

● ಕೋಲ್ಕತ್ತಾದಿಂದ ರಾಜ್ಯಕ್ಕೆ ಬರಲು ವಿಮಾನ ವ್ಯವಸ್ಥೆ ● ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಮಂಜುನಾಥ್ ಪ್ರಯತ್ನದ ಫಲ







ಹುಣಸೂರು, ಜೂ.3–ಒಡಿಸ್ಸಾ ರೈಲು ದುರಂತದ ಕಾರಣದಿಂದ ಹಲವಾರು ರೈಲುಗಳ ಸಂಚಾರ ರದ್ದಾದ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಬರಲು ಸಾಧ್ಯವಾಗದೇ ಕೋಲ್ಕತ್ತಾದ ಹೌರಾ ರೈಲು ನಿಲ್ದಾಣದಲ್ಲಿ ದಿಕ್ಕು ತೋಚದೆ ಪರಿತಪಿಸುತ್ತಿದ್ದ ಹುಣಸೂರಿನವರೂ ಸೇರಿದಂತೆ ಕರ್ನಾಟಕದ 38 ವಾಲಿಬಾಲ್ ಆಟಗಾರರೊಂದಿಗೆ ಮೊಬೈಲ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಮಾತನಾಡಿ ಧೈರ್ಯ ತುಂಬಿದ್ದಲ್ಲದೇ ಕ್ರೀಡಾಪಟುಗಳು ಬೆಂಗಳೂರಿಗೆ ಆಗಮಿಸಲು ವಿಮಾನದ ವ್ಯವಸ್ಥೆ ಮಾಡಿದ್ದಾರೆ.

ಈ ತಂಡದಲ್ಲಿ ಹುಣಸೂರಿನ ಆಕಾಶ್, ಗೌತಮ್, ಪುಟ್ಟಸ್ವಾಮಿ, ಎಸ್.ಅರುಣ್‌ಕುಮಾರ್, ಬಿ.ರಾಮು, ಜೆ.ಮನೋರಂಜನ್, ಧರ್ಮಾಪುರದ ಮಹದೇವ ಮೂರ್ತಿ, ಪಿರಿಯಾಪಟ್ಟಣದ ಮಂಜುನಾಥ್, ಕೆ.ಆರ್.ನಗರದ ದುಷ್ಯಂತ್ ಕೂಡ ಇದ್ದಾರೆ. ಹುಣಸೂರು ಭಾಗದ ಕ್ರೀಡಾಪಟುಗಳು ಹೌರಾ ರೈಲು ನಿಲ್ದಾಣದಲ್ಲಿ ಪರಿತಪಿಸುತ್ತಿದ್ದು, ಅವರನ್ನು ಸುರಕ್ಷಿತವಾಗಿ ಕರೆತರಬೇಕೆಂದು ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಮತ್ತು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರುಗಳು ಮುಖ್ಯಮಂತ್ರಿಗಳಲ್ಲಿ ವಿನಂತಿಸಿದ್ದರು.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಾಲಿಬಾಲ್ ಆಟಗಾರ ಮಹದೇವಸ್ವಾಮಿ, "ರೈಲು ಅಪಘಾತದಿಂದಾಗಿ ನಾವು ಬೆಂಗಳೂರಿಗೆ ವಾಪಸ್ಸಾಗಲು ತಡವಾಗುತ್ತಿದೆ ಎಂದು ಸಾಮಾಜಿಕ ಜಾಲ ತಾಣದಲ್ಲಿ ನಮ್ಮ ತಂಡ ತಿಳಿಸಿದ್ದಲ್ಲದೇ ನಮ್ಮವರಿಗೆ ಸಹಾಯ ಮಾಡಬೇಕೆಂದು ಮನವಿ ಮಾಡಲಾಗಿತ್ತು. ನಮ್ಮ ಮನವಿಯನ್ನು ಗಮನಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ ಮತ್ತು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನಮ್ಮನ್ನು ಮೊಬೈಲ್ ಮೂಲಕ ಸಂಪರ್ಕಿಸಿ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆ. ಜಿ.ಡಿ.ಹರೀಶ್‌ಗೌಡರು ಜಿಲ್ಲಾಧಿಕಾರಿ ಮತ್ತು ಸಚಿವರೊಂದಿಗೆ ಚರ್ಚಿಸಿ ಸಹಕರಿಸುವ ಬಗ್ಗೆ ಮಾಹಿತಿ ನೀಡಿದ್ದರು. ಹೆಚ್.ಪಿ.ಮಂಜುನಾಥ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಸಂತೋಷ್ ಲಾಡ್ ಅವರಿಂದ ತಮಗೆ ಕರೆ ಮಾಡಿಸಿದ್ದರು. ಎಲ್ಲರ ಸಹಕಾರದಿಂದ ಭಾನುವಾರ ಬೆಳಗ್ಗೆ 4.15ರ ವಿಮಾನದಲ್ಲಿ ಕರ್ನಾಟಕದ ಎಲ್ಲಾ ಕ್ರೀಡಾಪಟುಗಳು ಬೆಂಗಳೂರಿಗೆ ವಾಪಸ್ ಆಗಲಿದ್ದೇವೆ. ನಮಗೆ ಸಹಕಾರ ನೀಡಿದ ಸರ್ಕಾರ ಮತ್ತು ಎಲ್ಲರಿಗೂ ಧನ್ಯವಾದ" ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ವಾಲಿಬಾಲ್ ಅಸೋಸಿಯೇಷನ್ ಮತ್ತು ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಪಶ್ಚಿಮಬಂಗಾಳದ ಹೌರಾದಲ್ಲಿ ಮೇ 27 ರಿಂದ ಜೂನ್ 1ರವರೆಗೆ ಬಾಲಕ ಮತ್ತು ಬಾಲಕಿಯರ 45ನೇ ಸಬ್ ಜೂನಿಯರ್ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಶಿಪ್ ನಡೆದಿದ್ದು, ಇದರಲ್ಲಿ ಭಾಗವಹಿಸಲು ಕರ್ನಾಟಕದಿಂದ 38 ಆಟಗಾರರು ತೆರಳಿದ್ದರು. ಒಡಿಶಾದಲ್ಲಿ ಶುಕ್ರವಾರ ಸಂಜೆ ರೈಲು ಅಪಘಾತ ಸಂಭವಿಸಿದ್ದರಿಂದ ಈ ಮಾರ್ಗದ ರೈಲುಗಳ ಸಂಚಾರ ರದ್ದಾದ ಕಾರಣ ಈ ಎಲ್ಲಾ ಕ್ರೀಡಾಪಟುಗಳು ಹೌರಾ ರೈಲು ನಿಲ್ದಾಣದಲ್ಲಿ ಪರಿತಪಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆಲ ಆಟಗಾರರು ತಮ್ಮ ಸ್ಥಿತಿಯ ಬಗ್ಗೆ ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿದರೆ ಕ್ರೀಡಾಪಟುಗಳೊಂದಿಗೆ ತೆರಳಿದ್ದ ಕೋಚ್ ಕರ್ನಾಟಕ ವಾಲಿಬಾಲ್ ಅಸೋಸಿಯೇಷನ್ ಪದಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದರು. ಈ ಕ್ರೀಡಾಪಟುಗಳನ್ನು ವಿಮಾನದಲ್ಲಿ ಬೆಂಗಳೂರಿಗೆ ಕರೆತರಲು ರಾಜ್ಯ ಸರ್ಕಾರ ವ್ಯವಸ್ಥೆ ಕಲ್ಪಿಸಿದೆ.


ಕರ್ನಾಟಕ ವಿಧಾನ ಸಭೆಗೆ ಚಾಮರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿರುವ
ಇತಿಹಾಸ ಪ್ರಸಿದ್ಧ ಕನ್ನೇಗೌಡನಕೊಪ್ಪಲಿನ ಹೆಮ್ಮೆಯ ಮನೆ ಮಗ
ಕೆ.ಹರೀಶ್ ಗೌಡ ರವರಿಗೆ
ಅಭಿನಂದನೆಗಳು
ಶುಭಾಶಯಗಳನ್ನು ಕೋರುವವರು :
ಕನ್ನೇಗೌಡನಕೊಪ್ಪಲು ಹಾಗೂ ಜಯನಗರ
ಯಜಮಾನರುಗಳು, ತಾಯಂದಿರು, ಯುವಕರು ಹಾಗೂ ಹಿತೈಷಿಗಳು
Banni
STUDIO